# ಎಫೆಸದವರಿಗೆ

## *ಅಪೋಸ್ತಲನಾದ ಪೌಲನು ಬರೆದ ಪತ್ರಿಕೆ*

**ಲೇಖಕ:**

ಕರ್ತನಾದ ಯೇಸು ಕ್ರಿಸ್ತನ ಅಪೋಸ್ತಲನಾದ ಪೌಲನು.

**ದಿನಾಂಕ:**

ಸುಮಾರು ಕ್ರಿ.ಶ. 60.

**ವಿಷಯ:**

ಈ ಪತ್ರಿಕೆಯಲ್ಲಿ ಅನೇಕ ಮುಖ್ಯವಾದ ವಿಷಯಗಳಿವೆ: ವಿಶ್ವಾಸಿಗಳ ರಕ್ಷಣೆಯಲ್ಲಿ ಆತನ ಕೃಪೆಗೆ ಮಹಿಮೆಯನ್ನು ತರುವ ದೇವರ ಶಾಶ್ವತ ಉದ್ದೇಶ, ದೇವರ ಕೃಪೆಯಿಂದ ಕ್ರಿಸ್ತನಲ್ಲಿ ವಿಶ್ವಾಸಿಗಳಿಗೆ ಇರುವ ಅತ್ಯುನ್ನತ ಸ್ಥಾನ, ಕ್ರಿಸ್ತನ ದೇಹದ ಅತ್ಯುನ್ನತವಾದ ಸತ್ಯ, ಆ ಉನ್ನತ ಸ್ಥಾನ ಮತ್ತು ಈ ಸತ್ಯ ಮತ್ತು ಆತ್ಮಿಕ ಸತ್ಯಕ್ಕೆ ಯೋಗ್ಯವಾದ ಜೀವನ, ಮತ್ತು ವಿಶ್ವಾಸಿಗಳ ಆತ್ಮಿಕ ಯುದ್ಧ ಮತ್ತು ಅವರು ಅವುಗಳನ್ನು ಹೇಗೆ ಜಯಿಸಬಹುದು.

# 1 1

**1:1** *"ಅಪೋಸ್ತಲನು"*– ರೋಮಾ 1:1; 1 ಕೊರಿಂಥ 1:1; ಗಲಾ 1:1.

*"ದೇವ ಜನರು"*– ರೋಮಾ 1:7

*"ಎಫೆಸ"*– ಅಪೊ 18:19; 19:1-41.

*"ನಂಬಿಗಸ್ತ"*– ಇಲ್ಲಿ ಇದರ ಅರ್ಥ ಕ್ರಿಸ್ತನ ನಂಬಿಕೆಯಲ್ಲಿ ಜೀವಿಸಲು ಮುಂದುವರಿದವರು. "ಕ್ರಿಸ್ತನಲ್ಲಿ" ಅಥವಾ "ಆತನಲ್ಲಿ" ಎಂಬುದು ಈ ಪತ್ರಿಕೆಯ ಪ್ರಮುಖ ಪದವಾಗಿದೆ – ವಚನಗಳು – 3,4,7,12,13; 2:6,7,10,13; 3:6,11,21; 4:32; 6:10. ಇದು ಕ್ರಿಸ್ತನೊಂದಿಗೆ ನಮ್ಮ ಆತ್ಮೀಕ ಐಕ್ಯತೆಯನ್ನು ತೋರಿಸುತ್ತದೆ. ಯೋಹಾನ 17:20-23; ರೋಮಾ 6:3-8; ನೋಡಿರಿ. "ಎಲ್ಲಾ ಆತ್ಮೀಕ ಆಶೀರ್ವಾದಗಳು ವಿಶ್ವಾಸಿಗಳಿಗೆ ಸೇರಿದ್ದು ಯಾಕಂದರೆ ಅವರು "ಕ್ರಿಸ್ತನಲ್ಲಿದ್ದಾರೆ". ಆತನಿಲ್ಲದೆ ಅವರಿಗೆ ಏನು ಸಿಕ್ಕುವುದಿಲ್ಲ ಮತ್ತು ಅವರು ಏನೂ ಅಲ್ಲ. **2**

**- 1:2** ರೋಮಾ 1:7. **3**

**1:3** *"ದೇವರು ಮತ್ತು ತಂದೆ"*– ಈ ಲೋಕದಲ್ಲಿ ಯೇಸು ಮಾನವನಾಗಿದ್ದಾಗ ತಂದೆಯಾದ ದೇವರನ್ನು ನನ್ನ ತಂದೆ ಎಂದು ಕರೆದನು – ಮತ್ತಾಯ 27:46; ಯೋಹಾನ

20:17. ಹಾಗೆ ಕರೆಯುವುದರ ಮೂಲಕ ತಾನು ದೇವರಲ್ಲವೆಂದು ಸೂಚಿಸಲಿಲ್ಲ. ಯೋಹಾನ 8:24,58; 20:2-29; ಮತ್ತಾಯ 11:27 ಹೋಲಿಸಿರಿ. ಬೇರೆ ವಾಕ್ಯ ಭಾಗಗಳಿಗಾಗಿ ಫಿಲಿಪ್ಪಿ 2:6; ಲೂಕ 2:11 ನೋಡಿರಿ.

*"ನಮ್ಮನ್ನು ಆಶೀರ್ವಧಿಸಿದನು"*– ಇಲ್ಲಿ ಉಪಯೋಗಿಸಿರುವ ಕ್ರಿಯಾ ಪದವು ಭೂತಕಾಲದಲ್ಲಿದೆ. ದೇವರು ಈಗಾಗಲೇ ಕೊಡಬಹುದಾದ ಎಲ್ಲಾ ಆತ್ಮೀಯ ಆಶೀರ್ವಾದಗಳನ್ನು ವಿಶ್ವಾಸಿಗಳಿಗೆ ಕೊಟ್ಟಿದ್ದಾನೆ. ಈ ಆಶೀರ್ವಾದಗಳು ಕ್ರಿಸ್ತನಲ್ಲಿದೆ ಮತ್ತು ಆಶೀರ್ವಾದವಿರುವ ಕ್ರಿಸ್ತನಲ್ಲಿ ವಿಶ್ವಾಸಿಗಳಿದ್ದಾರೆ. ಆಶೀರ್ವಾದ ಅಥವ ಆಶೀರ್ವಾದಗಳು ಎಂಬ ಟಿಪ್ಪಣಿಗಾಗಿ ಆದಿ 12:1-3; ಸಂಖ್ಯಾ 6:22-27; ಧರ್ಮೋ 28:3-14; ಕೀರ್ತನೆ 1:1; 119:1; ಮತ್ತಾಯ 5:3-12; ಅಪೊ 3:26; ಗಲಾ 3:9,14. "ನಾವು" ಎಂದು ಹೇಳುವಾಗ ಕ್ರಿಸ್ತನಲ್ಲಿರುವ ಎಲ್ಲಾ ವಿಶ್ವಾಸಿಗಳು, ಕೆಲವು ಅಸಾಧಾರಣ ವ್ಯಕ್ತಿಗಳು ಮಾತ್ರವಲ್ಲ.

*"ಪರಲೋಕದಲ್ಲಿನ ಸ್ಥಳವು"*– ಎಂಬ ಇನ್ನೊಂದು ಪದವಿನ್ಯಾಸವನ್ನು ಎಫೆಸ ಪತ್ರಿಕೆಯಲ್ಲಿ ಕಾಣುತ್ತೇವೆ – ಗಲಾ 1:20; 2:6; 3:10; 6:12; ಗ್ರೀಕ್ ಭಾಷೆಯಲ್ಲಿ ಇದು ಒಂದು ಬಹುವಚನದ ಪದವಾಗಿದೆ – "ಪರಲೋಕಗಳ". ಇದು ದೇವರ ವಾಸಸ್ಥಳವನ್ನೂ ಸೇರಿಸುತ್ತದೆ – (ಗಲಾ 1:20), ಆದರೆ ಅದು ಅದಕ್ಕಿಂತಲೂ ಹೆಚ್ಚಿನದನ್ನು ಒಳಗೊಂಡಿದೆ (6:12). ಇದು ದೇವರು ಆಳುತ್ತಿರುವ ಆದರೆ ಸೈತಾನನು ವಿರೋಧಿಸುವ ಅಗೋಚರವಾಗಿರುವ ಆತ್ಮಗಳ ಲೋಕವನ್ನು ಸೂಚಿಸುತ್ತದೆ. ದೇವರು ಪರಲೋಕದ ಉಚ್ಚ ಸ್ಥಳದಲ್ಲಿದ್ದಾನೆ. ಸೈತಾನನು ಮತ್ತು ಅವನ ಪಿಶಾಚಿಗಳು ಆತ್ಮೀಕ ಲೋಕದ ಕೆಳ ಸ್ಥಾನದಲ್ಲಿದ್ದುಕೊಂಡು ವಿಶ್ವಾಸಿಗಳ ವಿರುದ್ಧವಾಗಿ ಯುದ್ಧಮಾಡುತ್ತಿದ್ದಾನೆ. ದೇವರ ದೃಷ್ಟಿಯಲ್ಲಿ, ಭೂಲೋಕದಲ್ಲಿರುವ ವಿಶ್ವಾಸಿಗಳು ಭೂಲೋಕದಲ್ಲಿಯೂ ಅದೇ ಸಮಯದಲ್ಲಿ ಪರಲೋಕದ ಉಚ್ಚ ಸ್ಥಳದಲ್ಲಿಯೂ ಇರುತ್ತಾರೆ (2:6), ಯಾಕಂದರೆ ಅವರ ಶಿರಸ್ಸಾಗಿರುವಾತನು ಮತ್ತು ಅವರ ಪ್ರತಿನಿಧಿಯು ಅಲ್ಲಿದ್ದಾನೆ (1:22) ಮತ್ತು ಅವರು "ಆತನಲ್ಲಿ" ಇದ್ದಾರೆ. "ಅಗೋಚರವಾದ ಸ್ಥಳದಲ್ಲಿರುವ ಕೆಟ್ಟ ಆತ್ಮಗಳ ವಿರುದ್ಧವಾಗಿ ಹೋರಾಡುತ್ತಾ ದೇಹವು ಇನ್ನೂ ಲೋಕದಲ್ಲಿಯೇ ಇರುತ್ತದೆ.

*"ಪರಲೋಕದಲ್ಲಿನ ಸಕಲ ಆತ್ಮೀಯ ವರಗಳು"*– ಇವು ಆತ್ಮೀಕ ಲೋಕದ ಆಶೀರ್ವಾದಗಳು, ನಮ್ಮನ್ನು ರಕ್ಷಿಸುವ ದೇವರ ಕೃಪೆಯ ಆಶೀರ್ವಾದಗಳು, ನಮ್ಮನ್ನು ಆತ್ಮೀಕವಾಗಿ ಮಾಡುವ, ಕ್ರಿಸ್ತನಿಗಾಗಿ ಜೀವಿಸಲು ಸಹಾಯ ಮಾಡುವ ಮತ್ತು ಕಡೆಗೆ ನಾವು ನಿತ್ಯಕ್ಕೂ ವಾಸಿಸುವ ಪರಲೋಕಕ್ಕೆ ನಮ್ಮನ್ನು ನಡಿಸುವ ಆಶೀರ್ವಾದ. ಬೇರೆ ರೀತಿಯಲ್ಲಿ ವಿಶ್ವಾಸಿಗಳನ್ನು ಕ್ರಿಸ್ತನು ಆಶೀರ್ವದಿಸುವುದಿಲ್ಲವೆಂದು ಪೌಲನು ಹೇಳುತ್ತಿಲ್ಲ – ದೈಹಿಕವಾಗಿ, ಮಾನಸಿಕ, ಆರ್ಥಿಕ, ಮುಂತಾದವುಗಳು. ಆದರೆ ಇಲ್ಲಿ ಅವನು ಈ ವಿಷಯಗಳಿಗೆ ಒತ್ತು ನೀಡುತ್ತಿದ್ದಾನೆ. ಈ ಪತ್ರಿಕೆಯಲ್ಲಿ ದೇವರು ವಿಶ್ವಾಸಿಗಳಿಗೆ ಕೊಟ್ಟಿರುವ ಕೆಲವು ಆತ್ಮೀಕ

ಆಶೀರ್ವಾದಗಳ ಬಗ್ಗೆ ಸೂಚಿಸುತ್ತಾನೆ – ವಚನಗಳು 5,7,13,14,17-19; 2:5,6,10,13-19,22; 3:16,17,20; 4:7,13,24; 5:8,18,25-27; 6:10,13. **4-6**

**1:4-6** *"ಆರಿಸಿಕೊಂಡನು"*– ಮಾರ್ಕ 13:20; ಯೋಹಾನ 15:16,19; ರೋಮಾ 8:33; 2 ಥೆಸ 2:13; 1 ಪೇತ್ರ 2:9. ಯೋಹಾನ 6:37; 17:6 ಹೋಲಿಸಿರಿ. ವಿಶ್ವಾಸಿಗಳು ಹುಟ್ಟುವದಕ್ಕಿಂತ ಮುಂಚೆ, ಲೋಕವು ಸೃಷ್ಟಿಸಲ್ಪಡುವ ಮುಂಚಿತವಾಗಿ, ದೇವರು ಭವಿಷ್ಯದ ಸಮಯವನ್ನು ಮತ್ತು ಪ್ರತಿಯೊಬ್ಬರನ್ನೂ ನೋಡಿದನು, ಪ್ರತಿಯೊಬ್ಬರನ್ನು ಕ್ರಿಸ್ತನಲ್ಲಿ ಆರಿಸಿಕೊಂಡನು ಮತ್ತು ಉನ್ನತವಾದ ಸ್ಥಳಕ್ಕಾಗಿ ಮೊದಲೇ ಸಂಕಲ್ಪಿಸಿನು. ರೋಮಾ 8:29,30 ನೋಡಿರಿ ಮತ್ತು ಅಲ್ಲಿಯ ವಾಕ್ಯವನ್ನು ಮತ್ತು ರೋಮಾ ಪತ್ರಿಕೆಯ ಕಡೆಯ ಭಾಗವನ್ನು ಗಮನಿಸಿರಿ. ಇಲ್ಲಿ, ವಚನಗಳು 4-6 ರಲ್ಲಿ, ದೇವರು ವಿಶ್ವಾಸಿಗಳನ್ನು ಆರಿಸಿಕೊಳ್ಳಲು ಮತ್ತು ಸಂಕಲ್ಪಿಸಲು ಮೂರು ಕಾರಣಗಳನ್ನು ಪೌಲನು ಮಾತಾಡುತ್ತಾನೆ. ಮೊದಲನೆಯದಾಗಿ, ನಾವು "ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು" – ವ. 4; 5:22-27; ಯೋಹಾನ 17:17-19; ಫಿಲಿಪ್ಪಿ 2:15; ತೀತ 2:14. "ಪ್ರೀತಿಯಲ್ಲಿ" ಎಂಬ ಪದವನ್ನು ಅದಕ್ಕೆ ಮುಂಚೆ ಇರುವ ವಾಕ್ಯದೊಂದಿಗೆ ಅಥವಾ ಅದರ ಹಿಂದಿನ ವಾಕ್ಯದೊಂದಿಗೆ ಜೋಡಿಸಬಹುದು. ಗ್ರೀಕ್ ಭಾಷೆಯಲ್ಲಿ ವಿರಾಮ ಚಿಹ್ನೆಗಳಿಲ್ಲ. ಎರಡನೆಯದಾಗಿ, ನಾವು ದೇವರ ಮಕ್ಕಳಾಗಬೇಕೆಂದು ಆತನು ಬಯಸಿದನು (ವ.5). ಯೋಹಾನ 1:12,13; ರೋಮಾ 8:15; 2 ಕೊರಿಂಥ 6:17,18; 1 ಯೋಹಾನ 3:1,2 ಹೋಲಿಸಿರಿ. "ದತ್ತು ಸ್ವೀಕಾರ" ದ ಬಗ್ಗೆ ರೋಮಾ 8:23 ನೋಡಿರಿ ಮತ್ತು ಅದರ ಟಿಪ್ಪಣಿಯನ್ನು ನೋಡಿರಿ. ವಿಶ್ವಾಸಿಗಳು ಆತ್ಮೀಯ ಹುಟ್ಟುವಿಕೆಯ ಮೂಲಕ ಆತನ ಮಕ್ಕಳಾಗಿದ್ದಾರೆ (ಯೋಹಾನ 3:3-8). ಅವರು ಮರಣದಿಂದ ಪುನರುತ್ಥಾನವಾದ ನಂತರ ಆತನು ಅವರನ್ನು ತನ್ನ ಮಕ್ಕಳನ್ನಾಗಿ ದತ್ತು ಸ್ವೀಕಾರ ಮಾಡಿಕೊಳ್ಳುತ್ತಾನೆ. ಅಂದರೆ, ಈ ರೀತಿಯಾಗಿ ಅವರನ್ನು ತನ್ನ ಮಕ್ಕಳೆಂದು ಬಹಿರಂಗವಾಗಿ ಪ್ರಕಟಿಸುತ್ತಾನೆ. ಮೂರನೆಯದಾಗಿ, ಆತನ ಕೃಪೆಯನ್ನು ಖ್ಯಾತಿಗೆ ತರಬೇಕೆಂದು – ಎಫೆ 2:8,9; 1 ಕೊರಿಂಥ 1:29-31; ಗಲಾ 6:14. ಮನುಷ್ಯರು ತಾವು ಏನು ಮಾಡುತ್ತಾರೋ ಅವುಗಳಿಂದ ಅವರಿಗೆ ರಕ್ಷಣೆಯಾದರೆ, ಆಗ ಅವರ ರಕ್ಷಣೆಯ ಖ್ಯಾತಿಯು ಅವರಿಗೆ ಸಲ್ಲುತ್ತದೆ. ಮನುಷ್ಯರನ್ನು ರಕ್ಷಿಸುವ ಮಾರ್ಗದಲ್ಲಿ ಆತನು ಈ ರೀತಿಯಲ್ಲಿ ಕೊಚ್ಚಿಕೊಳ್ಳುವುದು ಸಾಧ್ಯವಾಗದಂತೆ ಮಾಡಿದನು. ದೇವರ ಮಹಿಮೆಯುಳ್ಳ ಕೃಪೆಯು ಮಾತ್ರ ವಿಶ್ವಾಸಿಗಳನ್ನು ರಕ್ಷಿಸುತ್ತದೆ ಮತ್ತು ಎಲ್ಲಾ ಸ್ತುತಿಯು ಅದಕ್ಕೇ ಸಲ್ಲುತ್ತದೆ ಹೊರತು ವಿಶ್ವಾಸಿಗಳಿಗಲ್ಲ. ಕೃಪೆಯು ಉಚಿತವಾಗಿ ಕೊಡಲ್ಪಟ್ಟಿದೆ, ಅದನ್ನು ನಮ್ಮ ಸ್ವ-ಪ್ರಯತ್ನದಿಂದಾಗಲಿ ಅಥವಾ ನಮ್ಮ ಒಳ್ಳೆಯ ಕೆಲಸದಿಂದಾಗಲಿ ಸಂಪಾದಿಸಲು ಸಾಧ್ಯವಿಲ್ಲ (ರೋಮಾ 4:4,5; 6:23; 11:5,6). ಕೃಪೆಯ ವಿಷಯವಾಗಿ ಇತರ ಟಿಪ್ಪಣಿಗಳಿಗಾಗಿ ಯೋಹಾನ 1:14,16; ರೋಮಾ 1:7 ನೋಡಿರಿ. ವ.4 ರ ಕಡೆಯಲ್ಲಿ

"ಪ್ರೀತಿ" ಎಂಬ ಪದವನ್ನು ಗಮನಿಸಿರಿ. ಇದು ದೇವರು ವಿಶ್ವಾಸಿಗಳನ್ನು ಆರಿಸಿಕೊಳ್ಳುವ ಹಿಂದೆಯೇ ಮತ್ತು ಮೊದಲೇ ಸಂಕಲ್ಪಿಸಿದ್ದನು – ಎಫೆ 2:4; ಯೆರೆ 31:3; ರೋಮಾ 5:8; 8:39; ಯೋಹಾನ 3:1,16; 4:8. **5**

**1:5** *"ಮೊದಲೇ ಸಂಕಲ್ಪಿಸಿದ್ದನು"*– ರೋಮಾ 8:29 ಟಿಪ್ಪಣಿ ನೋಡಿರಿ, ಮತ್ತು ರೋಮಾಪುರದವರಿಗೆ ಬರೆದ ಪತ್ರಿಕೆಯ ಕಡೆಯಲ್ಲಿರುವ ಜ್ಞಾನನಿಧಿಯ (ಭವಿಷ್ಯಜ್ಞಾನ) ಟಿಪ್ಪಣಿಯನ್ನು ನೋಡಿರಿ. **6**

**1:6** *"ಸ್ವೀಕರಿಸುವಂತೆ ಮಾಡಿದನು"*– ಈ ಸತ್ಯದಲ್ಲಿ ಅನುಮಾನವೇ ಇಲ್ಲ ಮತ್ತು ಇದು ಅದ್ಭುತವಾಗಿದೆ. ಆದರೆ ಅನೇಕ ಪಂಡಿತರು ಮತ್ತು ಭಾಷಾಂತರಕಾರರು ಇಲ್ಲಿಯ ಗ್ರೀಕ್ ಪದದ ಅರ್ಥವು "ಉಚಿತವಾಗಿ ಕೊಡಲ್ಪಟ್ಟಿದೆ" ಎಂಬ ಅರ್ಥವನ್ನು ಕೊಡುತ್ತದೆ ಎಂದು ಯೋಚಿಸುತ್ತಾರೆ. (NIV) ಅಥವಾ "ಉಚಿತವಾಗಿ ನೀಡಲಾಗಿದೆ" (NASB) ಮತ್ತು "ಸ್ವೀಕರಿಸುವಂತೆ ಮಾಡಲಾಗಿದೆ" –ಎಂದು ಅಲ್ಲ. "ಪ್ರೀಯನು" (ವ.6). ಕ್ರಿಸ್ತನು - ಮತ್ತಾಯ 3:17; ಯೋಹಾನ 17:24. ವಿಶ್ವಾಸಿಗಳು "ಕ್ರಿಸ್ತನಲ್ಲಿದ್ದಾರೆ" ಮತ್ತು ಹಾಗೆಯೇ ದೇವರ ಪ್ರೀತಿ ಮತ್ತು ಕೃಪೆಯ ವಿಷಯವು ಸಹ ಸಾಧ್ಯವಾಗುವಷ್ಟು ಮಟ್ಟಿಗೆ ಸಂಪೂರ್ಣವಾಗಿದೆ. **7**

**1:7** *"ಬಿಡುಗಡೆ"*– ಲೂಕ 2:38; ರೋಮಾ 3:24; 1 ಕೊರಿಂಥ 1:30; ಗಲಾ 3:13; ಕೊಲೊ 1:14; ಇಬ್ರಿ 9:12,15. ಕೀರ್ತನೆ 78:35; ಮತ್ತಾಯ 20:28 ರ ಟಿಪ್ಪಣಿಗಳು. ಬಿಡುಗಡೆಯು ಪಾಪ ಕ್ಷಮಾಪಣೆಯನ್ನೂ ಒಳಗೊಂಡಿದೆ ಯಾಕಂದರೆ ನಮ್ಮನ್ನು ಬಂಧನದಲ್ಲಿಟ್ಟಿದ್ದು ಪಾಪವೇ. ಕ್ರಿಸ್ತನು ತನ್ನ ರಕ್ತವನ್ನು ಕೊಟ್ಟನು, ನಮ್ಮನ್ನು ಬಿಡುಗಡೆ ಮಾಡಲು ತನ್ನ ಜೀವವನ್ನು ಧಾರೆಯೆರೆದನು.

*"ಕ್ಷಮಾಪಣೆ"*– 4:32; ಮತ್ತಾಯ 6:12; 9:6; 12:31; ಮಾರ್ಕ 2:7; ಲೂಕ 24:47; ಅಪೊ 13:38; 26:18; ರೋಮಾ 4:7; ಕೊಲೊ 2:13; 1 ಯೋಹಾನ 1:9. ಪಾಪ ಕ್ಷಮಾಪಣೆಯನ್ನು ಒಳ್ಳೆಯ ನಡೆತೆಯಿಂದ ಸಂಪಾದಿಸಲು ಸಾಧ್ಯವಿಲ್ಲ. ಇದು ವಿಶ್ವಾಸಿಗಳಿಗೆ ದೇವರ ಉಚಿತ ಕೊಡುಗೆಯಾಗಿದೆ. ಪದವಿನ್ಯಾಸವನ್ನು ಗಮನಿಸಿ.

*"ಕೃಪಾತಿಶಯ"*– 2:4,7; ರೋಮಾ 2:4; 10:12. ವಿಶ್ವದಲ್ಲಿರುವ ನಿಜವಾದ ಸಂಪತ್ತು ಇದಾಗಿದೆ ಮತ್ತು ಇದು ವಿಶ್ವಾಸಿಗಳನ್ನು ಐಶ್ವರ್ಯವಂತರನ್ನಾಗಿ ಮಾಡುತ್ತದೆ – ವ. 3; 2 ಕೊರಿಂಥ 8:9; 1 ಕೊರಿಂಥ 3:21-23. **8**

**1:8** *"ಹೆಚ್ಚಾಗಿ"*– ಎಂಬ ಪದವನ್ನು ನೋಡಿರಿ. ಮನುಷ್ಯರಿಗೆ ಆಶೀರ್ವಾದವನ್ನು ಕೊಡುವದರಲ್ಲಿ ದೇವರು ಮನಸ್ಸಿಲ್ಲದವನಾಗಲೀ ಮತ್ತು ಜಿಪುಣನಾಗಲೀ ಆಗಿಲ್ಲ. ಈ ಸಂಪತ್ತನ್ನು ನಮಗೆ ಕೊಡಬೇಕೆಂದು ನಾವು ಆತನನ್ನು ಬಲವಂತ ಮಾಡಬೇಕಾಗಿಲ್ಲ. ಇವುಗಳನ್ನು ಹೊಂದಿಕೊಳ್ಳಲು ಪರಲೋಕದಲ್ಲಿ ನಮಗೆ ಮಧ್ಯವರ್ತಿಯಾಗಿ ನಮಗಾಗಿ

ಬೇಡಿಕೊಳ್ಳಲು ಯಾವ ಸಂತರು ಬೇಕಾಗಿಲ್ಲ. ದೇವರು ತನ್ನ ಸ್ವಂತ ಮಗನನ್ನು ನಮಗೋಸ್ಕರ ಮರಣಿಸಲು ಕಳುಹಿಸಿಕೊಟ್ಟನು ಇದರ ಮೂಲಕವಾಗಿ ನಮ್ಮ ಮೇಲೆ ಆತನ ಕೃಪೆಯನ್ನು ಸುರಿಸಿದನು. ರೋಮಾ 8:32 ಹೋಲಿಸಿರಿ. ಕೋಡುವುದನ್ನು ದೇವರು ನಿಲ್ಲಿಸಲು ಸಾಧ್ಯವಿಲ್ಲ ಹಾಗೆ ಮಾಡಿದರೆ ಆತನು ದೇವರಾಗಿರುವದನ್ನು ನಿಲ್ಲಿಸಬೇಕಾಗುತ್ತದೆ. ತನ್ನ ಕೃಪೆಯ ಐಶ್ವರ್ಯವನ್ನು ವಿಶ್ವಾಸಿಗಳ ಮೇಲೆ ಸುರಿಸುವುದನ್ನು ಶಾಶ್ವತವಾಗಿ ಮುಂದುವರಿಸುವನು - 2:7. ಬಿಡುಗಡೆ, ಕ್ಷಮಾಪಣೆ ಮತ್ತು ಆ ರೀತಿಯ ಎಲ್ಲಾ ಐಶ್ವರ್ಯದ ಜೊತೆಗೆ ದೇವರು "ವಿಶೇಶವಾದ ಜ್ಞಾನವನ್ನೂ ಮತ್ತು ಬುದ್ದಿಯನ್ನೂ" ಕೊಡುವವನಾಗಿದ್ದಾನೆ. ಇದರ ಅರ್ಥ ಹೀಗಿರಬಹುದು ಆತನು ನಮ್ಮೊಂದಿಗೆ ಮಾಡಿದ ಆಕರ್ಷಣೀಯ ಕೊಡುವಿಕೆಯಲ್ಲಿ ದೇವರು ತನ್ನ ಪರಿಪೂರ್ಣ ಜ್ಞಾನವನ್ನು ತೋರಿಸಿದ್ದಾನೆ. ಇದು ನಿಜವಾಗಿಯೂ ಸತ್ಯ. ಆದರೆ ಕ್ರಿಸ್ತನಾದ ದೇವರು ವಿಶ್ವಾಸಿಗಳಿಗೆ ಸಂಪೂರ್ಣ ಆತ್ಮೀಕ ಜ್ಞಾನವನ್ನೂ ಮತ್ತು ವಿವೇಚನೆಯನ್ನೂ ದೊರಕುವಂತೆ ಮಾಡಿದ್ದಾನೆಂದು ಬಹುಶಃ ಪೌಲನ ಅರ್ಥವಾಗಿರಬಹುದು. ಕೊಲೊ 1:9; 2:2,3; 1 ಕೊರಿಂಥ 2:7-10. **9,10**

**1:9,10** *"ರಹಸ್ಯ"*– 3:3,4,9; 5:32; 6:19. ಮತ್ತಾಯ 13:11; ರೋಮಾ 16:25,26 ರ ಟಿಪ್ಪಣಿ. ದೇವರು ಪ್ರಕಟಿಸಿದ ರಹಸ್ಯವಾದ ಸತ್ಯವನ್ನು ಪೌಲನು ಇಲ್ಲಿ ಮಾತನಾಡುತ್ತಿದ್ದಾನೆ: ಭವಿಷ್ಯದಲ್ಲಿ ಕಾಲವು ಪರಿಪೂರ್ಣವಾದಾಗ ದೇವರು ಒಂದು ಹೊಸ ಕ್ರಮವನ್ನು ಸ್ಥಾಪಿಸುವವನಾಗಿದ್ದಾನೆ ಮತ್ತು ಅದರ ಅತ್ಯುನ್ನತ ಅಧಿಕಾರವನ್ನು ಕರ್ತನಾದ ಯೇಸು ಕ್ರಿಸ್ತನಿಗೆ ಕೊಡುವನು. ರೋಮಾ 8:21; ಮತ್ತಾಯ 19:28; 1 ಕೊರಿಂಥ 15:25; ಫಿಲಿಪ್ಪಿ 2:9-11; ಪ್ರಕ 20:4-6. **11,12**

**1:11,12** *"ಬಾಧ್ಯತೆಯನ್ನು ಪಡಕೊಂಡನು"*– ಇದು ಸಹ ಭೂತಕಾಲದಲ್ಲಿದೆ. ನಾವು ಪಡಕೊಂಡಿದ್ದೇವೆ, ಆದರೆ ನಾವು ಇನ್ನೂ ಅದರಲ್ಲಿ ಸಂಪೂರ್ಣವಾಗಿ ಪ್ರವೇಶಿಸಿಲ್ಲ – ವ. 14; 1 ಪೇತ್ರ 1:4.

*"ಮೊದಲೇ ನಿಷ್ಕರ್ಷೆಮಾಡಿಕೊಂಡಿದ್ದನು"*– ವ.5.

*"ಉದ್ದೇಶ"*– ಲೋಕದಲ್ಲಿ ನಡೆಯುವ ಕಾರ್ಯಗಳು ಅನೇಕ ವೇಳೆ ಅವ್ಯವಸ್ಥಿತವಾಗಿ ಅಥವಾ ಅಸ್ತವ್ಯಸ್ತವಾಗಿ ನಡೆಯುತ್ತದೆ. ನಡೆಯುವುದರಲ್ಲಿ ಯಾವುದೇ ಲಯ ಅಥವಾ ಕಾರಣವಿರುವುದಿಲ್ಲ. ಆದರೆ ಇದು ನಮ್ಮ ಮಿತಿಯುಳ್ಳ ದೃಷ್ಟಿಯಿಂದಾಗಿದೆ. ದೇವರಿಗೆ ಪರಿಪೂರ್ಣವಾದ ಯೋಜನೆ ಇದೆ ಮತ್ತು ಆತನು ಸಮಗ್ರವಾಗಿ ಕೆಲಸ ಮಾಡುತ್ತಿದ್ದಾನೆ. ರೋಮಾ 8:28; 11:33-36; ಯೆಶಾಯ 46:10 ಹೋಲಿಸಿರಿ. ದೇವರ ಯೋಜನೆಯು ವಿಶೇಷವಾಗಿ ವಿಶ್ವಾಸಿಗಳ ಮತ್ತು ಅವರಿಗಾಗಿ ನೇಮಕವಾಗಿರುವ ಭವಿಷ್ಯದ ಕುರಿತಾಗಿದೆ. ತನ್ನ "ಮಹಿಮೆಯನ್ನು ನಾವು ಪ್ರಖ್ಯಾತಿ ಪಡಿಸಬೇಕೆಂದು" – ವ. 14; 3:21; ರೋಮಾ 16:27; ಗಲಾ 1:5; ಫಿಲಿಪ್ಪಿ 1:11; ಇಬ್ರಿ 13:21; 1 ಪೇತ್ರ 2:9; ಪ್ರಕ 4:11; 1 ಕೊರಿಂಥ 10:31.

13

**1:13** *"ನೀವು ಸಹ"*– ಯೆಹೂದ್ಯರಲ್ಲದೆ ಬೇರೆ ವಿಶ್ವಾಸಿಗಳು ಎಂದು ಅವನ ಅರ್ಥ. ವ.12 ರಲ್ಲಿ ಪೌಲನು ಕ್ರಿಸ್ತನಲ್ಲಿ ಮೊದಲು ನಿರೀಕ್ಷೆಯನ್ನಿಟ್ಟವರ ಬಗ್ಗೆ ಮಾತಾಡಿದನು. ಅದರ ಅರ್ಥ ಯೆಹೂದ್ಯ ವಿಶ್ವಾಸಿಗಳು. ಹಳೆಯ ಒಡಂಬಡಿಕೆಯಲ್ಲಿ ಬೇರೆ ಯಾವುದೇ ದೇಶಕ್ಕೆ ಪಾಲಿಲ್ಲದ ಆಶೀರ್ವಾದವನ್ನು ಯೆಹೂದ್ಯರು ಅನುಭವಿಸಿದರು. ಈಗ ಬೇರೆ ದೇಶಗಳ ಹೊಸ ವಿಶ್ವಾಸಿಗಳು ಕ್ರಿಸ್ತನಲ್ಲಿ ಯೆಹೂದ್ಯ ವಿಶ್ವಾಸಿಗಳಾಗಿ ಸೇರಿಸಲ್ಪಟ್ಟಿದ್ದಾರೆ. ಇದು ಈ ಪತ್ರಿಕೆಯ ವಿಷಯವಾಗಿದೆ – 2:11-22; 3:6. ಕ್ರಿಸ್ತನ ಸುವಾರ್ತೆಯನ್ನು "ಸತ್ಯದ ವಾಕ್ಯ" ಎಂದು ಕರೆಯಲಾಗುತ್ತದೆ. ಕೊಲೊ 1:5; 2 ತಿಮೊ 2:15; ಯಾಕೋಬ 1:18. ಇದು ಸತ್ಯವಾದ ದೇವರಿಂದ ಪ್ರಕಟವಾದದ್ದು ಮತ್ತು ಅದು ಆದಿಯಿಂದ ಅಂತ್ಯದವರೆಗೂ ಸತ್ಯವಾಗಿದೆ – ಯೋಹಾನ 17:17; 12:49,50; 8:40; 7:16,17. ಇದು "ರಕ್ಷಣೆಯ" –ಸುವಾರ್ತೆ (ರೋಮಾ 1:16 ಟಿಪ್ಪಣಿ). ಎಫೆಸದ ಕ್ರೈಸ್ತರು ಸತ್ಯದ ವಾಕ್ಯವನ್ನು ಸುಮ್ಮನೆ ಕೇಳಿಸಿಕೊಳ್ಳಲಿಲ್ಲ, ಆದರೆ ಅವರು ಅದರಲ್ಲಿ ನಂಬಿಕೆಯಿಟ್ಟರು. ಕೇಳಿಸಿಕೊಳ್ಳುವ ಮಾತ್ರದಿಂದ ಒಳ್ಳೆಯ ಫಲ ಉಂಟಾಗುವುದಿಲ್ಲ. ಮತ್ತಾಯ 13:14,15. ನಂಬುದರಿಂದ ಪವಿತ್ರಾತ್ಮನ ಮುದ್ರೆಯು ಹಾಕಲ್ಪಡುತ್ತದೆ.

*"ಮುದ್ರೆ"*– ಪವಿತ್ರಾತ್ಮನು ತಾನೇ ಮುದ್ರೆಯಾಗಿದ್ದಾನೆ – 4:30. ಮುದ್ರೆಯು ಯಜಮಾನಿಕೆಯನ್ನು ಸೂಚಿಸುತ್ತದೆ – ವ. 14; 2 ತಿಮೊ 2:19; ರೋಮಾ 8:9. ದೇವರು ತನಗೆ ಸೇರಿದವರಿಗೆ ಪವಿತ್ರಾತ್ಮನನ್ನು ಕೊಡುವವನಾಗಿದ್ದಾನೆ. ಆತನ ಆತ್ಮನನ್ನು ಹೊಂದಿಕೊಳ್ಳುವುದು ಆತನವರೆಂದು ಗುರುತಿಸುತ್ತದೆ ಅವರನ್ನು ಯಾವುದೇ ಕಾರ್ಯವು ಏನೂ ಮಾಡಲಾಗದು. ದೇವರ ಆತ್ಮನು ಎಲ್ಲಾ ವಿಶ್ವಾಸಿಗಳಲ್ಲಿ ಅವರು ಮೊದಲು ಕ್ರಿಸ್ತನನ್ನು ನಂಬಿದಾಗ ಅವರಲ್ಲಿ ವಾಸ ಮಾಡಲು ಬರುತ್ತಾನೆ – ಗಲಾ 3:2,5,14. ಪವಿತ್ರಾತ್ಮನ ವಿಷಯವಾಗಿ ಟಿಪ್ಪಣಿಯನ್ನು 5:18; ಮತ್ತಾಯ 3:16,17; 28:19; ಯೋಹಾನ 14:16,17; ಅಪೊ 1:4.

*"ವಾಗ್ದಾನದ"*– ಲೂಕ 24:48; ಅಪೊ 1:4,5. 14

**1:14** ತಂದೆಯಾದ ದೇವರು ವಿಶ್ವಾಸಗಳಿಗೆ ತನ್ನ ಆತ್ಮವನ್ನು "ಸಂಚಕಾರ" ಅಥವಾ "ಠೇವಣಿ" ಅಥವಾ "ಖರೀದಿಯ ಖಾತರಿ" (ಬೇರೆ ಕೆಲವು ಭಾಷಾಂತರದಲ್ಲಿದ್ದ ಹಾಗೆ). 2 ಕೊರಿಂಥ 5:5 ಹೋಲಿಸಿರಿ. ಇದರ ಅರ್ಥ ಆತನು ನಮ್ಮಲ್ಲಿ ಪ್ರಾರಂಭಿಸಿದ ಕೆಲಸವನ್ನು ಮುಗಿಸುತ್ತಾನೆಂದು ಖಾತರಿಮಾಡುತ್ತಾನೆ (ಫಿಲಿಪ್ಪಿ 1:6), ನಮಗೆ ವಾಗ್ದಾನ ಮಾಡಿದ ಬಾಧ್ಯತೆಯನ್ನು ನಮಗೆ ಕೊಡುತ್ತಾನೆ (ರೋಮಾ 8:17; ಕೊಲೊ 1:12; ಇಬ್ರಿ 6:12; 9:15; 1 ಪೇತ್ರ 1:4) ಮತ್ತು ನಮ್ಮ ದೇಹವನ್ನು ಬಿಡಿಸಿಕೊಳ್ಳುವವರೆಗೂ ನಮ್ಮನ್ನು ಆತನ ಸ್ವಂತ ಸ್ವತ್ತಾಗಿ ಕಾಪಾಡುತ್ತಾನೆ (ರೋಮಾ 8:23) ಮತ್ತು ನಿರಂತರಕ್ಕೂ (ಯೋಹಾನ 14:16).

ವಿಶ್ವಾಸಿಗಳು ದೇವರ ಸ್ವತ್ತು (1 ಕೊರಿಂಥ 6:19,20). ಆದ್ದರಿಂದ ಆತನು ಅವರನ್ನು ಬಹು ಜೋಪಾನವಾಗಿ ಕಾಪಾಡುತ್ತಾನೆ ಮತ್ತು ಅವರಲ್ಲಿ ಒಬ್ಬರನ್ನಾದರೂ ಕಳಕೊಳ್ಳುವದಿಲ್ಲ. ಯೋಹಾನ 6:39,40; 10:27,28; 17:11,12. ಆತನ ಆತ್ಮನನ್ನು ಸ್ವೀಕರಿಸಿಕೊಂಡಿದ್ದೇವೆಂಬ ಜ್ಞಾನವು ಸತ್ಯವೆಂಬ ಭರವಸೆಯನ್ನು ಕೊಡಬೇಕು.

*"ಆತನ ಮಹಿಮೆಗೆ ಸ್ತೋತ್ರ"*– ವ.6,12. **15**

**1:15** *"ನಂಬಿಕೆ", "ಪ್ರೀತಿ"*– ಕೊಲೊ 1:4; ಗಲಾ 5:6; 1 ಥೆಸ 1:3. ಈ ಎರಡು ಗುಣಗಳು ನಿಜ ವಿಶ್ವಾಸಿಗಳಲ್ಲಿ ಯಾವಾಗಲೂ ಇರುತ್ತದೆ. ನಂಬಿಕೆ ಎಂದು ಕರೆಯಲ್ಪಡುವ ಯಾವುದೇ ಆದರು ಅದರಲ್ಲಿ ಪ್ರೀತಿಯ ಫಲವನ್ನು ಕಾಣದಿದ್ದರೆ ಅದು ನಿಜವಾದ ನಂಬಿಕೆಯಲ್ಲ – 1 ಯೋಹಾನ 3:14; 1 ಕೊರಿಂಥ 13:2. **16**

**1:16** *"ವಂದನೆ"*– ಪೌಲನು ಇದನ್ನು ಅಭ್ಯಾಸವಾಗಿ ಮಾಡಿಕೊಂಡನು (ರೋಮಾ 1:8; 1 ಕೊರಿಂಥ 1:4; ಫಿಲಿಪ್ಪಿ 1:3; ಕೊಲೊ 1:3; 1 ಥೆಸ 1:2; 2 ಥೆಸ 1:3). ವಿಶ್ವಾಸಿಗಳು ಅವನಿಗೆ ವಯಕ್ತಿಕವಾಗಿ ಪರಿಚಯವಿದ್ದಾರೋ, ಇಲ್ಲವೋ, ಅವರು ಅವನ ಸೇವೆಯ ಮುಖಾಂತರ ಅಥವಾ ಬೇರೆಯವರ ಸೇವೆಯ ಮುಖಾಂತರ ಕ್ರಿಸ್ತನ ಬಳಿಗೆ ಬಂದಿದ್ದಾರೆ, ಆದದರಿಂದ ಅವನು ಅವರ ಬಗ್ಗೆ ಸಂತೋಷವುಳ್ಳವನೂ ಮತ್ತು ಅವರಿಗೆ ಕೃತಜ್ಞತೆಯುಳ್ಳವನಾಗಿದ್ದಾನೆ. ವಿಶ್ವಾಸಿಗಳು ದೇವರಿಗೂ ಮತ್ತು ಆತನ ಕೃಪೆಗೂ ಮಹಿಮೆಯಾಗಿದ್ದಾರೆ (ವ.6,12,14), ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ರಕ್ಷಣೆಯಲ್ಲಿಯೂ ಮತ್ತು ಪುರುಷರು ಮತ್ತು ಸ್ತ್ರೀಯರು ಪರಿಶುದ್ಧ ಜೀವನ ನಡೆಸುವದರಲ್ಲಿಯೂ ದೇವರು ಮಹಿಮೆ ಹೊಂದಬೇಕೆನ್ನುವದೇ ಪೌಲನ ಆಸೆಯಾಗಿತ್ತು.

*"ಪ್ರಾರ್ಥನೆಗಳು"*– ರೋಮಾ 1:9; 1 ಥೆಸ 1:2; 2 ತಿಮೊ 1:3. **17**

**1:17** *"ಬೇಡಿಕೊಳ್ಳುವದು"*– ಇಲ್ಲಿ ಪೌಲನ ಮುಂದುವರಿದ ಪ್ರಾರ್ಥನೆಯು ದೇವರಾತ್ಮನಿಂದ ಪ್ರೇರಣೆಯಾದದ್ದಾಗಿದೆ. ಎಲ್ಲಾ ಕಡೆಯಲ್ಲಿರುವ ಎಲ್ಲ ವಿಶ್ವಾಸಿಗಳು ಕೆಲವು ವಿಷಯಗಳನ್ನು ಹೊಂದಿಕೊಳ್ಳಬೇಕೆನ್ನುವುದನ್ನು ಇದು ಪ್ರಕಟಿಸುತ್ತದೆ. ನಾವು ಯಾವದಕ್ಕಾಗಿ ಸುರಕ್ಷಿತವಾಗಿ ಪ್ರಾರ್ಥಿಸಬಹುದೆಂದು ತೋರಿಸುತ್ತದೆ. "ದೇವರು" ಮತ್ತು "ತಂದೆ" – ವ.3. "ಪರಿಶುದ್ಧ ಆತ್ಮ" – ಇಲ್ಲಿ ಪೌಲನು ಪರಿಶುದ್ಧ ಆತ್ಮನ ಬಗ್ಗೆ ಮಾತನಾಡುತ್ತಿಲ್ಲವೆಂದು ತೋರುತ್ತದೆ. ಅವರು ಈಗಾಗಲೇ ಪವಿತ್ರಾತ್ಮನನ್ನು ಹೊಂದಿಕೊಂಡಿದ್ದಾರೆಂದು ಈಗ ತಾನೆ ಅವನು ಹೇಳಿದನು (ವ.13). ಹಾಗಾದರೆ ಅವರು ಆತನನ್ನು ಹೊಂದಿಕೊಳ್ಳಬೇಕೆಂದು ಅವನು ಯಾಕೆ ಪ್ರಾರ್ಥಿಸಬೇಕು? ಅವರಲ್ಲಿ ವಾಸ ಮಾಡುತ್ತಿರುವ ಪವಿತ್ರಾತ್ಮನು ಅವರಿಗೆ ಆತ್ಮೀಕ ಜ್ಞಾನವನ್ನು ಕೊಡಲೆಂದು ಪ್ರಾರ್ಥಿಸುತ್ತಿದ್ದಾನೆ – ಅಂದರೆ, ಅವರ ಆತ್ಮವು ಜ್ಞಾನವುಳ್ಳದ್ದಾಗಬೇಕೆಂದೂ ಮತ್ತು ದೇವರ ವಾಕ್ಯದ ಆಳವಾದ ಸತ್ಯಗಳನ್ನು ಅರ್ಥಮಾಡಿಕೊಳ್ಳುವ ಜ್ಞಾನವು ಅವರಿಗೆ ದೊರಕಲೆಂದು

ಪ್ರಾರ್ಥಿಸಿದನು. ಅವರು ದೇವರನ್ನು ಇನ್ನು ಹೆಚ್ಚಾಗಿ ತಿಳಿಕೊಳ್ಳಬೇಕೆಂದು ಪ್ರಾರ್ಥಿಸಿದನು. ದೇವರ ವಯಕ್ತಿಕ ಜ್ಞಾನವು ವಿಶ್ವಾಸಿಗಳ ನಿಧಿಯಾಗಿದೆ. ಅವರ ಆತ್ಮೀಕ ಜೀವನವು ಅದರಿಂದ ಪ್ರಾರಂಭವಾಗುತ್ತದೆ ಮತ್ತು ಅದರೊಂದಿಗೆ ಮುಂದುವರಿಯುತ್ತದೆ – ಯೋಹಾನ 17:3; 2 ಕೊರಿಂಥ 4:6; ಎಫೆ 4:13; ಫಿಲಿಪ್ಪಿ 3:8,10; ಕೊಲೊ 1:10; 2 ಪೇತ್ರ 3:18. ದೇವರನ್ನು ವಯಕ್ತಿಕವಾಗಿ ತಿಳಿದುಕೊಳ್ಳುವುದು ಮತ್ತು ಆತನನ್ನು ಇನ್ನು ಹೆಚ್ಚಾಗಿ ತಿಳಿಯುದೇ "ಪ್ರಕಟಣೆ" –ಎಂದು ಪೌಲನು ತಿಳಿಕೊಂಡಿದ್ದನು. ದೇವರು ತನ್ನನ್ನು ನಮಗೆ ಪ್ರಕಟಿಸಿಕೊಳ್ಳಬೇಕು ಅಥವಾ ನಾವು ಆತನನ್ನು ಎಂದಿಗೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಮತ್ತಾಯ 11:17; 1 ಕೊರಿಂಥ 2:10,11. **18,19**

**1:18,19** ನಾವು ದೇವರನ್ನು ತಿಳುಕೊಳ್ಳುವುದು ಮಾತ್ರವಲ್ಲ ಆದರೆ ವಿಶ್ವಾಸಿಗಳಾದ ನಮಗೆ ಆತನು ಸಿದ್ಧಮಾಡಿರುವ ಕಾರ್ಯಗಳನ್ನು ತಿಳಿಕೊಳ್ಳಬೇಕೆಂದು ಆತನು ಬಯಸುತ್ತಾನೆ. **18**

**1:18** *"ಕಣ್ಣುಗಳು"*– ಎರಡು ರೀತಿಯ ಕಣ್ಣುಗಳಿವೆ –ವಸ್ತುಗಳನ್ನು ನೋಡಬಹುದಾದ, ದೈಹಿಕವಾದ ಕಣ್ಣು, ಮತ್ತು ಕಾಣದ ಆತ್ಮೀಕ ಕಾರ್ಯಗಳನ್ನು "ನೋಡುವಂಥದ್ದು", ಆತ್ಮೀಕ ಕಣ್ಣುಗಳು (2 ಕೊರಿಂಥ 4:18; ಇಬ್ರಿ 11:13; ಯೋಹಾನ 4:35). ಅವಿಶ್ವಾಸಿಗಳ ಒಳ ಕಣ್ಣುಗಳು ಮುಚ್ಚಲ್ಪಟ್ಟಿವೆ ಮತ್ತು ಕುರುಡಾಗಿವೆ – ಮತ್ತಾಯ 13:15; 2 ಕೊರಿಂಥ 4:4; 1 ಯೋಹಾನ 2:11; ಪ್ರಕ 3:18. ವಿಶ್ವಾಸಿಗಳ ಆತ್ಮೀಕ ಕಣ್ಣುಗಳನ್ನು ದೇವರು ತೆರೆದಿದ್ದಾನೆ – ಅಪೊ 26:18; ಯೋಹಾನ 9:39; 2 ಕೊರಿಂಥ 4:6. ಹೀಗಾದಾಗ ಅವರು ಮೊದಲು ಅರ್ಥಮಾಡಿಕೊಳ್ಳಲಾಗದ ಆತ್ಮೀಕ ಸತ್ಯಗಳನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತಾರೆ. ಅವರು ಯಾರಾಗಿದ್ದಾರೆಂದು ಅವರು "ನೋಡುತ್ತಾರೆ" –ಮತ್ತು ದೇವರು ಹೇಗಿದ್ದಾನೆಂದು ಕಂಡುಕೊಳ್ಳುತ್ತಾರೆ ಮತ್ತು ರಕ್ಷಣೆಯ ವಿಷಯವನ್ನು ಅರ್ಥಮಾಡಿಕೊಳ್ಳುತ್ತಾರೆ. ಆದರೆ ಎಲ್ಲಾ ಕಾರ್ಯಗಳು ವಿಶ್ವಾಸಿಗಳಿಗೆ ತಕ್ಷಣವೇ ಅರ್ಥವಾಗುವದಿಲ್ಲ. ಅವರ ಮನೋನೇತ್ರಗಳನ್ನು ಬೆಳಗಿಸಿದ ದೇವರು ಮೊದಲು ಅವರಿಗೆ ಜ್ಞಾನೋದಯವನ್ನು ಉಂಟು ಮಾಡುತ್ತಾನೆ. ಆದ್ದರಿಂದ ಪೌಲನು ಈ ಪ್ರಾರ್ಥನೆಯನ್ನು ಮಾಡಿದನು – ನಾವೆಲ್ಲರು ನಮಗಾಗಿ ಮತ್ತು ಬೇರೆಯವರಿಗಾಗಿ ಮಾಡಬೇಕಾದ ಪ್ರಾರ್ಥನೆ. ಆತ್ಮೀಕ ಜ್ಞಾನೋದಯವಿಲ್ಲದೆ ಜನರು ಸತ್ಯವೇದವನ್ನು ಓದಬಹುದು ಮತ್ತು ತಿರುಗಿ ಓದಬಹುದು ಮತ್ತು ಆದರೆ ಅವರ ಪ್ರಯತ್ನದಿಂದ ಸ್ವಲ್ಪ ಮಟ್ಟಿಗೆ ಬುದ್ಧಿವಂತರಾಗಬಹುದು. 2 ಕೊರಿಂಥ 3:15 ಹೋಲಿಸಿರಿ. ಮೂರು ಕಾರ್ಯಗಳನ್ನು ಅರ್ಥಮಾಡಿಕೊಳ್ಳಬೇಕೆಂದು ಪೌಲನು ಪ್ರಾರ್ಥಿಸುತ್ತಾನೆ: ಅವರ ನಿರೀಕ್ಷೆ, ದೇವರ ಸ್ವಾಸ್ಥ್ಯತೆ ಮತ್ತು ದೇವರ ಶಕ್ತಿ.

*"ನಿರೀಕ್ಷೆ"*– ರೋಮಾ 5:2; 8:23-25. ಕ್ರಿಸ್ತನಂತಾಗುವುದು ಮತ್ತು ಶಾಶ್ವತವಾಗಿ

ಆತನೊಂದಿಗೆ ಜೀವಿಸುವದೇ ವಿಶ್ವಾಸಿಗಳ ನಿರೀಕ್ಷೆಯಾಗಿದೆ – ರೋಮಾ 8:29; 2 ಕೊರಿಂಥ 3:18; 1 ಯೋಹಾನ 3:2,3; ಯೋಹಾನ 17:24.

*"ಸ್ವಾಸ್ಥ್ಯತೆ"*– ವಿಶ್ವಾಸಿಗಳು ಕ್ರಿಸ್ತನಲ್ಲಿ ಬಾಧ್ಯತೆಯುಳ್ಳವರಾಗಿದ್ದಾರೆ (ವ.14) ಮತ್ತು ದೇವರು ಅವರಲ್ಲಿ ಬಾಧ್ಯತೆಯುಳ್ಳವನಾಗಿದ್ದಾನೆ. ಅವರು ಆತನ ಅಮೂಲ್ಯ ಸ್ವಾಸ್ಥ್ಯವಾಗಿದ್ದಾರೆ, ಆತನ ನಿಧಿ, ಆತನ ಐಶ್ವರ್ಯ. ಅವರು ಆತನಿಗೆ ಹೆಚ್ಚಾಗಿ ಬೇಕಾದದ್ದರಿಂದ ಅವರಿಗಾಗಿ ತನ್ನ ಮಗನ ಪ್ರಾಣದ ಮೂಲಕ ಅವರನ್ನು ಕೊಂಡುಕೊಂಡನು (ವ.7). ಮರಣದಿಂದ ಪುನರುತ್ಥಾನವಾಗುವ ಸಮಯದಲ್ಲಿ ಆತನು ತನ್ನ ಸಂಪೂರ್ಣ ಬಾಧ್ಯತೆಯನ್ನು ಹೊಂದಿಕೊಳ್ಳುವವನಾಗಿದ್ದಾನೆ – 1 ಥೆಸ 4:16-18. **19**

**1:19** *"ಶಕ್ತಿ"*– ದೇವರ ಶಕ್ತಿ ನಮ್ಮಲ್ಲಿ ಕಾರ್ಯಮಾಡುತ್ತಿದೆ ಮತ್ತು ನಮ್ಮ ನಿರೀಕ್ಷೆಯನ್ನು ಖಂಡಿತವಾಗಿ ನೆರವೇರಿಸುತ್ತಾನೆ. ಆತನು ತನ್ನ ಬಾಧ್ಯತೆಯನ್ನು ಹೊಂದಿಕೊಳ್ಳುವದು ನಿಶ್ಚಯವಾಗಿದೆ. ಆತನ ಶಕ್ತಿಯು ಬಹಳ ಶ್ರೇಷ್ಟವಾಗಿದೆ ಅದನ್ನು ಬೇರೆ ಯಾವ ಶಕ್ತಿಗೂ ಹೋಲಿಸಲು ಸಾಧ್ಯವಿಲ್ಲ. ಆದ್ದರಿಂದ ಆತನು ತನ್ನ ಜನರನ್ನು ಸುರಕ್ಷಿತವಾಗಿ ಕಾಪಾಡಲು ಶಕ್ತನಾಗಿದ್ದಾನೆ – ಯೋಹಾನ 10:29. ಮುಂದಿನ ವಚನಗಳಲ್ಲಿ ಪೌಲನು ದೇವರ ಶಕ್ತಿಯು ಏನು ಮಾಡಿದೆ ಎಂಬುದನ್ನು ಮತ್ತು ನಮಗೆ ಆತನ ಶಕ್ತಿ ಏನು ಮಾಡಬಹುದೆಂದು ನಾವು ತಿಳುಕೊಳ್ಳುವದಕ್ಕೆ ಇದು ಉದಾಹರಣೆಯನ್ನು ಕೊಡುತ್ತಾನೆ. **20,21**

**1:20,21** ಕ್ರಿಸ್ತನ ಪುನರುತ್ಥಾನ ಮತ್ತು ಆರೋಹಣದಲ್ಲಿ ಮಾನವ ಚರಿತ್ರೆಯಲ್ಲಿ ಕಾಣದ ದೇವರ ಮಹತ್ತಾದ ಶಕ್ತಿಯ ಪ್ರದರ್ಶನವನ್ನು ನಾವು ಕಾಣುತ್ತೇವೆ – ಮತ್ತಾಯ 28:6; ಮಾರ್ಕ 16:6,19; ಲೂಕ 24:6,7,51; ಅಪೊ 1:3,9; 2:32,33; ರೋಮಾ 1:4; ಫಿಲಿಪ್ಪಿ 2:9-11; ಇಬ್ರಿ 1:3. ಕ್ರಿಸ್ತನು ತನ್ನ ತಂದೆಯ ಸಿಂಹಾಸನದ ಮೇಲೆ ಕುಳಿತುಕೊಂಡಿದ್ದಾನೆ, ಸೃಷ್ಟಿಸಲ್ಪಟ್ಟ ಲೋಕದ ಶಕ್ತಿಗಿಂತಲೂ ಮತ್ತು ಅಧಿಕಾರಗಳಿಗಿಂತಲೂ ಆತನನ್ನು ಅತ್ಯುನ್ನತ ಸ್ಥಾನಕ್ಕೇರಿಸಿದ್ದಾನೆ – ಕೊಲೊ 2:10; ಪ್ರಕ 1:5. ಯೇಸುವಿನ ಶಕ್ತಿ, ಅಧಿಕಾರ, ಮಹಿಮೆ ಮತ್ತು ಘನತೆಗೆ ಹತ್ತಿರವಾದ ಮನುಷ್ಯನಾಗಲಿ, ಜೀವಿಸಿದ ಮತ್ತು ಈಗ ಜೀವಿಸುತ್ತಿರುವ ದೇವದೂತರಾಗಲಿ ಇಲ್ಲ. ಮತ್ತು ಆತನನ್ನು ಮರಣದಿಂದ ಎಬ್ಬಿಸಿದ ದೇವರ ಅದೇ ಶಕ್ತಿಯು ನಮಗಾಗಿ ಮತ್ತು ನಮ್ಮೊಳಗೆ ಕೆಲಸ ಮಾಡುತ್ತಿದೆ – ವ.19. ಹೀಗೆ ನಾವು ಪೂರ್ಣ ಜಯಶಾಲಿಗಳಾಗಬಹುದು – ರೋಮಾ 8:37. ಹೀಗೆ ನಾವು ಈ ಕೆಟ್ಟ ಲೋಕದಲ್ಲಿ ನಿಜವಾಗಿಯೂ ಕ್ರಿಸ್ತನ ಸೇವೆಯನ್ನು ಮಾಡಬಹುದು, ಲೋಕವನ್ನು, ಶರೀರವನ್ನು ಮತ್ತು ಸೈತಾನನ್ನು ಜೈಸಬಹುದು ಮತ್ತು ನಮ್ಮ ಲೌಕಿಕ ಜೀವಿತವನ್ನು ಸಂತೋಷದಿಂದ ಮುಕ್ತಾಯಗೊಳಿಸಬಹುದು. ನಾವು ಹಾಗೆ ಮಾಡದಿದ್ದರೆ, ಅದಕ್ಕೆ ಕಾರಣ ನಾವು ನಮಗೆ ಲಭ್ಯವಿರುವ ಶಕ್ತಿಯನ್ನು ಉಪಯೋಗಿಸುತ್ತಿಲ್ಲ. **22,23**

**1:22,23** *"ಆತನ ಪಾದದ ಕೆಳಗೆ"*– ಅಪೊ 2:34-36; ಇಬ್ರಿ 1:13; 2:8,9; 10:13.

*"ಶಿರಸ್ಸು"*– 4:15; 5:23; ಕೊಲೊ 1:18; 2:19. ನಿಜವಾದ ಸಭೆಗೆ ಕ್ರಿಸ್ತನು ಮಾತ್ರವೇ ಶಿರಸ್ಸಾಗಿದ್ದಾನೆ ಅಥವಾ ಆಗಬಹುದು. ಶಿರಸ್ಸು ಎಂದರೆ ನಿರ್ದೇಶಕ. ಅದು ಯೋಚಿಸುವ ಮತ್ತು ಯೋಜಿಸುವ ಮನಸ್ಸಿಗೆ ಮತ್ತು ಮೆದುಳಿಗೆ ಸಲಹೆಯನ್ನು ಕೊಡುತ್ತದೆ ಮತ್ತು ದೇಹಕ್ಕೆ ಅಪ್ಪಣೆಯನ್ನು ಕೊಡುತ್ತದೆ. ಕ್ರಿಸ್ತನು ಸಭೆಯ ಮೇಲೆ ಕೇವಲ ಅಧಿಕಾರಿಯಲ್ಲ, ಆತನು ದೇವರ ಆತ್ಮನ ಮೂಲಕ ಅಧಿಕಾರವನ್ನು ಹೊಂದಿದ್ದಾನೆ. ಅದೇ ಜೀವ ಮತ್ತು ಅದೇ ಆತ್ಮನು ಆತನಲ್ಲಿದ್ದಾನೆ. "ಸಭೆ" ಇಲ್ಲಿ ಇದು ನಿಜವಾದ ವಿಶ್ವಾಸಿಗಳಿಂದ ಮಾಡಲ್ಪಟ್ಟ ಆತ್ಮೀಕ ದೇಹವಾಗಿದೆ – ಯೋಹಾನ 17:20-23; 1 ಕೊರಿಂಥ 12:12,13; ಮತ್ತಾಯ 16:18 ರ ಟಿಪ್ಪಣಿ. **23**

**1:23** *"ಪರಿಪೂರ್ಣತೆ"*– ಕ್ರಿಸ್ತನು ಜಗತ್ತನ್ನು ತುಂಬವವನಾಗಿದ್ದಾನೆ – 4:10; ಕೊಲೊ 1:17. ನಿಜವಾದ ಸಭೆಯು ಆತನ ಸಂಪೂರ್ಣತೆ, ಆತನ ಪರಿಪೂರ್ಣತೆಯಾಗಿದೆ. ದೇಹವಿಲ್ಲದೆ ತಲೆಯನ್ನು ಸಂಪೂರ್ಣವಾದ ದೇಹವೆಂದು ಹೇಳಲಾಗದು. ಇದು ವ.23 ರ ಒಂದು ವ್ಯಾಖ್ಯಾಯನವಾಗಿದೆ. ಇನ್ನೊಂದು ವ್ಯಾಖ್ಯಾಯನ ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿದೆ. ಕೊಲೊ 2:9,10 ಹೋಲಿಸಿರಿ.

# 2 1-10

**2:1-10** ಈ ವಚನಗಳಲ್ಲಿ ಪೌಲನು 1:19 ರಲ್ಲಿ ಪರಿಚಯಿಸಿದ ವಿಷಯವನ್ನು ಮುಂದುವರಿಸುತ್ತಾನೆ – "ನಮಗಾಗಿ ಆತನ ಪ್ರಖ್ಯಾತಿಯುಳ್ಳ ಶಕ್ತಿ" – 1:20-23 ರಲ್ಲಿ ಆತನು ಕ್ರಿಸ್ತನಲ್ಲಿ ಹೇಗೆ ತನ್ನ ಶಕ್ತಿಯು ಕೆಲಸ ಮಾಡುತ್ತದೆಂಬುದನ್ನು ತೋರಿಸಿದನು. ಈಗ ಆ ಶಕ್ತಿಯು ವಿಶ್ವಾಸಿಗಳಲ್ಲಿ ಮತ್ತು ವಿಶ್ವಾಸಿಗಳಿಗಾಗಿ ಹೇಗೆ ಕೆಲಸ ಮಾಡುತ್ತದೆಂದು ಅವನು ತೋರಿಸುತ್ತಾನೆ. ದೇವರು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದನು ಮತ್ತು ಪರಲೋಕಕ್ಕೇರಿಸಿದನು (1:20). ವಿಶ್ವಾಸಿಗಳನ್ನು ಆತ್ಮೀಕ ಮರಣದಿಂದ ಎಬ್ಬಿಸಿದ್ದಾನೆ ಮತ್ತು ಅವರನ್ನು ಸಹ ಮೇಲಕ್ಕೇರಿಸಿದ್ದಾನೆ (ವ.5,6). ದೇವರ ಅತ್ಯುನ್ನತವಾದ ಶಕ್ತಿಯು ಕ್ರಿಸ್ತನನ್ನು ಸಭೆಯ ಶಿರಸ್ಸನ್ನಾಗಿ ಮಾಡಿತು (1:22). ಅದೇ ಶಕ್ತಿಯು ವಿಶ್ವಾಸಿಗಳನ್ನು ಕ್ರಿಸ್ತನಲ್ಲಿ ಐಕ್ಯಮಾಡಿ ಹೊಸ ಸೃಷ್ಟಿಗಳನ್ನಾಗಿ ಮಾಡಿತು (ವ. 10). **1**

**2:1** *"ಸತ್ತ"*– ಕ್ರಿಸ್ತನಿಂದ ಬೇರೆಯಾದ ಯಾರಲ್ಲಿಯೂ ನಿಜವಾದ ಆತ್ಮೀಕ ಜೀವನವಿಲ್ಲ. ಎಲ್ಲರೂ ಪಾಪ ಮಾಡಿರುವದರಿಂದ (ರೋಮಾ 3:23) ಕ್ರಿಸ್ತನು ಅವರಿಗೆ ಹೊಸ ಜೀವನವನ್ನು ಕೊಡುವ ತನಕ ಪ್ರತಿಯೊಬ್ಬ ವ್ಯಕ್ತಿಯೂ ಆತ್ಮಿಕವಾಗಿ ಸತ್ತವನಾಗಿದ್ದಾನೆ. ಮರಣವೆಂದರೆ ದೇವರ ಜೀವದಿಂದ ಮತ್ತು ಅನ್ಯೋನ್ಯತೆಯಿಂದ ದೂರವಾಗಿರುವುದು – 4:18; ಯೆಶಾಯ 59:1,2. ಆದಿ 2:17; ಯೋಹಾನ 5:24; ರೋಮಾ 7:5; 8:6; ಕೊಲೊ 2:13; 1 ತಿಮೊ 5:6; ಯಾಕೋಬ 1:15; 1 ಯೋಹಾನ 3:14. ಆದಕಾರಣ ಹೊಸದಾಗಿ

ಹುಟ್ಟುವುದು ರಕ್ಷಣೆಗೆ ಅತ್ಯಾವಶ್ಯಕವಾಗಿದೆ. ಯೋಹಾನ 1:12,13; 3:3-8. **2**

**2:2** *"ಈ ಲೋಕದ ಶಾಪ"*– 1 ಯೋಹಾನ 2:16; ಯೋಹಾನ 1:10; 7:7; 14:17; 16:8; ರೋಮಾ 12:2; 1 ಕೊರಿಂಥ 1:21; ಯಾಕೋಬ 4:4; 2 ಪೇತ್ರ 1:4. ಲೋಕದ ಮಾರ್ಗವು ಆತ್ಮೀಕ ಮರಣದಿಂದ ಹೊರ ಬರುತ್ತದೆ ಮತ್ತು ಶಾಶ್ವತ ಮರಣಕ್ಕೆ ನಡೆಸುತ್ತದೆ. "ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿ" ಯು ಸೈತಾನನು. ಆತನು ಆತ್ಮ ಜೀವಿ ಪರಲೋಕದ ಕೆಳ ವಲಯದಲ್ಲಿ ಸುತ್ತಾಡುತ್ತಿರುತ್ತಾನೆ (6:12), ಮತ್ತು ಭೂಮಂಡಲದ ಮೇಲೆ ತನ್ನ ಅಧಿಕಾರವನ್ನು ನಡೆಸುತ್ತಾನೆ. ಅವನನ್ನು ಭೂಲೋಕದ "ದೇವರು" ಮತ್ತು "ಅಧಿಪತಿ" ಎಂದು ಕರೆಯಲಾಗುತ್ತದೆ – ಯೋಹಾನ 12:31; 2 ಕೊರಿಂಥ 4:4. ಕರ್ತನಾದ ಯೇಸು ಕ್ರಿಸ್ತನಿಗೆ ಅವಿಧೇಯರಾಗುವ ಎಲ್ಲರಲ್ಲಿ ತನ್ನ ಕೆಲಸವನ್ನು ಮಾಡುವವನಾಗಿದ್ದಾನೆ. ಯೋಹಾನ 8:44; ಅಪೊ 5:3; 2 ತಿಮೊ 2:26 ಹೋಲಿಸಿರಿ. **3**

**2:3** *"ನಾವೆಲ್ಲರೂ"*– ರೋಮಾ 3:9,19; ತೀತ 3:3.

*"ಸ್ವಾಭಾವಿಕವಾಗಿ"*– ಅಂದರೆ ಹುಟ್ಟುವಾಗ ನಮ್ಮ ತಂದೆತಾಯಿಗಳಿಂದ ಪಡೆದ ಸ್ವಭಾವ. ಆದಿ 8:21; ಕೀರ್ತನೆ 51:5; 58:3; ರೋಮಾ 3:9-19.

*"ಕೋಪ"*– ಪಾಪದ ಮೇಲೆ ದೇವರಿಗಿರುವ ಕೋಪವು ಸತ್ಯವೇದದ ಎಲ್ಲೆಡೆಯಲ್ಲಿಯೂ ಕಾಣುತ್ತೇವೆ. ಸಂಖ್ಯಾ 25:3; ಕೀರ್ತನೆ 90:7-11; ಯೋಹಾನ 3:36; ರೋಮಾ 1:18. ಕೋಪದ "ಮಕ್ಕಳಾಗುವದು" ಎಂದರೆ ದೇವರ ಕೋಪಕ್ಕೆ ಗುರಿಯಾಗುವ ವಸ್ತುಗಳು, ಆತನ ಕೋಪದ ಕೆಳಗೆ, ಆತನ ಕೋಪಕ್ಕೆ ಅರ್ಹರು. **4**

**2:4** *"ಕರುಣಾ ನಿಧಿ"*– ಕೀರ್ತನೆ 5:7; 51:1; ಮೀಕ 7:18; ರೋಮಾ 2:4; 10:12; ತೀತ 3:5; ಯಾಕೋಬ 5:11; 1 ಪೇತ್ರ 1:3. ಪಾಪಿಗಳಾಗಿ ನಾವೆಲ್ಲರೂ ದೇವರ ಕೋಪ ಮತ್ತು ಶಿಕ್ಷೆಗೆ ಅರ್ಹರಾಗಿದ್ದೇವೆ. ಕೃಪೆಯು ಮಾತ್ರ ನಮ್ಮನ್ನು ತಪ್ಪಿಸ ಬಲ್ಲದು, ನಮ್ಮನ್ನು ಕ್ಷಮಿಸಬಲ್ಲದು, ನಮ್ಮನ್ನು ರಕ್ಷಿಸಬಲ್ಲದು. ಬೇರೆಯಾವುದರಲ್ಲಿಯೂ ನಿರೀಕ್ಷೆ ಇಲ್ಲ.

*"ಮಹಾ ಪ್ರೀತಿ"*– ಯೋಹಾನ 3:16; ರೋಮಾ 5:8; 1 ಯೋಹಾನ 3:16; 4:8,9. **5**

**2:5** ದೇವರು ವಿಶ್ವಾಸಿಗಳಿಗೆ ಆತ್ಮೀಕ ಜೀವಕೊಟ್ಟಿದ್ದಾನೆ ಮತ್ತು ಅವರನ್ನು ಕ್ರಿಸ್ತನ ಐಕ್ಯಕ್ಕೂ ಮತ್ತು ಅನ್ಯೋನ್ಯತೆಗೂ ತಂದಿದ್ದಾನೆ – ಯೋಹಾನ 1:12,13; 5:21,24; ರೋಮಾ 5:17; 6:4,8; ಕೊಲೊ 2:13; 1 ಪೇತ್ರ 1:3,23; 1 ಯೋಹಾನ 3:9; 5:1,18. ಇದು ದೇವರ ವರವಾಗಿತ್ತು – ವ. 9; ರೋಮಾ 6:23. **6**

**2:6** *"ನಮ್ಮನ್ನು ತನ್ನೊಂದಿಗೆ ಮೇಲಕ್ಕೆತ್ತಿದನು"*– ರೋಮಾ 6:3-5. ಕ್ರಿಸ್ತನು ವಿಶ್ವಾಸಿಗಳೆಲ್ಲರ ಪ್ರತಿನಿಧಿಯಾಗಿದ್ದಾನೆ. ಯಾಕಂದರೆ ಅವರು "ಆತನಲ್ಲಿದ್ದಾರೆ" –(1:3) ಮತ್ತು ಆತನಲ್ಲಿ ಐಕ್ಯಹೊಂದಿದ್ದಾರೆ, ದೇವರು ತನಗೇನಾಗುತ್ತದೋ ಅದನ್ನು ಅವರಿಗೂ ಸಹ ಆದಂತೆ ಎಣಿಸುತ್ತಾನೆ. ಆತನ ದೃಷ್ಟಿಯಲ್ಲಿ ಲೋಕದಲ್ಲಿರುವ ವಿಶ್ವಾಸಿಗಳೆಲ್ಲರು

ಆಗಲೇ ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಸಲ್ಪಟ್ಟಿದ್ದಾರೆ. ಕೊಲೊ 3:1-4 ಹೋಲಿಸಿರಿ. **7**

**2:7** ಇಲ್ಲಿ ನಮಗಾಗಿ ದೇವರ ಅತ್ಯುನ್ನತವಾದ ಉದ್ದೇಶವಿದೆ. ಅದರ ಅರ್ಥವನ್ನು ಗ್ರಹಿಸುವವರು ಯಾರು? ದೇವರು ತನ್ನ ಪ್ರೀತಿಯನ್ನು ನಮ್ಮ ಮೇಲೆ ಸುರಿಸುವ ಮೂಲಕ ಮತ್ತು ಆತನೇ ಊಹಿಸಲಾಗದ ತನ್ನ ಅತ್ಯುನ್ನತ ಆಶೀರ್ವಾದಗಳಿಂದ ಮತ್ತು ವರಗಳಿಂದ ನಮ್ಮನ್ನು ತೃಪ್ತಿಪಡಿಸುತ್ತಾನೆ. ಆತನು ಹೀಗೆ ಮಾಡುವದನ್ನು ನಿತ್ಯತ್ವಕ್ಕೂ ಮುಂದುವರಿಸುತ್ತಾನೆ.

*“ಐಶ್ವರ್ಯ”*– 1:7. **8,9**

**2:8,9** ರಕ್ಷಣೆಯು ಪ್ರಾರಂಭದಿಂದ ಅಂತ್ಯದವರೆಗೂ ಅರ್ಹತೆ ಇಲ್ಲದ ಜನರಿಗೆ ದೇವರು ಕೊಟ್ಟ ವರವಾಗಿದೆ. ಮಾನವನ ಅರ್ಹತೆಯು ಇದರಲ್ಲಿ ಯಾವುದಕ್ಕೂ ಬಾರದು – ಅಪೊ 15:11; ರೋಮಾ 3:24; 4:4; 5:15; 6:23; 11:6; ತೀತ 3:4-7. **8**

**2:8** *“ನಂಬಿಕೆಯ ಮೂಲಕ”*– ಯೋಹಾನ 1:12,13; 3:14-16,36; 5:24; 6:47; ಅಪೊ 13:38; 16:31; ರೋಮಾ 1:16; 3:25,28; 4:16; 5:1; 10:9-13; ಗಲಾ 2:16,21; 3:26.

*“ದೇವರ ವರ”*– ಇದು ರಕ್ಷಣೆ ಮತ್ತು ಅದರ ಮೂಲಕ ಬರುವ ನಂಬಿಕೆಯನ್ನು ಸೂಚಿಸುತ್ತದೆ. ನಮ್ಮ ನಂಬಿಕೆಯು ಸಹ ದೇವರ ವರವಾಗಿದೆ ಮತ್ತು ಅದರ ಕುರಿತಾಗಿ ಮತ್ತು ನಮ್ಮ ಕುರಿತಾಗಿ ನಾವು ಕೊಚ್ಚಿಕೊಳ್ಳಲು ಸಾಧ್ಯವಿಲ್ಲ (ಅಪೊ 18:11; ಫಿಲಿಪ್ಪಿ 1:29; 2 ಪೇತ್ರ 1:1). ದೇವರ ಕೆಲಸವು ಒಬ್ಬನ ಮನಸ್ಸಿನಲ್ಲಿ ಮತ್ತು ಹೃದಯದಲ್ಲಿ ನಡೆಯದ ಹೊರತು ಕ್ರಿಸ್ತನನ್ನು ನಂಬಲು ಸಾಧ್ಯವಿಲ್ಲ. ದೇವರ ರಕ್ಷಣೆಯ ಮಾರ್ಗದಲ್ಲಿ ಕೊಚ್ಚಿಕೊಳ್ಳುವದಕ್ಕೆ ಆಸ್ಪದವಿಲ್ಲ – ರೋಮಾ 3:27; 1 ಕೊರಿಂಥ 1:29-31. ಯಾವನಾದರು ನಾನು ಹೀಗಿರುವದರಿಂದ ಅಥವಾ ಅವನು ಏನೋ ಮಾಡಿರುವದರಿಂದ ಅಥವಾ ಅವನಲ್ಲಿ ಏನೋ ಒಳ್ಳೆಯದು ಇರುವುದರಿಂದ ಅಥವಾ ಯಾವುದೋ ಧರ್ಮದೊಂದಿಗೆ ಸಂಪರ್ಕವಿರುವದರಿಂದ ಅಥವಾ ಆ ರೀತಿಯ ಯಾವುದೇ ಕಾರ್ಯದಿಂದ ರಕ್ಷಿಸಲ್ಪಟ್ಟೆನು ಎಂದು ಕೊಚ್ಚಿಕೊಂಡರೆ, ಅವನು (ಅಥವಾ ಅವಳು) ದೇವರ ರಕ್ಷಣೆಯ ಮಾರ್ಗವನ್ನು ಅರ್ಥಮಾಡಿಕೊಂಡಿಲ್ಲವೆಂದು ನಾವು ನಿಶ್ಚಯವಾಗಿ ಹೇಳಬಹುದು. ಯಾವುದೇ ರೀತಿಯ ಕೆಲಸದ ಮೂಲಕ ರಕ್ಷಣೆಯನ್ನು ಪಡೆಯುವದು ಅಸಾಧ್ಯ. ಪಾಪಿಗಳ ಎಲ್ಲಾ ಕೆಲಸಗಳು (ಮತ್ತು ಪಾಪಿಗಳೆಲ್ಲರು – ರೋಮಾ 3:23) ಪಾಪದಿಂದ ಕಲೆಯಾಗಲ್ಪಟ್ಟಿದೆ ಮತ್ತು ದೇವರ ದೃಷ್ಟಿಯಲ್ಲಿ ಒಳ್ಳೆಯದು ಮತ್ತು ಉನ್ನತವಾದದಲ್ಲ (ಯೆಶಾಯ 64:6). ಮತ್ತು ಅವನು ಎಷ್ಟೇ ಕೆಲಸಗಳನ್ನು ಮಾಡಿದರು, ಎಷ್ಟೇ ಸಮಯ ಮಾಡಿದರು, ಅವನು ರಕ್ಷಣೆಯನ್ನು ಸಂಪಾದಿಸಲು ಸಾಧ್ಯವಿಲ್ಲ. **10**

**2:10** ವಿಶ್ವಾಸಿಗಳಿಗೆ ಸಿಕ್ಕ ಹೊಸ ಆತ್ಮೀಕ ಜೀವಿತವು ಅವರು ಸಾಧಿಸಿದ್ದಲ್ಲ, ದೈಹಿಕವಾಗಿ ಈ ಲೋಕದಲ್ಲಿ ಅವರು ಹುಟ್ಟುವಾಗ ಹೇಗೆ ಏನನ್ನೂ ಸಾಧಿಸಲಿಲ್ಲವೋ ಅದರಂತೆಯೇ. ಅದು ದೇವರು ಅವರಲ್ಲಿ ಮಾಡುವ ಕಾರ್ಯವಾಗಿದೆ. ಅದು ಸೃಷ್ಟಿಯ ಕಾರ್ಯ – 2 ಕೊರಿಂಥ 5:17; ಯಾಕೋಬ 1:18; ಯೋಹಾನ 1:13. ದೇವರು ನಮ್ಮಲ್ಲಿ ಯಾಕೆ ಹೊಸ ಜೀವಿತವನ್ನು ಸೃಷ್ಟಿಸಲು ಒಂದು ಕಾರಣವನ್ನು ಗಮನಿಸಿ. ನಾವು ಒಳ್ಳೆಯ ಕೆಲಸಗಳಿಂದ ರಕ್ಷಿಸಲ್ಪಟ್ಟಿಲ್ಲ, ಆದರೆ ಒಳ್ಳೆಯ ಕೆಲಸವನ್ನು ಮಾಡಲು ರಕ್ಷಿಸಲ್ಪಟ್ಟಿದ್ದೇವೆ – ತೀತ 2:14; ಮತ್ತಾಯ 5:16. ದೇವರು ನಮ್ಮನ್ನು ಒಳ್ಳೆಯ ಕೆಲಸವನ್ನು ಮಾಡಲು ಸಿದ್ಧಪಡಿಸಿದ್ದಾನೆ ಮತ್ತು ಆ ಒಳ್ಳೆಯ ಕೆಲಸವು ನಮಗಾಗಿ. ಒಳ್ಳೆಯ ಕೆಲಸವನ್ನು ಮಾಡುವ ಅವಕಾಶಗಳನ್ನು ನಮ್ಮೆಲ್ಲರ ಮುಂದೆ ಇಟ್ಟಿದ್ದಾನೆ. ಒಳ್ಳೆಯ ಕೆಲಸಗಳು ರಕ್ಷಣೆಯ ಫಲವಾಗಿದೆ. ನಾವು ಒಳ್ಳೆಯ ಕೆಲಸವನ್ನು ಮಾಡದಿದ್ದರೆ ನಾವು ದೇವರ ಕೈ ಕೆಲಸದವರಲ್ಲವೆಂದು ತೋರಿಸಿಕೊಳ್ಳುತ್ತೇವೆ (ಮತ್ತಾಯ 7:16-20; ಮುಂತಾದ). ನಮ್ಮಲ್ಲಿರುವ ಹೊಸ ಜೀವಿತವು, ಒಳ್ಳೆಯ ಮರವು ನಿಶ್ಚಯವಾಗಿ ಒಳ್ಳೆಯ ಫಲವನ್ನು ಕೊಡುವ ರೀತಿಯಲ್ಲಿಯೇ ಒಳ್ಳೆಯ ಫಲವನ್ನು ಕೊಡುತ್ತದೆ. ವಿಶ್ವಾಸಿಗಳು ದೇವರ ಕೈ ಕೆಲಸದವರಾದ್ದರಿಂದ ಆತನು ತನ್ನ ಕೆಲಸವನ್ನು ಮುಗಿಸುತ್ತಾನೆಂದು ಮತ್ತು ಅದನ್ನು ಹೋಗುವ ದಾರಿಯಲ್ಲಿಯೇ ಬಿಟ್ಟುಬಿಡುವದಿಲ್ಲವೆಂದು ನಾವು ನಂಬಬೇಕು – ಫಿಲಿಪ್ಪಿ 1:6.

*"ಚಟುವಟಿಕೆಯುಳ್ಳವರಾಗಿರಿ"*– ಗ್ರೀಕ್ ಪದವನ್ನು ಈ ರೀತಿಯಾಗಿಯೂ ಭಾಷಾಂತರಿಸಬಹುದು "ನಡೆ", "ಮುಂದೆ ಹೋಗು", "ಜೀವಿಸು", "ವರ್ತಿಸು", "ನಡವಳಿಕೆಯನ್ನು ಸರಿಪಡಿಸಿಕೋ", "ಕೆಲಸದಲ್ಲಿರು", ಮುಂತಾದ, ಸನ್ನಿವೇಶವನ್ನು ಕುರಿತು. ಪೌಲನ ಪತ್ರಿಕೆಯಲ್ಲಿ (ಮತ್ತು ಯೋಹಾನ) ಅಕ್ಷರಶಃ ನಡೆಯುವುದನ್ನು ಎಂದಿಗೂ ಉಪಯೋಗಿಸಲಿಲ್ಲ. **11-12**

**2:11-12** ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ ಜನಾಂಗವು ದೇವರ ವಿಶೇಶವಾದ ಜನಾಂಗವಾಗಿತ್ತು. ದೇವರು ಅವರಿಗೆ ತನ್ನ ವಾಕ್ಯವನ್ನು ಕೊಟ್ಟನು, ಆತನ ಧರ್ಮಶಾಸ್ತ್ರ, ಆತನ ಆಜ್ಞೆಗಳು, ಮುಂತಾದವುಗಳು – ರೋಮಾ 9:4,5. ಲೋಕದ ಬೇರೆ ಜನಾಂಗಗಳಿಗೆ (ಅನ್ಯರು) ಅದರಲ್ಲಿ ಪಾಲಿರಲಿಲ್ಲ – ವ.12. ಅವರು ಅದಕ್ಕೆ ತುಂಬಾ ದೂರವಿದ್ದರು – ವ.13. ಮತ್ತು ಇಸ್ರಾಯೇಲ್ಯರ ಮತ್ತು ಬೇರೆ ಎಲ್ಲಾ ಜನಾಂಗದವರ ನಡುವೆ ವೈರತ್ವವಿತ್ತು – ವ.14. ಈಗ, ದೇವರು ಅದನ್ನೆಲ್ಲಾ ಬದಲಾಯಿಸಿದ್ದಾನೆಂದು ಪೌಲನು ಹೇಳುತ್ತಾನೆ. ಕ್ರಿಸ್ತನಲ್ಲಿ ಇನ್ನು ಮೇಲೆ ಅನ್ಯಜನಾಂಗದವರಿಗೂ ಮತ್ತು ಯೆಹೂದ್ಯರ ಹಿನ್ನೆಲೆಯಿರುವವರ ನಡುವೆ ಬೇದವಿಲ್ಲ – ವ. 14-22. ಕ್ರಿಸ್ತನಲ್ಲಿ ಎಲ್ಲ ವಿಶ್ವಾಸಿಗಳು ಒಂದೇ ಆಗಿದ್ದಾರೆ. 1 ಕೊರಿಂಥ 12:12,13; ಗಲಾ 3:28 ಹೋಲಿಸಿರಿ. **11**

**2:11** *"ಅನ್ಯಜನರು"*– ಯೆಹೂದ್ಯರಲ್ಲದ ಬೇರೆ ಜನರು. ಯೆಹೂದ್ಯರು ("ಸುನ್ನತಿ")

ಅವರನ್ನು “ಸುನ್ನತಿಯಿಲ್ಲದವರು” –ಎಂದು ಕರೆಯುತ್ತಿದ್ದರು. ಇದು ತಿರಸ್ಕಾರದ ಪದವಾಗಿತ್ತು –ನ್ಯಾಯ 14:3; 15:18; 1 ಸಮು 14:6; 17:26; 2 ಸಮು 1:20. ಸುನ್ನತಿ ಟಿಪ್ಪಣಿಗಾಗಿ ಆದಿ 17:9-14; ಗಲಾ 5:6. **12**

**2:12** ಈ ಭೂಲೋಕದ ಜನರು ಕ್ರಿಸ್ತನಿಂದ ದೂರವಿರುವುದು ಇನ್ನು ದುಃಖಕರವಾದ ಸ್ಥಿತಿಯಾಗಿದೆ – ಸತ್ಯ ದೇವರು ಅವರಲ್ಲಿ ಇಲ್ಲ, ಮತ್ತು ರಕ್ಷಣೆಯ ವಿಷಯವಾಗಿ ನಿಜವಾದ ಮತ್ತು ಸರಿಯಾದ ನಿರೀಕ್ಷೆ ಅವರಿಗಿಲ್ಲ (1 ಯೋಹಾನ 2:23; 5:11,12, ಗಲಾ 4:8). **13**

**2:13** *“ನೀವು” ಅಂದರೆ “ಅನ್ಯಜನರಾದ ನೀವು”*– ಅವರು ತಮ್ಮ ಪಾಪದ ಮತ್ತು ಅವಿಶ್ವಾಸದ ನಿಮಿತ್ತ ದೇವರಿಂದ ದೂರವಿದ್ದರು. ಆದರೆ “ಕ್ರಿಸ್ತನಲ್ಲಿ” –ಅವರನ್ನು ದೇವರ ಹತ್ತಿರಕ್ಕೆ ತಂದನು. ದೇವರ ಸನ್ನಿಧಾನಕ್ಕೆ ಮಾರ್ಗವು ಎಲ್ಲ ವಿಶ್ವಾಸಿಗಳಿಗೂ ತೆರೆದಿದೆ – ಇಬ್ರಿ 10:9-22. **14**

**2:14** *“ನಮ್ಮ ಸಮಾಧಾನ”*– ನಂಬುವ ಯೆಹೂದ್ಯರ ಮತ್ತು ಅನ್ಯಜನರ ನಡುವೆ ಕರ್ತನಾದ ಯೇಸುವು ಸಮಾಧಾನವಾಗಿದ್ದಾನೆ. ಆತನಲ್ಲಿ ಎಲ್ಲಾ ಜನಾಂಗದ ಅಡೆತಡೆಗಳು ನಾಶವಾಯಿತು ಮತ್ತು ಅಲ್ಲಿ ಐಕ್ಯತೆ ಮತ್ತು ಒಂದತ್ವವಿದೆ. **15**

**2:15** *“ಆತನ ದೇಹದಲ್ಲಿ”*– ಅನ್ಯಜನರ ಮತ್ತು ಯೆಹೂದ್ಯರ ನಡುವೆ ಇದ್ದಂತಹ ಹಗೆತನವನ್ನು ಕ್ರಿಸ್ತನು ಶಿಲುಬೆಯ ಮೇಲೆ ನಾಶಪಡಿಸಿದನು – ವ.16. ಬೇಧ ಮತ್ತು ಹಗೆತನವನ್ನು ಸೃಷ್ಟಿಸಿದ ಕಾರ್ಯವನ್ನು ನಿರ್ಮೂಲ ಮಾಡಿದನು – ಧರ್ಮಶಾಸ್ತ್ರವು ಮೋಶೆಯಿಂದ ಕೊಡಲ್ಪಟ್ಟಿತು (ರೋಮಾ 7:4; 10:4). ಈ ಹಗೆತನವು ಕ್ರಿಸ್ತನಲ್ಲಿ ಮಾತ್ರ ನಾಶವಾಗುತ್ತದೆ. ಕ್ರಿಸ್ತನಿಂದ ದೂರವಿರುವವರಲ್ಲಿ ಅನೇಕ ವೇಳೆ ಅಸ್ತಿತ್ವದಲ್ಲಿರುತ್ತದೆ.

*“ಒಬ್ಬ ಹೊಸ ಮನುಷ್ಯ”*– ಇದರ ಅರ್ಥ ಎಲ್ಲಾ ಯೆಹೂದ್ಯ ಮತ್ತು ಅನ್ಯ ವಿಶ್ವಾಸಿಗಳು ಒಂದೇ ದೇಹವಾಗಿದ್ದಾರೆ ಕ್ರಿಸ್ತನು ಅದರ ಶಿರಸ್ಸಾಗಿದ್ದಾನೆ. ಇದು “ಹೊಸದು” ಯಾಕಂದರೆ ಇದರಂತೆ ಮೊದಲು ಯಾವುದು ಇರಲಿಲ್ಲ ಮತ್ತು ಇದು ಹೊಸ ಆತ್ಮೀಕ ಜೀವಿತದಲ್ಲಿ ಹೊಸ ಸೃಷ್ಟಿಯಾಗಿದೆ. **16**

**2:16** *“ಸಂದಾನ”*– ರೋಮಾ 5:10; 2 ಕೊರಿಂಥ 5:18,19 ಟಿಪ್ಪಣಿ. **17**

**2:17** *“ಆತನು ಬಂದು”*– ಕರ್ತನಾದ ಯೇಸು ಬಂದನು. ಆತನು ಸಮಾಧಾನದ ಪ್ರಭು, ಆತನು ಸಮಾಧಾನವನ್ನು ಮನುಷ್ಯರ ನಡುವೆ ಮತ್ತು ದೇವರನ್ನು ಸ್ವೀಕರಿಸಿದ ಮನುಷ್ಯರು ಮತ್ತು ದೇವರ ನಡುವೆ ಸಮಾಧಾನವನ್ನು ಕೊಡಲು ಬಂದನು – ಯೆಶಾಯ 9:6; ಲೂಕ 1:79; ಯೋಹಾನ 14:27; 16:33; ಅಪೊ 10:36; 2 ಕೊರಿಂಥ 5:20. ಆತನು ತಾನೇ ಸಮಾಧಾನವನ್ನು ಸಾರಿದನು ಮತ್ತು ತನ್ನ ಅಪೋಸ್ತಲರ ಮೂಲಕ ಮತ್ತು ತನ್ನ ಸೇವಕರ ಮೂಲಕವಾಗಿ ಈಗಲು ಎಲ್ಲೆಡೆಯಲ್ಲಿಯೂ ಸಾರುತ್ತಿದ್ದಾನೆ.

*“ದೂರವಾಗಿದ್ದ”*– ಅನ್ಯಜನರು – ವ.13.

*"ಹತ್ತಿರ"*– ಯೆಹೂದ್ಯರು. **18**

**2:18** 3:12; ರೋಮಾ 5:2; ಇಬ್ರಿ 10:19-22 ನೋಡಿರಿ. ಈಗ ಎಲ್ಲರೂ ಅನ್ಯ ಜನರಾಗಲೀ ಅಥವಾ ಯೆಹೂದ್ಯರಾಗಲೀ ನೇರವಾಗಿ ಕ್ರಿಸ್ತನ ಮೂಲಕವಾಗಿ ದೇವರ ಬಳಿಗೆ ಬರಬಹುದು. ತ್ರೈಯೇತ್ವವನ್ನು ಇಲ್ಲಿ ಗಮನಿಸಿ – ನಾವು ದೇವಕುಮಾರನ ಮೂಲಕ ಪವಿತ್ರಾತ್ಮನಿಂದ ತಂದೆಯಾದ ದೇವರನ್ನು ಸಮೀಪಿಸುತ್ತೇವೆ. **19**

**2:19** ವ.12 ಕ್ಕೆ ತದ್ವಿರುದ್ಧವಾಗಿದೆ. . "ಒಂದೇ ಸಂಸ್ಥಾನದವರು" ಇದು ಒಂದು ಪಟ್ಟಣ ಅಥವಾ ದೇಶದ ಸಂಪರ್ಕವನ್ನು ಸೂಚಿಸುತ್ತದೆ. ಗಲಾ 4:26; ಫಿಲಿಪ್ಪಿ 3:20; ಇಬ್ರಿ 11:16; 12:22 ಹೋಲಿಸಿರಿ. "ದೇವರ ಕುಟುಂಬದವರು" ದೇವರಿಗೆ ಕುಟುಂಬವಿದೆ. ಅದು ಎಲ್ಲಾ ಮನುಷ್ಯರಿಂದ ಮಾಡಲ್ಪಟ್ಟಿಲ್ಲ ಆದರೆ ಆತನ ಆತ್ಮನಿಂದ ಹುಟ್ಟಿದ ಮನುಷ್ಯರಿಂದ ಮಾಡಲ್ಪಟ್ಟಿದೆ – ವ.5. ಆತ್ಮೀಕವಾಗಿ ಮಾತಾಡುವುದಾದರೆ ಎಲ್ಲಾ ವಿಶ್ವಾಸಿಗಳು ಸಹೋದರ ಮತ್ತು ಸಹೋದರಿಯರಾಗಿದ್ದಾರೆ ದೇವರು ಅವರ ತಂದೆಯಾಗಿದ್ದಾನೆ – 2 ಕೊರಿಂಥ 6:17,18. **20-22**

**2:20-22** ಕ್ರಿಸ್ತನಲ್ಲಿರುವ ವಿಶ್ವಾಸಿಗಳು ದೇವರ ಮನೆಯಾಗಿದ್ದಾರೆ, ದೇವರ ಆಲಯ. 1 ಕೊರಿಂಥ 3:16; 6:19; 1 ಪೇತ್ರ 2:4,5. ವಿಶ್ವಾಸಿಗಳು ದೇವರಿಗೆ ಏನಾಗಿದ್ದಾರೆಂದು ಹೇಳಲು ಪೌಲನು ಉಪಯೋಗಿಸುವ ಅನೇಕ ಪದ ವಿನ್ಯಾಸಗಳನ್ನು ನೋಡಿರಿ. ಅವರು ದೇವರ ಮಕ್ಕಳಾಗಿದ್ದಾರೆ (ಎಫೆ 1:5), ದೇವರ ಬಾಧ್ಯಸ್ಥರು (1:18), ದೇವಕುಮಾರನ "ದೇಹ" (1:23), ದೇವರ ಕೈ ಕೆಲಸ (2:10), ದೇವಜನರು, ಪರಲೋಕ ಸಂಸ್ಥಾನದವರು ಮತ್ತು ದೇವರ ಮನೆಯವರು (2:19), ಮತ್ತು ದೇವರ ಆಲಯ (ವ.21). ದೇವಾಲಯವು ಆರಾಧನೆ ನಡೆಯುವ ಮತ್ತು ಕಾಣಿಕೆಗಳನ್ನು ಅರ್ಪಿಸುವ ಸ್ಥಳವಾಗಿದೆ. ಹಾಗಿರುವದರಿಂದ ಅದು ದೇವಜನರಿಂದ ಸಂಯೋಜಿಸಲಾದ ದೇವರು ವಾಸಿಸುವ ಆಲಯವಾಗಿದೆ (ರೋಮಾ 12:1; ಇಬ್ರಿ 13:15,16). **20**

**2:20** *"ಅಪೋಸ್ತಲರು"*– 1:1; ಮತ್ತಾಯ 10:2.

*"ಪ್ರವಾದಿಗಳು"*– ಈ ಪದವು ಹಳೆಯ ಒಡಂಬಡಿಕೆಯಿಂದ ಹೊಸ ಒಡಂಬಡಿಕೆಯವರೆಗೂ ಇರುವ ಪ್ರವಾದಿಗಳನ್ನು ಅಥವಾ ಇವರಿಬ್ಬರನ್ನೂ ಸೂಚಿಸುತ್ತದೆ (ಎಫೆ 3:5; 4:11; 1 ಕೊರಿಂಥ 12:28).

*"ಮೂಲೆಗಲ್ಲು"*– 1 ಪೇತ್ರ 2:6; ಯೆಶಾಯ 28:16. ಕಟ್ಟಡ ಕಟ್ಟುವವರು ಮೊದಲು ಮೂಲೆಗಲ್ಲನ್ನು ಕತ್ತರಿಸುತ್ತಾರೆ. ಕಟ್ಟಡದಲ್ಲಿ ಇದು ಮುಖ್ಯವಾದ ಕಲ್ಲಾಗಿದೆ. ಇದಕ್ಕೆ ಸಂಪರ್ಕವಾಗಿ ಕಟ್ಟುವ ಗೋಡೆಗೆ ಇದು ನಿಖರವಾದ ರೇಖೆಯನ್ನು ಕೊಡುತ್ತದೆ, ಪೂರ್ಣಕಟ್ಟಡಕ್ಕೆ ಸ್ಥಿರತೆಯನ್ನು ಮತ್ತು ಸಂಪೂರ್ಣಕಟ್ಟಡಕ್ಕೆ ಸೌಂದರ್ಯವನ್ನು ಕೊಡುತ್ತದೆ. **21**

**2:21** *“ಬೆಳೆಯುತ್ತದೆ”*– ದೇವರ ಕಟ್ಟಡವು ಪೂರ್ಣಗೊಂಡಿಲ್ಲ. ದಿನದಿಂದ ದಿನಕ್ಕೆ ಹೊಸ ವಿಶ್ವಾಸಿಗಳನ್ನು ಆತನು ಕೂಡಿಸುವದರಿಂದ ಅದು ಬೆಳೆಯುತ್ತಾ ಹೋಗುತ್ತದೆ. ಆ ಕಟ್ಟಡವು ಕ್ರಿಸ್ತನಲ್ಲಿ ಒಟ್ಟಾಗಿರುತ್ತದೆ ಮತ್ತು ಕ್ರಿಸ್ತನಲ್ಲಿ ಬೆಳೆಯುತ್ತದೆ. ವಿಶ್ವಾಸಿಗಳು ಜೀವಿಸುವ “ಕಲ್ಲುಗಳು” –ದೇವರ ಆತ್ಮೀಕ ಆಲಯದ ಕಟ್ಟಡಕ್ಕೆ ಜೋಡಿಸಲ್ಪಟ್ಟಿದ್ದಾರೆ – 1 ಪೇತ್ರ 2:5. ಅವರು ಪಾಪ ಮಾಡಿದರೆ ದೇವರು ತನ್ನ ಕಟ್ಟಡದಿಂದ ಆ ಜೀವಿಸುವ ಕಲ್ಲುಗಳನ್ನು ಕಿತ್ತು ಹಾಕುತ್ತಾನೆ ಎಂದು ಯೋಚಿಸಲು ಕಾರಣವಿಲ್ಲ ಅಥವಾ ಪದೇ ಪದೇ ಪಶ್ಚಾತ್ತಾಪಪಡುವುದರಿಂದ ಆತನು ಪುನಃ ಅವರನ್ನು ಜೋಡಿಸುತ್ತಾನೆ ಎಂದು ಯೋಚಿಸುವ ಅಗತ್ಯವಿಲ್ಲ. ದೇವರು ಅದಕ್ಕಿಂತಲೂ ಉತ್ತಮನಾದ ಯೋಜಕನು, ವಾಸ್ತುಶೀಲ್ಪಿ, ಕಟ್ಟುವವನು ಆಗಿದ್ದಾನೆ ಮತ್ತು ಆತನು ಕಲ್ಲುಗಳನ್ನಿಡುವ ಯೋಜನೆಯು ಅದಕ್ಕಿಂತಲೂ ಶಾಶ್ವತವಾದದ್ದಾಗಿದೆ. ಲೋಕದ ಅಸ್ತಿವಾರವನ್ನು ಹಾಕುವ ಮೊದಲೇ ದೇವಾಲಯಕ್ಕೆ ಯಾವ ಕಲ್ಲುಗಳು ಬೇಕೆಂದು ಮತ್ತು ಅವುಗಳನ್ನು ಮುಂಚೆಯೇ ಆರಿಸಿಕೊಂಡನು – 1:4,5 – ಆದ್ದರಿಂದ ಆತನು ಒಂದು ಸಾರಿ ಸ್ಥಿರಪಡಿಸಿದ್ದನ್ನು ತೆಗೆದು ಹಾಕುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. **22**

**2:22** *“ನೀವು ಸಹ”*– ನೀವು ಅನ್ಯಜನರ ವಿಶ್ವಾಸಿಗಳು.

*“ನಿವಾಸಸ್ಥಾನ”*– ವಿಮೋ 25:8; ಪ್ರಕ 21:3 ಟಿಪ್ಪಣಿ ನೋಡಿರಿ. ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಮಾತ್ರ ಈ ಲೋಕದ ಮೇಲೆ ದೇವರ ಆಲಯಗಳಾಗಿದ್ದಾರೆ. ಮನುಷ್ಯರಿಂದ ಕಟ್ಟಲ್ಪಟ್ಟ ಆಲಯಗಳಲ್ಲಿ ಆತನು ಜೀವಿಸುವದಿಲ್ಲ – ಅಪೊ 17:24,25.

# 3 1

**3:1** *“ಹೀಗಿರುವದರಿಂದ”*– 2:20-22.

*“ಸೆರೆಯವನು”*– ಈ ಪತ್ರಿಕೆಯನ್ನು ಬರೆದಾಗ ಪೌಲನು ಸರೆಮನೆಯಲ್ಲಿದ್ದನು. ಕ್ರಿಸ್ತನಿಗೆ ನಂಬಿಗಸ್ತನಾದ್ದರಿಂದ ಮತ್ತು ಕ್ರಿಸ್ತನಿಗಾಗಿ ಅನ್ಯಜನರ ಮಧ್ಯದಲ್ಲಿ ಮಾಡಿದ ಕೆಲಸಕ್ಕಾಗಿ ಅವನು ಸೆರೆಗೆ ಹಾಕಲ್ಪಟ್ಟಿದ್ದನು. (ಅಪೊ 21—22 ಹೋಲಿಸಿರಿ). ಆದ್ದರಿಂದ ಅವನು ತನ್ನನ್ನು ಕ್ರಿಸ್ತನ ಸೆರೆಯವನೆಂದು ಹೇಳುತ್ತಾನೆ. ಮತ್ತು ಕ್ರಿಸ್ತನ ಚಿತ್ತವಿಲ್ಲದೆ ಮನುಷ್ಯರು ತನ್ನನ್ನು ಸೆರೆಗೆ ಹಾಕಲು ಸಾಧ್ಯವಿಲ್ಲವೆಂದು ತಿಳಿದಿದ್ದನು.

*“ಅನ್ಯಜನರು”*– ಈ ವಾಕ್ಯವನ್ನು ಪೌಲನು ಮುಗಿಸಲಿಲ್ಲ. ಅದರ ಅರ್ಥವೇನೆಂದರೆ ಅವನು ಅವರಿಗಾಗಿ ಪ್ರಾರ್ಥಿಸುತ್ತಿದ್ದಾನೆ ಮತ್ತು ಇದನ್ನು ವ.14 ರಲ್ಲಿ ಈ ವಿಷಯವನ್ನು ಎತ್ತಿಕೊಂಡರೂ ಇದನ್ನು ಹೇಳುವುದಿಲ್ಲ. ವಚನಗಳು 2-13 ಅವನ ಮನಸ್ಸಿಗೆ ಬಂದ ಬೇರೆ ವಿಷಯವನ್ನೊಳಗೊಂಡಿದೆ. **2**

**3:2** *“ನಿಮಗೋಸ್ಕರ ನನ್ನನು ಕೊಟ್ಟ”*– ಪೌಲನು ಅನ್ಯಜನಗಳ ಅಪೋಸ್ತಲನಾಗಿದ್ದನು –

ಗಲಾ 2:7-9; ಅಪೊ 9:15; 22:21. **3,4**

**3:3,4** *"ಪ್ರಕಟನೆ"*– ಗಲಾ 1:11,12.

*"ಮರ್ಮ"*– ಮತ್ತಾಯ 13:11; ರೋಮಾ 11:25; 16:25; 1 ಕೊರಿಂಥ 15:51 ಟಿಪ್ಪಣಿ ನೋಡಿರಿ. ಇಲ್ಲಿ ಯಾವ ಮರ್ಮದ ಬಗ್ಗೆ ಪೌಲನು ಮಾತಾಡುತ್ತಿದ್ದಾನೆ? ಅವನು ಅದನ್ನು ವ.6 ರಲ್ಲಿ ಹೇಳುತ್ತಾನೆ.

*"ಸಂಕ್ಷೇಪವಾಗಿ"*– ಈ ಪತ್ರಿಕೆಯ ಮೊದಲ ಎರಡು ಅಧ್ಯಾಯಗಳಲ್ಲಿ ಅವನು ತಿಳಿಸಿದ ಕೆಲವು ವಿಷಯಗಳನ್ನು ಸೂಚಿಸುತ್ತಿರಬಹುದು, ಈ ರೀತಿಯ 1:9; 2:19. **5**

**3:5** ರೋಮಾ 16:25,26; ಕೊಲೊ 1:26,27. ಹೊಸ ಒಡಂಬಡಿಕೆಯಲ್ಲಿ ಈ ಅಪೋಸ್ತಲರ ಮತ್ತು ಬೋಧನೆಗಳು ದಾಖಲಾಗಿರುವದು ಮನುಷ್ಯರಿಂದಲ್ಲ ಆದರೆ ದೇವರ ಪ್ರಕಟನೆಯಿಂದಲೇ. **6**

**3:6** 2:11-22 ರಲ್ಲಿ ಪೌಲನು ಹೇಳಿದ ಕಾರ್ಯಗಳನ್ನು ಇಲ್ಲಿ ಒಟ್ಟುಗೂಡಿಸಿದನು. ಕ್ರಿಸ್ತನ ಸುವಾರ್ತೆಯನ್ನು ನಂಬಿದ ಅನ್ಯಜನರಿಗಿರುವ ಮೂರು ಪ್ರಯೋಜನಗಳನ್ನು ಅವನು ಪಟ್ಟಿ ಮಾಡುತ್ತಾನೆ. ಯೆಹೂದ್ಯ ವಿಶ್ವಾಸಿಗಳೊಂದಿಗೆ ಅವರು ಬಾಧ್ಯಸ್ಥರಾಗಿದ್ದಾರೆ, ಯೇಸುವಿನ ದೇಹವಾದ, ಒಂದೇ ಸತ್ಯ ಸಭೆಯ ಸದಸ್ಯರು ಮತ್ತು ದೇವರ ವಾಗ್ದಾನವನ್ನು ಅವರು ಹಂಚಿಕೊಳ್ಳುತ್ತಾರೆ. "ವಾಗ್ದಾನ" ಇಲ್ಲಿ ಇದು ಸಾಮಾನ್ಯವಾಗಿ ರಕ್ಷಣೆಯನ್ನು ಅಥವಾ ಇನ್ನು ನಿರ್ಧಿಷ್ಟವಾಗಿ ಪವಿತ್ರಾತ್ಮನನ್ನು ಸೂಚಿಸುತ್ತಿರಬಹುದು (1:13). **7,8**

**3:7,8** ಸುವಾರ್ತೆಯ ಸೇವೆಯಲ್ಲಿ ಹೇಗೆ ಪೌಲನು ತನ್ನ ಸೇವೆಯನ್ನು ಪರಿಗಣಿಸಿದನು. ಅವನಿಗೆ ಇದು ದೇವರ ಅದ್ಭುತವಾದ ವರವಾಗಿತ್ತು. ಕ್ರೈಸ್ತರೆಲ್ಲಾ ಈ ವಿಷಯವನ್ನು ಹೀಗೆ ಪರಿಗಣಿಸಿದರೆ ಸಭೆಗಳಲ್ಲಿ ಎಂಥಹ ಬದಲಾವಣೆ ಆಗಬಹುದು! **7**

**3:7** *"ಶಕ್ತಿ"*– 2 ಕೊರಿಂಥ 3:5,6; ಕೊಲೊ 1:29; ಅಪೊ 1:8. ದೇವರ ಶಕ್ತಿಯು ಮಾತ್ರ ಒಬ್ಬನನ್ನು ಸುವಾರ್ತೆಯ ಒಳ್ಳೆಯ ಸೇವಕನನ್ನಾಗಿ ಮಾಡಬಹುದು. **8**

**3:8** *"ಅತ್ಯಲ್ಪನಾದ"*– ಪೌಲನು ತನ್ನನ್ನು ಯಾವ ದೃಷ್ಟಿಯಲ್ಲಿ ಕಾಣುತ್ತಿದ್ದಾನೆಂದು ನೋಡಿರಿ. 1 ಕೊರಿಂಥ 3:5-7; 15:9. ಅವನು ವಿಶ್ವಾಸಿಗಳಲ್ಲಿ ಎಲ್ಲರಿಗಿಂತಲೂ ಅತ್ಯಲ್ಪನಾಗಿದ್ದೇನೆ ಎಂದು ಯೋಚಿಸುತ್ತಾನೆ, ಪಾಪಿಗಳಲ್ಲಿ ಮುಖ್ಯವಾದ ಪಾಪಿ (1 ತಿಮೊ 1:15). ಕೆಲವು ಜನರು ತಮ್ಮ ಬಗ್ಗೆ ವಿರುದ್ಧವಾದ ದೃಷ್ಟಿಯನ್ನಿಟ್ಟುಕೊಂಡಿರುವುದು ದುಃಖಕರವಾಗಿದೆ ಮತ್ತು ವಿಶ್ವಾಸಿಗಳಲ್ಲಿ ತಾವೇ ಉತ್ತಮರಾದವರು ಮತ್ತು ಪಾಪಿಗಳಲ್ಲಿ ಕನಿಷ್ಠರಾದವರೆಂದು ಅಂದುಕೊಳ್ಳುತ್ತಾರೆ.

*"ಅಪ್ರಮೇಯವಾದ ಐಶ್ವರ್ಯ"*– ವ.16,17,18; 2:7. ಕೆಲವರು ಸುವಾರ್ತೆಯನ್ನು ತಿರಸ್ಕಾರ ಮಾಡುವವರಾಗಿದ್ದಾರೆ, ಅದು ಸಾಧಾರಣವಾದದ್ದು, ಹುಚ್ಚುಮಾತು, ಉಪಯೋಗಕ್ಕೆ ಬಾರದ ವಿಷಯ ಎಂದು ಪರಿಗಣಿಸುತ್ತಾರೆ (1 ಕೊರಿಂಥ 1:18,23

ಹೋಲಿಸಿರಿ). ಸುವಾರ್ತೆಯು ಯಾರೂ ಪತ್ತೆ ಹಚ್ಚಲಾರದ ಕ್ರಿಸ್ತನಲ್ಲಿರುವ ಆತ್ಮೀಕ ಐಶ್ವರ್ಯದ ಬಗ್ಗೆ ಮಾತಾಡುತ್ತದೆಂದು ಅವರಿಗೆ ಸ್ವಲ್ಪವೂ ತಿಳಿದಿಲ್ಲ. ಕ್ರಿಸ್ತನ ಈ ಅಪ್ರಮೇಯವಾದ ಐಶ್ವರ್ಯದ ಬಗ್ಗೆ ಇತರರಿಗೆ ಹೇಳುವುದಕ್ಕಿಂತಲೂ ಹೆಚ್ಚಿನ ಕೆಲಸವು ಈ ಲೋಕದಲ್ಲಿ ಬೇರೆ ಯಾವುದಿಲ್ಲ. **9**

**3:9** ಹಿಂದಿನ ಕಾಲದಲ್ಲಿ ದೇವರು ಬೇರೆ ಸತ್ಯಗಳನ್ನು ಮನುಷ್ಯನಿಗೆ ಪ್ರಕಟಿಸಿದನು, ಆದರೆ ಈ ಸತ್ಯವನ್ನು ಕಾಲವು ಪರಿಪೂರ್ಣವಾಗುವವರೆಗೂ ಹಿಂದಿಟ್ಟುಕೊಂಡಿದ್ದನು. ನಂತರ ಇದನ್ನು ಪ್ರಕಟಿಸಲು ಪೌಲನನ್ನು ಆರಿಸಿಕೊಂಡನು.

"*ಸಮಸ್ತವನ್ನು ಸೃಷ್ಟಿಸಿದ*"– ಜಗತ್ತನ್ನು ಸೃಷ್ಟಿಸಿದ ದೇವರ ವಿಷಯವಾಗಿ ಮಾತನಾಡುತ್ತಿದ್ದಾನೆಂದು ಬೇರೆ ಯಾವುದೋ 'ದೇವರ" ಬಗ್ಗೆ ಮಾತನಾಡುತ್ತಿಲ್ಲವೆಂದು ಜನರು ತಿಳಿದುಕೊಳ್ಳಬೇಕೆಂದು ಪೌಲನು ಬಯಸಿದನು (ಆದಿ 1:1). **10**

**3:10** ದೇವರು ಸಭೆಯ ಮೂಲಕ ಬೋಧಿಸುತ್ತಾನೆ (1:22,23). ಮನುಷ್ಯರು ಮಾತ್ರವಲ್ಲ ಆದರೆ ಪರಲೋಕದ ಜೀವಿಗಳು ಸಹ (ಮತ್ತು ಕಲಿಯಬೇಕೆಂದಿದ್ದಾರೆ – 1 ಪೇತ್ರ 1:12). ಯೆಹೂದ್ಯರೊಂದಿಗೂ ಮತ್ತು ಅನ್ಯಜನರೊಂದಿಗೂ ದೇವರ ವ್ಯವಹಾರ, ಎರಡು ಗುಂಪಿನಿಂದಲೂ ವಿಶ್ವಾಸಿಗಳನ್ನು ಕ್ರಿಸ್ತನಲ್ಲಿ ಒಂದು "ದೇಹ" ವಾಗಿ ಆತನು ಮಾಡುವುದು, ಇದನ್ನು ನೆರವೇರಿಸಲು ಕ್ರಿಸ್ತನ ಮರಣ – ಈ ವಿಷಯಗಳು ದೇವರ ಅತ್ಯುನ್ನತ ಜ್ಞಾನದ ಪ್ರಕಟನೆಯಾಗಿದೆ.

"*ರಾಜತ್ವಗಳಿಗೂ ಅಧಿಕಾರಿಗಳಿಗೂ*"– ಅಜ್ಞಾತವಾದ ಆತ್ಮೀಕ ಲೋಕದಲ್ಲಿ ಕೆಟ್ಟವರು (ಎಫೆ 6:12) ಮತ್ತು ಒಳ್ಳೆಯವರು ಇದ್ದಾರೆ (ಕೊಲೊ 1:16; 1 ಪೇತ್ರ 3:22; ದಾನಿ 10:12,13). ಇಲ್ಲಿ ಪೌಲನು ಬಹುಶಃ ಒಳ್ಳೆಯದರ ಬಗ್ಗೆ ಮಾತಾಡುತ್ತಿದ್ದಾನೆ. ಸಭೆಯ ವಿಷಯವಾಗಿ ದೇವರ ಮಾರ್ಗವು ಅವರಿಗೆ ಅದ್ಭುತವಾದದ್ದೂ ಮತ್ತು ಪ್ರಶಂಶನೀಯವಾದದ್ದೂ ಎಂದು ಅವರಿಗೆ ಅನ್ನಿಸಬೇಕು. **11**

**3:11** "*ಶಾಶ್ವತವಾದ ಉದ್ದೇಶ*"– ಈ ಲೋಕದಲ್ಲಿ ಆಗುತ್ತಿರುವ ಸಭೆಯ ರಚನೆ ಮತ್ತು ಬೆಳವಣೆಗೆಯು ಅನಾದಿಕಾಲದ ಸಂಕಲ್ಪದ ಪ್ರಕಾರವಾಗಿ ನಡೆಯುತ್ತಿದೆ – 1:11. **12**

**3:12** 2:18 ನೋಡಿರಿ.

"*ಆತನಲ್ಲಿ*"– ಯೋಹಾನ 14:6.

"*ಸಾನಿಧ್ಯ ಸೇರುವದಕ್ಕೆ ಭರವಸವುಳ್ಳ ಧೈರ್ಯ*"– ಇಬ್ರಿ 4:16; 10:19-22.

"*ನಂಬಿಕೆಯ ಮೂಲಕ*"– ರೋಮಾ 5:2. **13**

**3:13** "*ಧೈರ್ಯಗೆಡಬಾರದೆಂದು*"– ಪೌಲನು ದೇವರ ನಿಜವಾದ ಸೇವಕನಾಗಿದರೆ ಅವನಿಗೆ ಕಷ್ಟಗಳು ಬರಬಾರದೆಂದು ಯೋಚಿಸುವ ಹಾಗೆ ಅವರಿಗೆ ಶೋಧನೆಗಳು ಉಂಟಾಗಿರಬಹುದು. ಅಥವಾ ಅವನು ಹಿಂಸೆಯನ್ನು ಎದುರಿಸಬೇಕಾದರೆ ಅವರು ಸಹ ಅನುಭವಿಸಬೇಕಾಗುತ್ತದೆ

ಎಂದು ಯೋಚಿಸಿರಬಹುದು. ಏನೇ ಆಗಿದ್ದರೂ ಅವರು ಧೈರ್ಯಗೆಡಬಾರದೆಂದು ಪೌಲನು ಬಯಸಿದನು. ಅವನಾದರೋ ಕ್ರಿಸ್ತನಿಗಾಗಿ ಹಿಂಸೆಪಡುವದರಲ್ಲಿ ಅವನು ಸಂತೋಷಿಸಿದನು – ಕೊಲೊ 1:24; 2 ಕೊರಿಂಥ 12:10; ರೋಮಾ 5:3.

*"ಕಷ್ಟಗಳು"*– ವ. 1. 2 ಕೊರಿಂಥ 11:23-29 ಹೋಲಿಸಿರಿ. ಅವನು ಪಡುತ್ತಿದ್ದ ಕಷ್ಟಗಳು ಅವರಿಗಾಗಿ 2 ಕೊರಿಂಥ 1:6; 2 ತಿಮೊ 2:9,10.

*"ನಿಮಗೆ ಘನವನ್ನು"*– ಪೌಲನ ಕಷ್ಟಗಳು ಅವರಿಗಾಗಿ ದೇವರಿಗಿರುವ ಪ್ರೀತಿಯ (ಮತ್ತು ಅವನ ಪ್ರೀತಿಯ) ಗುರುತಾಗಿದೆ. ಕ್ರಿಸ್ತನಿಗಾಗಿ ಕಷ್ಟಗಳನ್ನು ಅನುಭವಿಸುವುದು ಕ್ರಿಸ್ತನಿಗೂ ಮತ್ತು ಕ್ರಿಸ್ತನ "ದೇಹ"ಕ್ಕೂ ಮಹಿಮೆಯನ್ನು ತರುತ್ತದೆ. **14,15**

**3:14,15** ವ.1 ರಲ್ಲಿ ನಿಲ್ಲಿಸಿದ ವಿಷಯವನ್ನು ಪೌಲನು ಇಲ್ಲಿ ಮುಂದುವರಿಸುತ್ತಾನೆ. **14**

**3:14** *"ತಂದೆ"*– ಮತ್ತಾಯ 5:16 ಟಿಪ್ಪಣಿ. ದೇವರ ವಿಶ್ವಾಸಿಗಳ ಕುಟುಂಬವು (ಎಫೆ 2:19) ಕುಟುಂಬವಾಗಿದೆ ಯಾಕಂದರೆ ಆತನು ನಿಜವಾದ ತಂದೆಯ ಹೃದಯವುಳ್ಳ ತಂದೆಯಾಗಿದ್ದಾನೆ. **16**

**3:16** *"ಸಂಪತ್ತು"*– ವ. 8; 1:7,18; 2:7; ಫಿಲಿಪ್ಪಿ 4:19. ಎಫೆ 1:17-19 ರಲ್ಲಿ ದೇವರ ಅತ್ಯುನ್ನತ ಶಕ್ತಿಯನ್ನು ಅವರು ತಿಳಿಕೊಳ್ಳುವ ಜ್ಞಾನವನ್ನು ಪಡಕೊಳ್ಳಬೇಕೆಂದು ಅವನು ಪ್ರಾರ್ಥಿಸಿದನು. ಇಲ್ಲಿ ಅವನು ಆ ಶಕ್ತಿಯ ಮೂಲಕ ಬಲವನ್ನು ಹೊಂದಿಕೊಳ್ಳಬೇಕೆಂದು ಮತ್ತು ಕ್ರಿಸ್ತನ ಮಹಾ ಪ್ರೀತಿಯನ್ನು ತಿಳಿಕೊಳ್ಳುವಂತೆ ಅವನು ಪ್ರಾರ್ಥಿಸುತ್ತಾನೆ.

*"ಆತ್ಮ"*– ವಿಶ್ವಾಸಿಗಳಲ್ಲಿ ವಾಸಿಸಲು ತಂದೆಯಾದ ದೇವರು ಪರಿಶುದ್ಧ ಆತ್ಮನನ್ನು ಕೊಟ್ಟಿದ್ದಾನೆ (1:13). ಅವರಿಗೆ ಆತನು ಒಳಗಿನ ಆತ್ಮೀಕ ಶಕ್ತಿಯ ಮೂಲವಾಗಿದೆ. **17**

**3:17** *"ವಾಸಮಾಡುವನು"*– ಪೌಲನು ವಿಶ್ವಾಸಿಗಳಿಗೆ ಬರೆಯುತ್ತಿದ್ದನು ಮತ್ತು ಎಲ್ಲಾ ವಿಶ್ವಾಸಿಗಳಲ್ಲಿ ಕ್ರಿಸ್ತನಿದ್ದಾನೆ (ರೋಮಾ 8:9,10; 2 ಕೊರಿಂಥ 13:5; ಕೊಲೊ 2:2-7. ಟಿಪ್ಪಣಿಗಾಗಿ ವ.19 ನೋಡಿರಿ. ಇಲ್ಲಿ ಪೌಲನು ಅವರಿಗಾಗಿ ಹೆಚ್ಚಿನದನ್ನು ಪ್ರಾರ್ಥಿಸುತ್ತಿದ್ದಾನೆ. ಅವರಲ್ಲಿ ಮತ್ತು ಅವರ ಮೂಲಕ ಕ್ರಿಸ್ತನ ಜೀವಿತವು ಸಂಪೂರ್ಣವಾಗಿ ಜೀವಿಸಬೇಕೆಂದು ಅವನು ಬಯಸುತ್ತಾನೆ (ಗಲಾ 2:20), ಆತನು ಅವರ ಹೃದಯವನ್ನು ತನ್ನ ವಾಸ ಸ್ಥಳವಾಗಿ ಮಾಡಿಕೊಳ್ಳಬೇಕೆಂದು (ಯೋಹಾನ 14:23) ಪ್ರಾರ್ಥಿಸುತ್ತಿದ್ದಾನೆ. ದುಃಖಕರ ವಿಷಯವೇನೆಂದರೆ ನಮ್ಮೊಳಗೆ ಕ್ರಿಸ್ತನು ವಾಸಿಸಲು ಸಾಧ್ಯ ಆದರೆ ನಾವು ಆತನನ್ನು ಅಥಿತಿಯಾಗಿ ನಮ್ಮ ಹೃದಯದ ಒಂದು ಸಣ್ಣ ಕೊಠಡಿಯಲ್ಲಿ ಇರಿಸುತ್ತೇವೆ. ಕ್ರಿಸ್ತನು ನಮ್ಮೊಂದಿಗೆ ನಮ್ಮ ಸಂಪೂರ್ಣ ಮನೆಯನ್ನು ಆಕ್ರಮಿಸಿಕೊಳ್ಳಲು ಬಯಸುತ್ತಾನೆ - ನಮ್ಮ ಒಳಗಿನ ಪ್ರತಿಯೊಂದು ಭಾಗಗಳನ್ನು. ಸಂಪೂರ್ಣ ಮನೆಯು ಆತನದೆಂದು, ನಮ್ಮದಲ್ಲವೆಂದು ನಾವು ತಿಳಿದುಕೊಳ್ಳಬೇಕೆಂದು ಬಯಸುತ್ತಾನೆ. ನಮ್ಮ ಪ್ರೀತಿಯ ಅಧೀನತೆಯನ್ನು, ವಿಧೇಯತ್ವವನ್ನು ಮತ್ತು ಅನ್ಯೋನ್ಯತೆಯನ್ನು ಆತನು ಬಯಸುತ್ತಾನೆ. ನಮ್ಮ

ಹೃದಯಗಳಲ್ಲಿ ಆತನು ಕರ್ತನಾಗಿರಲು ಮತ್ತು ನಮ್ಮ ಎಲ್ಲಾ ಯೋಚನೆಗಳನ್ನು, ಯೋಜನೆಗಳನ್ನು ಮತ್ತು ನಾವು ಮಾಡುವುದನ್ನು ಆಳಲು ಬಯಸುತ್ತಾನೆ (ರೋಮಾ 14:9). ನಮ್ಮ ಮನೆಯಲ್ಲಿ (ಹೃದಯದಲ್ಲಿ) ನಾವು ಯಜಮಾನನಾಗಿರಲು ಪ್ರಯತ್ನಿಸಬಾರದು, ಆದರೆ ಅಲ್ಲಿ ವಾಸಿಸುವಾತನಿಗೆ ಸೇವಕರಾಗಿರಬೇಕು. ಆತನು ರಾಜಾಧಿರಾಜನು ನಮ್ಮ ಹೃದಯಗಳನ್ನು ಆತನ ಅರಮನೆಯನ್ನಾಗಿ ಮತ್ತು ತನ್ನ ಸಿಂಹಾಸನದ ಸ್ಥಳವನ್ನಾಗಿ ಮಾಡಿಕೊಳ್ಳಲು ಬಯಸುತ್ತಾನೆ. ದೇವರಾತ್ಮನು ತನ್ನ ಶಕ್ತಿಯಿಂದ ನಮ್ಮನ್ನು ಬಲಗೊಳಿಸುವದರಿಂದ ಇದು ಸಾಧ್ಯವಾಗುತ್ತದೆ (ವ.16). ಆತನು ಮಾಡದಿದ್ದರೆ, ಕ್ರಿಸ್ತನನ್ನು ನಮ್ಮ ಹೃದಯದ ಮೂಲೆಯಲ್ಲಿರಿಸಿದಂತೆ ನಾವು ನಡಕೊಳ್ಳುತ್ತೇವೆ.

"*ನಂಬಿಕೆಯ ಮೂಲಕ*"– ಆದಿಯಿಂದ ಅಂತ್ಯದವರೆಗೂ ಕ್ರೈಸ್ತ ಜೀವಿತವು ನಂಬಿಕೆಯ ಜೀವನವಾಗಿದೆ (ಎಫೆ 2:8; ರೋಮಾ 1:17; ಕೊಲೊ 2:6), ಮತ್ತು ಕ್ರಿಸ್ತನು ನಮ್ಮ ಸಂಪೂರ್ಣ ಹೃದಯವನ್ನು ಆಕ್ರಮಿಸಿಕೊಳ್ಳುತ್ತಾನೆ ಮತ್ತು ನಾವು ಆತನನ್ನು ನಂಬುವದನ್ನು ಮುಂದುವರಿಸುವಾಗ ಮಾತ್ರ ಆತನು ನಮ್ಮ ಮನೆಯವನಂತೆ ನಮ್ಮೊಂದಿಗೆ ವಾಸಿಸುತ್ತಾನೆ. ನಮ್ಮನ್ನು ರಕ್ಷಿಸಲೆಂದು ನಾವು ಆತನನ್ನು ನಂಬಿದ್ದರೆ ನಾವು ಸಹ ಆತನು ನಮ್ಮನ್ನು ತುಂಬಿಸುವಂತೆಯೂ ಮತ್ತು ಸಂಪೂರ್ಣವಾಗಿ ನಮ್ಮೊಳಗಿನ ಜೀವಿತವನ್ನು ಆಕ್ರಮಿಸಿಕೊಳ್ಳಲು ಆತನನ್ನು ನಂಬಬೇಕು. ಮತ್ತು ಆತನು ಹಾಗೆ ಮಾಡುತ್ತೇನೆಂದು ಪ್ರಕಟಿಸಿರುವದರಿಂದ ನಾವು ಯಾಕೆ ಆತನು ಮಾಡತ್ತಾನೆಂದು ನಂಬಬಾರದು?

"*ಪ್ರೀತಿ*"– ಕರ್ತನಾದ ಯೇಸು ಮತ್ತು ವಿಶ್ವಾಸಿಗಳ ನಡುವೆ ಇರುವ ಈ ಸಂಬಂಧದಲ್ಲಿ ಇದು ಬಹಳ ಮುಖ್ಯವಾದದ್ದಾಗಿದೆ (ಯೋಹಾನ 14:23,24; 1 ಕೊರಿಂಥ 13:13). ಪ್ರೀತಿ ಎನ್ನುವುದು ಒಳ್ಳೆಯ ಭೂಮಿಯ ಹಾಗೆ ಅಲ್ಲಿ ವಿಶ್ವಾಸಿಗಳು "ಬೇರೂರ" ಬೇಕು ಮತ್ತು ಬೆಳೆಯಬೇಕು. ತಮ್ಮ ಜೀವತವನ್ನು ಕಟ್ಟಲು ಬೇಕಾದ ಭದ್ರವಾದ ಅಡಿಪಾಯವಾಗಿದೆ. **18**

**3:18** ಕ್ರಿಸ್ತನ ಪ್ರೀತಿಯ ಜ್ಞಾನವು ವಿಶ್ವಾಸಿಗಳಲ್ಲಿ ಪ್ರೀತಿಯ ಸ್ಪೂರ್ತಿಯನ್ನುಂಟುಮಾಡುತ್ತದೆ (1 ಯೋಹಾನ 3:16; 4:9-12,19). ಆದ್ದರಿಂದ ಆತನ ಪ್ರೀತಿಯ ಮಹತ್ವನ್ನು ನಾವು ಗ್ರಹಿಸಿಕೊಳ್ಳ ಬೇಕು ಆಗ ನಾವು ಆ ಪ್ರೀತಿಯಲ್ಲಿ ಬೇರೂರುತ್ತೇವೆ ಮತ್ತು ನೆಲಸುತ್ತೇವೆ ಮತ್ತು ಆತನನ್ನು ಯಾವ ರೀತಿ ಪ್ರೀತಿಸ ಬೇಕೋ ಆ ರೀತಿಯಲ್ಲಿ ಪ್ರೀತಿಸುತ್ತೇವೆ. ಕ್ರಿಸ್ತನ ಪ್ರೀತಿಯು ಈ ಲೋಕಕ್ಕಿಂತಲೂ ಅಗಲವಾಗಿದೆ, ಉದ್ದವಾಗಿದೆ ಮತ್ತು ಅದರ ಅಂತ್ಯವನ್ನು ಕಾಣಲು ಸಾಧ್ಯವಿಲ್ಲ, ಆಕಾಶದ ಎತ್ತರವನ್ನು ಮೀರಿಸಿ ದೇವರು ನಿತ್ಯಕ್ಕೂ ವಾಸಿಸುವ ಆತನ ನಿವಾಸವನ್ನು ಮುಟ್ಟುತ್ತದೆ, ನೆಲೆಸಿಗದ ಆಳವಾದ ಜ್ಞಾನ ಮತ್ತು ದೇವರ ಉದ್ದೇಶದಷ್ಟು ಆಳವಾಗಿದೆ (ರೋಮಾ 11:33). **19**

**3:19** ಜ್ಞಾನಕ್ಕೆ ಮೀರುವದನ್ನು ನಾವು ಹೇಗೆ ತಿಳಿದುಕೊಳ್ಳಬಹುದು? ಅನಂತವಾದದ್ದನ್ನು ನಾವು ಗ್ರಹಿಸುವದು ಹೇಗೆ? ಆತ್ಮನು ನಮಗೆ ಒಳಗಿನ ಜ್ಞಾನವನ್ನು ಮತ್ತು ಅದರ

ಅನುಭವವನ್ನು ಕೊಡುತ್ತಾನೆ. ಬರಿ ಓದುವುದರ ಮೂಲಕ ನಾವು ಸಮುದ್ರದ ವಿಷಯವಾಗಿ ಅರ್ಥ ಮಾಡಿಕೊಳ್ಳಲಾರೆವು, ಆದರೆ ಅದರ ಮೇಲೆ ನೌಕಾಯಾನ ಮಾಡಿದರೆ ಮತ್ತು ಆಳದಲ್ಲಿ ಮುಳುಗಿದರೆ ಅದರ ಅರ್ಥವಾಗುತ್ತದೆ. ದೇವರು ತಾನೇ ಅಪರಮಿತವಾದವನು ಮತ್ತು ಶಶ್ವಾತವಾದವನು ಮತ್ತು ಮನುಷ್ಯನ ಜ್ಞಾನಕ್ಕೆ ನಿಲುಕದವನು ಆಗಿದ್ದಾನೆ. ಆದರೆ ವಿಶ್ವಾಸಿಗಳು ಆತನನ್ನು ತಿಳಿದುಕೊಂಡಿದ್ದಾರೆ – ಮತ್ತಾಯ 11:27; ಇಬ್ರಿ 8:11; 1 ಯೋಹಾನ 5:20. ಹಾಗೆಯೇ ಕ್ರಿಸ್ತನ ಪ್ರೀತಿ.

"*ತುಂಬಿಸಲ್ಪಡಲಿ*"– ಎಫೆ 5:18. ಕ್ರಿಸ್ತನಿಂದ ತುಂಬಲ್ಪಡುವುದು ಅಂದರೆ ದೇವರಿಂದ ತುಂಬಲ್ಪಡುವುದು ಮತ್ತು ದೇವರ ಆತ್ಮನಿಂದ ತುಂಬಿಸಲ್ಪಡುವುದು. ಕ್ರಿಸ್ತನು ಎಲ್ಲಾ ವಿಶ್ವಾಸಿಗಳ ಹೃದಯದಲ್ಲಿ ಎಲ್ಲಾ ಕಡೆಯಲ್ಲಿ ಎಲ್ಲಾ ಸಮಯದಲ್ಲಿ ಇರುವ ಕಾರ್ಯವು ಆತನು ದೇವರೆಂಬುದಕ್ಕೆ ಸಾಕ್ಷಿಯಾಗಿದೆ. ದೇವರು ಮಾತ್ರ ಎಲ್ಲಾ ಸಮಯದಲ್ಲಿ ಎಲ್ಲಾ ಕಡೆಯಲ್ಲಿಯೂ ಇರಲು ಸಾಧ್ಯ. ಕ್ರಿಸ್ತನ ದೈವತ್ವದ ಟಿಪ್ಪಣಿಯನ್ನು ಫಿಲಿಪ್ಪಿ 2:6; ಲೂಕ 2:11 ರಲ್ಲಿ ನೋಡಿರಿ. ದೈವತ್ವದ ಪರಿಪೂರ್ಣತೆಯಾಗಬೇಕೆಂಬ ಪ್ರಾರ್ಥನೆಗಿಂತಲೂ ಹೆಚ್ಚಿನದೇನಿದೆ? ಆದರೆ ನಮ್ಮ ಚಿಕ್ಕ ಹೃದಯವು ದೇವರ ಎಲ್ಲಾ ಪರಿಪೂರ್ಣತೆಯನ್ನು ಹಿಡಿದಿಟ್ಟುಕೊಳ್ಳಬಹುದೇ? ಒಂದು ಚಹದ ಲೋಟವು ಸಮುದ್ರ ನೀರನ್ನು ಸಂಪೂರ್ಣವಾಗಿ ಹಿಡಿದಿಟ್ಟುಕೊಳ್ಳಬಹುದೇ? ಸಾಧ್ಯವಾಗುವಷ್ಟು ಸಮುದ್ರದ ನೀರನ್ನು ಹಿಡಿದಿಟ್ಟುಕೊಳ್ಳಬಹುದು. ಸಮುದ್ರದ ನೀರನ್ನು ತನ್ನ ತುದಿಯವರೆಗೂ ತುಂಬಿಸಿಕೊಳ್ಳಬಹುದು. ಹಾಗೆಯೇ ವಿಶ್ವಾಸಿಯ ಹೃದಯ ಮತ್ತು ದೇವರು. ವಿಶ್ವಾಸಿಗಳ ಗುರಿ ಇದಕ್ಕಿಂತಲೂ ಬೇರೆಯಾಗಿರಬಾರದು. **20**

**3:20** ವಚನಗಳು 16-19 ರಲ್ಲಿರುವ ಅದ್ಭುತವಾದ ಕಾರ್ಯಗಳು ನಿಜವಾಗಿಯೂ ನಮಗೆ ಸಿಕ್ಕುವ ಸಾಧ್ಯತೆ ಇದೆಯಾ? ನಿಶ್ಚಯವಾಗಿ. ಅದು ಸಾಧ್ಯವಾಗದಿದ್ದರೆ ದೇವರು ಅವುಗಳನ್ನು ನಮಗೆ ತೋರಿಸಿ ಅವುಗಳನ್ನು ನಿರೀಕ್ಷಿಸಬೇಕೆಂದು ಇಚ್ಛಿಸುವುದಿಲ್ಲ. ದೇವರು ಈ ಕಾರ್ಯಗಳನ್ನು ನಮ್ಮಲ್ಲಿ ಮಾಡಲು ಸಾಧ್ಯವುಳ್ಳವನಾಗಿದ್ದಾನೆ ಮತ್ತು ಅದನ್ನು ನಮ್ಮ ಸಾಮರ್ಥ್ಯಕ್ಕಿಂತಲೂ ನಾವು ಊಹಿಸುವದಕ್ಕಿಂತಲೂ ಹೆಚ್ಚಾಗಿ ಮಾಡುವವನು. ಹಾಗಾದರೆ ಯಾಕೆ ಈ ಅನುಭವವನ್ನು ಸಾಧಾರಣ ವಿಶ್ವಾಸಿಗಳು ಅನುಭವಿಸುತ್ತಿಲ್ಲ? ಯಾಕಂದರೆ ಅದರ ನಿಜವಾದ ಅವಶ್ಯವಿದೆ ಎಂದು ನಾವು ತಿಳಿದುಕೊಂಡಿಲ್ಲ, ಆದರೆ ನಾವು ತಿಳಿದುಕೊಳ್ಳಬೇಕೆಂದು ಬಯಸಬೇಕೆಂದು ದೇವರು ಇಚ್ಛಿಸುತ್ತಾನೆ, ಆತನಿಗೆ ನಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಡಬೇಕು, ಎಲ್ಲದರಲ್ಲೂ ಆತನಿಗೆ ವಿಧೇಯರಾಗಬೇಕು ಮತ್ತು ಆತನನ್ನು ನಂಬಬೇಕು ಮತ್ತು ಅವುಗಳಿಗಾಗಿ ನಂಬುತ್ತಲೇ ಇರಬೇಕು (ವ. 17; ಯೋಹಾನ 4:21; ರೋಮಾ 12:1,2. ಯೆರೆ 29:13; ಯೆಶಾಯ 57:15). **21**

**3:21** "*ಆತನಿಗೆ ಮಹಿಮೆಯುಂಟಾಗಲಿ*"– 1:6,12,14. ಎಲ್ಲವನ್ನೂ ಮಾಡುವವನು

ದೇವರಾಗಿರುವದರಿಂದ, ವಿಶ್ವಾಸಿಗಳಾಗಿ ನಾವು ಆತನಿಗೆ ಮಹಿಮೆ ಸಲ್ಲಿಸುವುದು ಯೋಗ್ಯವಾದ ಕಾರ್ಯವಾಗಿದೆ.

# 4[1]

**4:1** ಹಿಂದಿನ ಅಧ್ಯಾಯಗಳಲ್ಲಿ ಕ್ರಿಸ್ತನಲ್ಲಿ ದೇವರು ನಮ್ಮನ್ನು ಯಾಕೆ ಕರೆದನು ಎಂಬುದನ್ನು ಪೌಲನು ಪ್ರಕಟಿಸಿದನು – ದೇವರ ಮಕ್ಕಳು, ದೇವರ ಬಾಧ್ಯಸ್ಥರು, ಕ್ರಿಸ್ತನ ದೇಹ, ದೇವರ ಆಲಯ, ಕ್ರಿಸ್ತನ ವಾಸಸ್ಥಳ. ಈಗ ಈ ಕರೆಗೆ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ನಮ್ಮನ್ನು ಉತ್ಸಾಹಿಸುತ್ತಾನೆ. ನಾವು ದೇವರ ವಿಶೇಷವಾದ ಸ್ವಂತ ಮಕ್ಕಳಂತೆ ಯಾವಾಗಲೂ ನಡೆದುಕೊಳ್ಳುವ ರೀತಿಯಲ್ಲಿ ನಿರಂತರವಾಗಿ ನಡಕೊಳ್ಳಬೇಕು. ನಾವು ಕ್ರಿಸ್ತನಲ್ಲಿ ನಮಗಿರುವ ಮಹಿಮೆಯುಳ್ಳ ಸತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡವರಾಗಿರಬೇಕು ಮತ್ತು ಅದರ ಬೆಳಕಿನಲ್ಲಿ ಜೀವಿಸಬೇಕು.

*"ಯೋಗ್ಯರಾಗಿ ನಡಕೊಳ್ಳಿರಿ"*– ಅದಕ್ಕೆ ಯೋಗ್ಯರಾಗಿ ಜೀವಿಸಿರಿ ಮತ್ತು ನಡೆದುಕೊಳ್ಳಿರಿ – ಕೊಲೊ 1:10; 1 ಥೆಸ 2:12. "ನಡೆ" ಟಿಪ್ಪಣಿಗಾಗಿ 2:10. ಯೋಗ್ಯರೀತಿಯಲ್ಲಿ ಎಂದು ಹೇಳುವಾಗ ದೇವರೊಡನೆಯೂ ಮತ್ತು ಮನುಷ್ಯರೊಡನೆಯೂ ಪ್ರೀತಿಯಲ್ಲಿ ನಡಕೊಳ್ಳುವುದು. ಪ್ರೀತಿ ಇಲ್ಲದ ಜೀವಿತ, ಎಷ್ಟೇ ಸರಿಯಾಗಿದ್ದರೂ ಮತ್ತು ನೀತಿಯಿಂದ ನಡಕೊಂಡರೂ ಮತ್ತು ಸ್ವ-ತ್ಯಾಗಮಾಡಿದರೂ ಮತ್ತು ನಂಬಿಗಸ್ತರಾಗಿದ್ದರೂ, ನಮ್ಮನ್ನು ಕರೆದ ಜೀವಿತಕ್ಕೆ ಯೋಗ್ಯರಾಗಿರಲು ಸಾಧ್ಯವಿಲ್ಲ. [2]

**4:2** *"ವಿನಯ ಮತ್ತು ಸಾತ್ವಿಕತ್ವ"*– ಮತ್ತಾಯ 5:3-5; 11:29; ಕೊಲೊ 3:12; 1 ಪೇತ್ರ 5:5,6.

*"ಧೀರ್ಘಶಾಂತಿ"*– ಇಲ್ಲಿ ಪೌಲನು ಕ್ರೈಸ್ತ ತಾಳ್ಮೆಯ ಒಂದು ವಿಶೇಷತೆಯನ್ನು ವಿವರಿಸುತ್ತಾನೆ. ಅದು ಪ್ರೀತಿಯಲ್ಲಿ ಒಬ್ಬರೊಂದಿಗೊಬ್ಬರು ಸಹಿಸಿಕೊಳ್ಳವುದು. ನಮ್ಮ ಸಂಬಂಧಗಳಲ್ಲಿ ನಮ್ಮ ಕೈಯಿಂದ ಸಾಧ್ಯವಾಗದಿರುವ ಒಬ್ಬರೊಂದಿಗೊಬ್ಬರು ತಾಳ್ಮೆಯಿಂದ ನಡಕೊಳ್ಳಲು ಮತ್ತು ಸಹಿಸಿಕೊಳ್ಳಲು ಸಾಧ್ಯವಾಗುವಂತೆ ಪ್ರೀತಿಯು ಮಾಡುತ್ತದೆ (1 ಕೊರಿಂಥ 13:4). [3]

**4:3** *"ಆತ್ಮನ ಐಕ್ಯತೆ"*– ಇದು ದೇವರಾತ್ಮನು ವಿಶ್ವಾಸಿಗಳೆಲ್ಲರೂ ಕ್ರಿಸ್ತನ "ದೇಹ" ದಲ್ಲಿ ಒಂದಾಗಬೇಕೆಂದು ಸೃಷ್ಟಿಸಿದ ಐಕ್ಯತೆ (1 ಕೊರಿಂಥ 12:12,13). ಇದು ಸಂಸ್ಥಾಪನೆಯ ಐಕ್ಯತೆಯಲ್ಲ ಮತ್ತು ವಿಶ್ವಾಸಿಗಳು ಇದನ್ನು ಸೃಷ್ಟಿಸಲು ಸಾಧ್ಯವಿಲ್ಲ (ಯೋಹಾನ 17:20-23 ನೋಡಿರಿ). ಆದರೆ ಈ ಐಕ್ಯತೆಯಲ್ಲಿ ವಿಶ್ವಾಸಿಗಳು ಒಬ್ಬರೊಂದಿಗೊಬ್ಬರು ಸಮಾಧಾನದಿಂದ ಜೀವಿಸಬಹುದು ಮತ್ತು ಇದನ್ನೇ ನಾವು ಮಾಡಬೇಕೆಂದು ಪೌಲನು ಇಲ್ಲಿ ಹೇಳುತ್ತಿದ್ದಾನೆ (ರೋಮಾ 12:16,18; 2 ಕೊರಿಂಥ 13:11; 1 ಪೇತ್ರ 3:11). ಇದನ್ನು

ಮಾಡಲು ಹೆಚ್ಚು ಪ್ರಯತ್ನದ ಅಗತ್ಯವಿದೆ – "ಪ್ರಯತ್ನಿಸುವುದು" –ತಾನಾಗಿ ತಾನೇ ಆಗುವುದಿಲ್ಲ. ಮುಂದಿನ ವಚನಗಳಲ್ಲಿ ಪೌಲನು ಐಕ್ಯತೆಯ ಕಾರಣವನ್ನು ಮತ್ತು ವಿಶ್ವಾಸಿಗಳು ಯಾಕೆ ಇತರ ವಿಶ್ವಾಸಿಗಳೊಂದಿಗೆ ಸಮಾಧಾನದಿಂದ ಜೀವಿಸಬೇಕೆಂಬ ಕಾರಣಗಳನ್ನು ತೋರಿಸುತ್ತಾನೆ. **4**

**4:4** *"ದೇಹ"*– 1:22,23; 3:6.

*"ಆತ್ಮನು"*– 1:13; 2:22.

*"ನಿರೀಕ್ಷೆ"*– 1:8. **5**

**4:5** *"ಕರ್ತನು"*– 1:2; 1 ಕೊರಿಂಥ 8:6 (ಟಿಪ್ಪಣಿಗಾಗಿ ಲೂಕ 2:11).

*"ನಂಬಿಕೆ"*– ಎಫೆ 1:13,15; 2:8.

*"ದೀಕ್ಷಾಸ್ನಾನ"*– ಎಫೆಸ ಪತ್ರಿಕೆಯಲ್ಲಿ ಒಂದೇ ಒಂದು ಸಾರಿ ದೀಕ್ಷಾಸ್ನಾದ ಬಗ್ಗೆ ಸೂಚಿಸಿದೆ. ದೀಕ್ಷಾಸ್ನಾನವು ನೀರಿನಿಂದಲೋ ಅಥವಾ ಪರಿಶುದ್ಧಾತ್ಮನಿಂದಲೋ ಎಂಬುದನ್ನು ಪೌಲನು ಇಲ್ಲಿ ಹೇಳಲಿಲ್ಲ. "ದೀಕ್ಷಾಸ್ನಾನದಿಂದ ಒಂದಾದೆವು" ಎಂದು ಪೌಲನು ಹೇಳಲಿಲ್ಲ; ಒಂದು ವೇಳೆ ಪೌಲನು ಇಲ್ಲಿ ನೀರಿನ ದೀಕ್ಷಾಸ್ನಾನವನ್ನು ಸೂಚಿಸಿರಬಹುದು. "ಒಂದು ದೀಕ್ಷಾಸ್ನಾನದ" ಮೂಲಕ ಎಂಬುದರ ಅರ್ಥ ಒಂದು ವೇಳೆ ದೀಕ್ಷಾಸ್ನಾನವು ಪಾಪಕ್ಷಮಾಪಣೆಯನ್ನು ಮತ್ತು ಕ್ರಿಸ್ತನೊಂದಿಗೆ ಐಕ್ಯತೆಯನ್ನು ಸೂಚಿಸುವ ಚಿನ್ಹೆ ಎಂಬುದಾಗಿರಬಹುದು. ನೀರಿನ ದೀಕ್ಷಾಸ್ನಾನದ ವಿಷಯದ ಟಿಪ್ಪಣಿಯನ್ನು ಮತ್ತಾಯ 3:2; ಮಾರ್ಕ 16:16; ಅಪೊ 2:38; 1 ಕೊರಿಂಥ 1:14-17; ಆತ್ಮನ ದೀಕ್ಷಾಸ್ನಾನದ ವಿಷಯವಾಗಿ ಅಪೊ 1:5; 1 ಕೊರಿಂಥ 12:13. ರೋಮಾ 6:3,4 ಸಹ ನೋಡಿರಿ. **6**

**4:6** *"ತಂದೆಯಾದ ದೇವರು"*– 1:2,3,17; 3:14.

*"ನಿಮ್ಮೆಲ್ಲರಲ್ಲಿ"*– ಎಲ್ಲಾ ವಿಶ್ವಾಸಿಗಳಲ್ಲಿ (2:22). ದೇವರು ಎಲ್ಲಾ ಮನುಷ್ಯರಲ್ಲಿ ಇಲ್ಲ (2:12; 4:18). "ಒಂದು" ಎಂಬ ಪದವು ವಚನಗಳು 4-6 ರಲ್ಲಿ ಏಳು ಸಾರಿ ಕಾಣಿಸಿಕೊಳ್ಳುತ್ತದೆ. ಹಾಗಾದರೆ ಈ ಎಲ್ಲಾ ವಿಷಯಗಳಲ್ಲಿ ವಿಶ್ವಾಸಿಗಳು ಒಂದಾಗಿರುವದರಿಂದ, ಅವರು ಈ ಒಂದತ್ವವನ್ನು ಮತ್ತು "ಸಮಾಧಾನದಬಂಧವನ್ನು" ಇಟ್ಟುಕೊಳ್ಳಬೇಕು (ವ.3). ಈ ವಚನಗಳಲ್ಲಿ ತ್ರೈಯೇಕತ್ವವನ್ನು ಗಮನಿಸಿರಿ – ಒಂದೇ ಆತ್ಮನು, ಒಂದೇ ಕರ್ತನು, ಒಂದೇ ತಂದೆ, ಮೂರು ವ್ಯಕ್ತಿಗಳು, ಒಂದೇ ದೇವರು. ಟಿಪ್ಪಣಿಗಾಗಿ ಮತ್ತಾಯ 3:16,17; 28:19; 2 ಕೊರಿಂಥ 13:14; ಎಫೆ 4:4-6. **7-11**

**4:7-11** ಕೆಲವು ವಿಷಯಗಳಲ್ಲಿ ಎಲ್ಲಾ ವಿಶ್ವಾಸಿಗಳು ಒಂದೇಯಾಗಿದ್ದಾರೆ (ಏಳು ಕಾರ್ಯಗಳನ್ನು ಈಗಾಗಲೇ ಪಟ್ಟಿಮಾಡಿದ್ದಾನೆ). ಆದರೆ ಬೇರೆ ವಿಷಯಗಳಲ್ಲಿ ಬೇರೆಯಾಗಿದ್ದಾರೆ. ಅವರ ಆತ್ಮೀಕ ಮತ್ತು ಕೆಲಸದ ಸಾಮರ್ಥ್ಯವನ್ನು ಕುರಿತು ಇದು ನಿಜವಾಗಿದೆ. ಬಹಳ ಮುಖ್ಯವಾದವುಗಳನ್ನು ಮಾತ್ರ ಪೌಲನು ಇಲ್ಲಿ ಸೂಚಿಸಿದ್ದಾನೆ. **7**

**- 4:7** ರೋಮಾ 12:4-8; 1 ಕೊರಿಂಥ 12:4-11. **8**

**- 4:8** ಕೀರ್ತನೆ 68:18. **9**

**4:9** *"ಭೂಮಿಯ ಅಧೋ ಭಾಗ"*– ಅದೃಶ್ಯವಾದ ಸತ್ತವರ ಲೋಕ ಎಂದು ಅವನ ಅರ್ಥವಾಗಿರಬಹುದು (ರೋಮಾ 10:7). **10**

**4:10** *"ಏರಿಹೋದನು"*– 1:20,21; ಅಪೊ 2:31-35.

*"ಎಲ್ಲಾ ಕಾರ್ಯಗಳು"*– ಯೆರೆ 23:24 ನೋಡಿರಿ. ಸತ್ಯವೇದದಲ್ಲಿ ಕ್ರಿಸ್ತನು ಯೆಹೋವ ದೇವರ ಅವತಾರವೆನ್ನುವುದಕ್ಕೆ ಇದು ಸಹ ಒಂದು ಸಾಕ್ಷಿಯಾಗಿದೆ. ಲೂಕ 2:11 ಟಿಪ್ಪಣಿಯನ್ನು ಮತ್ತು ವಾಕ್ಯಗಳನ್ನು ನೋಡಿರಿ. **11**

**4:11** 1 ಕೊರಿಂಥ 12:28 ಹೋಲಿಸಿರಿ.

*"ಅಪೋಸ್ತಲರು"*– ಮತ್ತಾಯ 10:2.

*"ಪ್ರವಾದಿಗಳು"*– ಎಫೆ 2:20; 3:5. ಟಿಪ್ಪಣಿಗಾಗಿ ಆದಿ 20:7; 1 ಕೊರಿಂಥ 12:10,28.

*"ಸುವಾರ್ತಿಕರು"*– ಕ್ರಿಸ್ತನ ಸುವಾರ್ತೆಯನ್ನು ಸಾರಲು ವಿಶೇಷ ವರವಿರುವವರು.

*"ಸಭಾಪಾಲಕರು ಮತ್ತು ಬೋಧಕರು"*– ಈ ಎರಡು ಪದಗಳು ಒಂದೇ ಗುಂಪಿನ ಜನರನ್ನು ಸೂಚಿಸುತ್ತದೆ. ಎಲ್ಲಾ ಸಭಾಪಾಲಕರಿಗೂ ಬೋಧಿಸುವ ವರವಿರಬೇಕು ಮತ್ತು ದೇವರ ವಾಕ್ಯವನ್ನು ಬೋಧಿಸುವ ಎಲ್ಲರಿಗೂ ಸಭಾಪಾಲಕನ ಹೃದಯವಿರಬೇಕು. ದೇವರು ಅವರನ್ನು ಈ ಸೇವೆಗೆ ಕರೆದಿದ್ದರೆ ಅವರು ಆ ಸೇವೆಗೆ ಅವಶ್ಯಕವಾದ ಸಾಮರ್ಥ್ಯಕ್ಕಾಗಿ ನಿರಂತರವಾಗಿ ದೇವರನ್ನು ನೋಡುತ್ತಿರಬೇಕು. ಇಲ್ಲಿ "ಯಾಜಕರು" ಇಲ್ಲದಿರುವದನ್ನು ಗಮನಿಸಿ – ಎಲ್ಲಾ ವಿಶ್ವಾಸಿಗಳು ಯಾಜಕರಾಗಿದ್ದಾರೆ. 1 ಪೇತ್ರ 2:5. **12**

**4:12** ಇಲ್ಲಿ ದೇವರು ವಯಕ್ತಿಕವಾಗಿ ಆತ್ಮೀಕ ವರಗಳನ್ನು ಕೊಡುವ ಅತ್ಯುನ್ನತವಾದ ಉದ್ದೇಶವನ್ನು ಮತ್ತು ಆ ವ್ಯಕ್ತಿಗಳನ್ನು ಸಭೆಗೆ ಕೊಡುವದನ್ನು ಕಾಣುತ್ತೇವೆ. 1 ಕೊರಿಂಥ 12:7 ಹೋಲಿಸಿರಿ.

*"ದೇವಜನರನ್ನು ಯೋಗ್ಯಸ್ಥಿತಿಗೆ ತರಲು"*– ಗ್ರೀಕ್ ಭಾಷೆಯಿಂದ ಭಾಷಾಂತರಗೊಂಡ "ಯೋಗ್ಯರನ್ನಾಗಿ" ಎಂಬ ಪದವು ಮತ್ತಾಯ 5:48 ಅಥವಾ ಇಬ್ರಿ 6:1 ರಲ್ಲಿ ಸಿಕ್ಕುವ ಪದವಿ ಒಂದೇಯಲ್ಲ, ಆದರೆ ಸಿದ್ಧಪಡಿಸುವ ಅಥವಾ ಸಮರ್ಥರನ್ನಾಗಿ ಮಾಡಲು ಎಂಬ ಅರ್ಥವನ್ನು ಕಾಣಬಹುದು, ಸಂಪೂರ್ಣತೆಗೆ ನಡೆಸುವ ಪ್ರಕ್ರಿಯೆ.

*"ಸೇವೆಯ ಕೆಲಸಕ್ಕೆ"*– ಅಥವಾ "ಸೇವೆಯ ಕೆಲಸ" – ಈ ವಚನದಲ್ಲಿ ನೋಡುವ ಪ್ರಕಾರ ಇತರರನ್ನು ಕ್ರಿಸ್ತನಲ್ಲಿ ಅಭಿವೃದ್ಧಿಗೊಳಿಸಲು ದೇವಜನರು ಅವರಿಗೆ ಸೇವೆ ಮಾಡಬೇಕು (ಗಲಾ 5:13 ನೋಡಿರಿ), ಮತ್ತು ಅವರನ್ನು ಸಿದ್ಧಪಡಿಸುವ ಕೆಲಸವು ಸಭಾಪಾಲಕರ, ಬೋಧಕರ ಮತ್ತು ಸುವಾರ್ತಸೇವಕರ ಕೆಲಸವಾಗಿದೆ. ಎಲ್ಲಾ ವಿಶ್ವಾಸಿಗಳು "ಸಂಪೂರ್ಣಸೇವೆ" ಯಲ್ಲಿ ಇರಲು ಸಾಧ್ಯವಿಲ್ಲ, ಆದರೆ ಸಹ ವಿಶ್ವಾಸಿಗಳಿಗೆ ಸೇವೆ ಮಾಡಲು ಎಲ್ಲಾ ಸಮಯದಲ್ಲಿಯೂ

ವಿಶ್ವಾಸಿಗಳು ಸಿದ್ಧರಾಗಿರಬೇಕು.

*"ಅಭಿವೃದ್ಧಿಯಾಗುವದಕ್ಕೋಸ್ಕರ"*– ರೋಮಾ 14:19; 1 ಕೊರಿಂಥ 14:12-26; 1 ಥೆಸ 5:11. ಇದು ಎಲ್ಲಾ ವಿಶ್ವಾಸಿಗಳ ಗುರಿಯಾಗಿರಬೇಕು. ಮತ್ತೊಬ್ಬರನ್ನು ಉತ್ತಮಗೊಳಿಸಲು ಯಾವಾಗಲೂ ಹುಡುಕುವವರಾಗಿರಬೇಕು. ಈ ತತ್ವಗಳನ್ನು ಅಳವಡಿಸಿಕೊಂಡು ಎಲ್ಲರೂ ಈ ಕಾರ್ಯವನ್ನು ಕಾರ್ಯರೂಪದಲ್ಲಿ ಮಾಡುವುದಾದರೆ ಸಭೆಗಳಲ್ಲಿ ಆಗುವ ಬದಲಾವಣೆಗಳನ್ನು ಊಹಿಸಿ ನೋಡಿ. **13-15**

**4:13-15**ನಾವು ಆತ್ಮೀಕವಾಗಿ ಅಭಿವೃದ್ಧಿ ಹೊಂದಬೇಕೆನ್ನುವುದೇ ದೇವರ ಚಿತ್ತವಾಗಿದೆ. 1 ಕೊರಿಂಥ 3:1-3; ಇಬ್ರಿ 5:11—6:1; 1 ಪೇತ್ರ 2:1-3; 2 ಪೇತ್ರ 3:18 ಹೋಲಿಸಿರಿ. ವ.13 ರಲ್ಲಿ ಈ ಅಭಿವೃದ್ಧಿಯು ಕ್ರಿಸ್ತನಲ್ಲಿ ನಂಬಿಕೆ ಮತ್ತು ಆತನ ತಿಳುವಳಿಕೆಯ ಐಕ್ಯವಾಗಿದೆ. ವ.15 ರಲ್ಲಿ ಇರುವದೆಲ್ಲವು ಆತ್ಮೀಕ ಸಂಗತಿಗಳಾಗಿವೆ. ನಾವು ಕ್ರಿಸ್ತನಲ್ಲಿ ಆಳವಾಗಿ ಬೇರೂರಿ ಬೆಳೆಯಬೇಕು ಮತ್ತು ನಾವೆಲ್ಲರೂ ಒಂದಾಗಿ ಆತನ ಪರಿಪೂರ್ಣತೆಯನ್ನು ಹೊಂದುವ ತನಕ ಆತನನ್ನೇ ನೋಡುವವರಾಗಿರಬೇಕು. ಇದನ್ನೇ ದೇವರು ಸಭೆಗೆ ಪರಿಪೂರ್ಣವಾಗಿ ಯೋಜಿಸುತ್ತಾನೆ ಮತ್ತು ಇದನ್ನು ನೆರವೇರಿಸುತ್ತಾನೆ. ವಯಕ್ತಿಕವಾಗಿ ನಾವು "ಪ್ರೀತಿಯನ್ನು ಸತ್ಯದಲ್ಲಿ ಮಾತಾಡುವದರ" ಮೂಲಕ ಆತನೊಂದಿಗೆ ಕೆಲಸ ಮಾಡಬೇಕು (ವ. 2,25; 6:14; ಕೀರ್ತನೆ 15:2; 25:5; 31:5; 51:6; ಜ್ಞಾನೋ 6:16,17; 12:22; 1 ಕೊರಿಂಥ 5:8; ಕೊಲೊ 3:9; 1 ಯೋಹಾನ 2:21). ಇದು ಆತ್ಮೀಕವಾಗಿ ಬೆಳೆಯಲು ಅತೀ ಮುಖ್ಯವಾಗಿದೆ. ನಾವು ಬೆಳೆಯಬೇಕಾದರೆ ಸತ್ಯವೇದದಲ್ಲಿ ಪ್ರಕಟ ಪಡಿಸಿರುವ ಸತ್ಯಗಳನ್ನು ನಾವು ಒಬ್ಬರೊಂದಿಗೊಬ್ಬರು ಮಾತಾಡಬೇಕು. ಸತ್ಯವು ಸಭೆ ಸ್ಥಾಪನೆಯ ಅಸ್ತಿವಾರವಾಗಿದೆ. ಇದೇ ಸೇವಿಸಬೇಕಾದ ಆಹಾರ, ಉಸಿರಾಡಬೇಕಾದ ಗಾಳಿ. ಸತ್ಯವು ಕಳಕೊಂಡರೆ ಎಲ್ಲವನ್ನು ಕಳಕೊಳ್ಳುತ್ತೇವೆ. ನಾವು ಸತ್ಯವನ್ನು ಪ್ರೀತಿಸಬೇಕು ಮತ್ತು ಪ್ರೀತಿಯ ಹೃದಯದಿಂದ ಸತ್ಯವನ್ನು ಒಬ್ಬರೊಂದಿಗೊಬ್ಬರು ಮಾತಾಡಲು ಕಲಿಯಬೇಕು. ಖಂಡಿತವಾಗಿ, ಅನೇಕರು ಸಭೆಯೊಳಗೆ ನುಸುಳಿ ಇದಕ್ಕೆ ವಿರುದ್ಧವಾಗಿ ಮಾಡುವವರಾಗಿದ್ದಾರೆ ಮತ್ತು ಅವುಗಳನ್ನು ಅಭ್ಯಾಸಮಾಡುವವರಾಗಿದ್ದಾರೆ ಅಂಥಹ ಕಾರ್ಯಗಳನ್ನೇ ದೇವರು ವ.14 ರಲ್ಲಿ ಖಂಡಿಸುತ್ತಾನೆ. **14**

- **4:14** ರೋಮಾ 16:17,18; 2 ಕೊರಿಂಥ 11:13-15; ಕೊಲೊ 2:8; 1 ತಿಮೊ 4:2.

*"ಅತ್ತಿತ್ತ ನೂಕಿಸಿಕೊಂಡು . . . ಹೋಗುವವರ ಹಾಗಿರಬಾರದು"*– ಇದು ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳದೆ ಮತ್ತು ಅದನ್ನು ಅನ್ವಯಿಸಿಕೊಳ್ಳದಿರುವವರಿಗೆ ಹೀಗೆ ಆಗುತ್ತದೆ ಮತ್ತು ಕ್ರಿಸ್ತನಲ್ಲಿ ಬೆಳೆಯಲು ವಿಫಲರಾಗುವರು. ಗಲಾ 1:6,7; 3:1. **16**

**4:16** *"ಬಿಗಿಯಾಗಿ ಜೋಡಿಸಲ್ಪಟ್ಟು"*– ದೈಹಿಕ ದೇಹವು ಒಂದನ್ನೊಂದು ದೈಹಿಕ ಅಸ್ಥಿಪಂಜರ, ಮಾಂಸಖಂಡ, ಮೂಳೆ, ಮುಂತಾದವುಗಳಿಂದ ಜೋಡಿಸಲ್ಪಟ್ಟಿದೆ. ಕ್ರಿಸ್ತನ

ದೇಹವಾದ ಸಭೆಯು ದೇವರಾತ್ಮನಿಂದ ಉಂಟಾದ ಆತ್ಮೀಕ ಕಟ್ಟುಗಳಿಂದ ಒಂದಾಗಿ ಹಿಡಿದುಕೊಳ್ಳಲ್ಪಟ್ಟಿದೆ (1 ಕೊರಿಂಥ 12:12-27). ಮತ್ತು ಸಂಪೂರ್ಣ ದೇಹವು "ಪ್ರೀತಿಯಿಂದ ತನ್ನನ್ನು ವೃದ್ಧಿಗಳಿಸುವಂತೆ" –ಮಾಡಲು ಪ್ರತಿಯೊಬ್ಬ ಸದಸ್ಯನ ಜವಾಬ್ದಾರಿಯಾಗಿರುತ್ತದೆ. **17**

**4:17** *"ಜೀವಿಸು"*– 4:1. ನಾವು ಈ ಲೋಕದ ಜನರಂತೆ ಜೀವಿಸಿದರೆ ನಾವು ಕ್ರಿಸ್ತನಿಗೆ ಯೋಗ್ಯವಾದ ಜೀವಿತವನ್ನು ಜೀವಿಸುತ್ತಿಲ್ಲ (2:2,3). ಬೇರೆಯವರು ಆ ರೀತಿ ನಡಕೊಳ್ಳುತ್ತಾರೆನ್ನುವ ಕಾರಣದಿಂದ ನಾವು ಸಹ ಹಾಗೆ ನಡೆದುಕೊಳ್ಳಬಾರದು.

*"ನಿಷ್ಪ್ರಯೋಜನವುಳ್ಳ ಯೋಚನೆ"*– ರೋಮಾ 1:21; ಅಪೊ 14:15; 1 ಪೇತ್ರ 1:18. ಈ ಲೋಕದಲ್ಲಿ ಅನೇಕರು ತಮ್ಮ ಆಲೋಚನೆ ಮತ್ತು ವಿವೇಚನಾಶಕ್ತಿಯ ಸಾಮರ್ಥ್ಯದ ಕುರಿತು ಹೆಚ್ಚಳಪಡುವವರಾಗಿದ್ದಾರೆ. ದೇವರ ದೃಷ್ಟಿಯಲ್ಲಿ ಅವರ ಆಲೋಚನೆಯು, ಮುಖ್ಯವಾಗಿ ಅವರ ಧಾರ್ಮಿಕ ಮತ್ತು ತಾತ್ವಿಕ ಆಲೋಚನೆಯು ಬರಿದಾದದ್ದು ಮತ್ತು ನಿಷ್ಪ್ರಯೋಜನವಾಗಿದೆ. **18**

**4:18** ನಾಲ್ಕು ವಾಕ್ಯಗಳಲ್ಲಿ ಪೌಲನು ಕ್ರಿಸ್ತನಿಲ್ಲದ ಈ ಲೋಕದ ಜನರ ಸ್ಥಿತಿಯನ್ನು ವಿವರಿಸುತ್ತಾನೆ.

*"ಮನಸ್ಸು ಮೊಬ್ಬಾಗಿ ಹೋಗಿದೆ"*– 6:12; ಕೀರ್ತನೆ 82:5; ಯೋಹಾನ 1:5; 3:19; ಅಪೊ 26:18; 2 ಕೊರಿಂಥ 4:4; 1 ಪೇತ್ರ 2:9; 1 ಯೋಹಾನ 2:11.

*"ಮುಚ್ಚಿ ಹೋಗಿದ್ದಾರೆ ಅಥವಾ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ"*– ಎಫೆ 2:12; ಯೋಹಾನ 14:17; ರೋಮಾ 8:9,16; ಯೂದ 19.

*"ತಮ್ಮಲ್ಲಿರುವ ಅಜ್ಞಾನ"*– ಅವರಿಗೆ ಅನೇಕ ವಿಷಯಗಳು ತಿಳಿದಿದೆ ಇದರಲ್ಲಿ ಸಂಶಯವಿಲ್ಲ ಆದರೆ ಒಬ್ಬನೇ ಸತ್ಯ ದೇವರನ್ನು ಅವರು ತಿಳಿಯದವರಾಗಿದ್ದಾರೆ (ಯೋಹಾನ 15:21; 16:3; ರೋಮಾ 1:22; 1 ಕೊರಿಂಥ 1:21; 1 ಯೋಹಾನ 2:4).

*"ಹೃದಯದ ಕಾಠಿಣ್ಯದ ನಿಮಿತ್ತ"*– ಕ್ರಿಸ್ತನಿಲ್ಲದೆ ಅನೇಕ ಜನರ ಸ್ಥಿತಿಯು ಇದಾಗಿದೆ. 2 ಕೊರಿಂಥ 4:4 ಹೋಲಿಸಿರಿ. ದೈಹಿಕವಾಗಿ ಒಬ್ಬನು ಕುರುಡಾಗಿರುವುದು ದುಃಖದ ಸಂಗತಿ. ಜನರಿಗೆ ಕುರುಡು ಮನಸ್ಸು, ಕ್ರಿಸ್ತನ ಸತ್ಯವನ್ನು ಕಾಣದ ಕುರುಡು ಹೃದಯವಿದ್ದರೆ ಅದು ಇನ್ನೂ ದುಃಖಕರವಾದ ವಿಷಯವಾಗಿದೆ. "ಕುರುಡುತನ" ಗ್ರೀಕ್ ಭಾಷೆಯಿಂದ ಭಾಷಾಂತರ ಮಾಡಿರುವ ಈ ಪದವನ್ನು ಹೀಗೆಯೂ ಭಾಷಾಂತರಿಸಬಹುದು "ಕಠಿಣತನ" ಅಥವಾ "ಅಸಮರ್ಥತೆ" ಅಥವಾ "ಮಂದತೆ". **19**

**4:19** 2:3 ನೋಡಿರಿ. ಕರುಡಾದ, ಕಠಿಣವುಳ್ಳ ಹೃದಯದ ಪ್ರತಿಫಲವು ಇದೇ ಆಗಿರುತ್ತದೆ – ಮನುಷ್ಯರು ನೀತಿ ಮತ್ತು ನೈತಿಕತೆಯ ಭಾವನೆಗಳನ್ನು ಕಳಕೊಳ್ಳುತ್ತಾರೆ. ಪಾಪವು ಇನ್ನು ಮೇಲೆ ಪಾಪವಾಗಿ ಕಾಣುವುದಿಲ್ಲ ಮತ್ತು ಅದು ಪಾಪವೆಂದು ನಿರಾಕರಿಸುತ್ತಾರೆ. ಮುಂದಿನ

ಹೆಚ್ಚಿ ಲೈಂಗಿಕ ಪಾಪದಲ್ಲಿ ಅಥವಾ ಬೇರೆ ದುಷ್ಟ ಕಾರ್ಯಗಳಲ್ಲಿ ತಮ್ಮನ್ನು ಕಳಕೊಳ್ಳುವದು. ರೋಮಾ 1:24-32 ಸತ್ಯವಾಗಿದೆ ಮತ್ತು ನಂತರ ಏನಾಗುತ್ತದೆಂಬ ವಿವರಣೆಯು ಭಯಂಕರವಾಗಿದೆ.

"*ಅನಿಯಂತ್ರಿತ ಕಾಮ*"– ಕಾಮದಲ್ಲಿ ಎಂದಿಗೂ ತೃಪ್ತಿ ಸಿಕ್ಕುವದಿಲ್ಲ. ಮನುಷ್ಯರು ತಮ್ಮನ್ನು ಇದರಿಂದ ತೃಪ್ತಿಪಡಿಸಿಕೊಳ್ಳಲು ಎಷ್ಟು ಪ್ರಯತ್ನಿಸಿದರೂ, ಅದು ಇನ್ನು ಹೆಚ್ಚು ಹಂಬಲಿಸುತ್ತದೆ, ಕ್ರೋಧವು ಹೆಚ್ಚುತ್ತದೆ ಮತ್ತು ಇನ್ನು ಬೇಕೆನಿಸುತ್ತದೆ. **20,21**

**4:20,21** ಕ್ರೈಸ್ತರೆನಿಸಿಕೊಂಡವರು ಸಹ ವ.19 ರಲ್ಲಿ ವಿವರಿಸಿದಂತೆ ಜೀವಿಸುತ್ತಾರೆ. ಆದರೆ ಅವರು ಜೀವಿಸುವ ರೀತಿಯು, ಅವರು ಕ್ರಿಸ್ತನ ಬಗ್ಗೆ ಕಲಿತ ಎಲ್ಲಾ ಕಾರ್ಯಗಳಿಗೂ ವಿರುದ್ಧವಾಗಿದೆ.

"*ಯೇಸುವಿನಲ್ಲಿರುವ ಸತ್ಯೋಪದೇಶವು*"– ಯೋಹಾನ 1:17; 14:6. ವಿನಯ, ವಿಧೇಯತೆಯಿಂದ ಆತನಿಂದ ಕಲಿತುಕೊಳ್ಳುವಾಗ ವಚನಗಳು 17-19 ರಲ್ಲಿರುವ ಎಲ್ಲದರಿಂದ ಬಿಡುಗಡೆ ಮಾಡುತ್ತದೆ. **23**

**4:23** ರೋಮಾ 12:2. ನಾವು ನಡಕೊಳ್ಳುವ ರೀತಿಯು ಎಲ್ಲಾ ರೀತಿಯ ವ್ಯತ್ಯಾಸವನ್ನುಂಟು ಮಾಡುತ್ತದೆ.

"*ಹಳೆಯ ಮನುಷ್ಯನು*"– ರೋಮಾ 6:6 ಹೋಲಿಸಿರಿ. ಕ್ರಿಸ್ತನು ನಮ್ಮನ್ನು ಕರೆಯುವ ಮುಂಚಿತವಾಗಿ ನಾವು ಹಳೆಯ ಮನುಷ್ಯರಾಗಿದ್ದೆವು ಮತ್ತು ಆತನು ನಮ್ಮನ್ನು ರಕ್ಷಿಸಿದನು. ಅದರ ಅರ್ಥ ನಮ್ಮ ಹಿಂದಿನ ಎಲ್ಲಾ ಜೀವಿತವನ್ನು (ಕೊಲೊ 2:1-3). ಹಾಗಾದರೆ, ಯಾಕೆ, ಅದನ್ನು ತೆಗೆದುಬಿಡಬೇಕೆಂದು ಪೌಲನು ಹೇಳುತ್ತಾನೆ? ಯಾಕಂದರೆ ಕೆಲವು ಹಳೆಯ ರೀತಿಯಲ್ಲಿ ಯೋಚಿಸುವುದು ಮತ್ತು ನಡಕೊಳ್ಳುವುದು ಮತ್ತು ಅವುಗಳು ನಮ್ಮನ್ನು ಬಿಡದೆ ಅಂಟಿಕೊಳ್ಳಬೇಕೆಂದು ಇಚ್ಛಿಸುತ್ತದೆ ಮತ್ತು ನಾವು ಅವುಗಳೊಂದಿಗೆ ಹೋರಾಡಬೇಕು. **23 24**

**4:24** "*ಧರಿಸಿಕೊಳ್ಳಿರಿ*"– ಕೊಲೊ 3:10; ರೋಮಾ 13:14; 1 ಯೋಹಾನ 2:6. "ಧರಿಸಿಕೊಳ್ಳಿರಿ" –ಎಂಬುದು ಹೊರ ನಡತೆಯ ಬಗ್ಗೆ ಮಾತನಾಡುತ್ತದೆ. ವಿಶ್ವಾಸಿಯ ಕೃತ್ಯಗಳು ಕ್ರಿಸ್ತನಲ್ಲಿರುವವರಿಗೆ ತಕ್ಕ ಹಾಗಿರಬೇಕು. ಅವನು ಹೊಸ ಸೃಷ್ಟಿ (2 ಕೊರಿಂಥ 5:17), ಮತ್ತು ಆ ರೀತಿಯಲ್ಲಿ ನಡೆದುಕೊಳ್ಳಬೇಕು. ಕಪಟಿಗಳು ಮೇಲೊಂದು ತರಹ ಇದ್ದು ಒಳಗೆ ಬೇರೆಯೇ ಆಗಿರುತ್ತಾರೆ, ವಿಶ್ವಾಸಿಗಳಿಗೆ ಆತ್ಮೀಕ ಜೀವನವಿರುತ್ತದೆ, ನಿಜವಾದದ್ದು ಮತ್ತು ಅದ್ಭುತವಾದ ಜೀವನ ಮತ್ತು ಆ ರೀತಿಯಲ್ಲಿ ಜೀವಿಸುವುದನ್ನು ಕಾಣಬೇಕು.

"*ಹೊಸ ಮನುಷ್ಯನಾಗಿ*"– ಕ್ರಿಸ್ತನಲ್ಲಿ ಹೊಸದಾಗಿ ಜೀವಿಸುವ ಮಾರ್ಗ. ಆತನು ಈ ಭೂಮಿಯ ಮೇಲಿದ್ದಾಗ, ಹೇಗೆ ಜೀವಿಸಬೇಕೆಂದು ತೋರಿಸಿಕೊಟ್ಟನು. ಮತ್ತು ನಾವು ಪರಿಶುದ್ಧ ಮತ್ತು ನೀತಿಯುಳ್ಳ ಜೀವಿತವನ್ನು ಜೀವಿಸಲು ಸಹಾಯವಾಗುವಂತೆ ಆತನು

ನಮ್ಮಲ್ಲಿ ಹೊಸ ಆತ್ಮೀಯ ಸ್ವಭಾವವನ್ನು ಹುಟ್ಟಿಸಿದನು (2:5,10; ರೋಮಾ 8:4).

"*ದೇವರಿಂದ ಸೃಷ್ಟಿಸಲ್ಪಟ್ಟ*"– 2 ಕೊರಿಂಥ 5:17. ಹೊಸ ಸ್ವಭಾವದ ವಿಶ್ವಾಸಿಗಳು ಪರಿಶುದ್ಧ ಮತ್ತು ನೀತಿಯುಳ್ಳ ಜೀವಿತವನ್ನು ಹೊಂದಿರುತ್ತಾರೆ ಯಾಕಂದರೆ ಹಳೆಯ ಜೀವಿತವು ಅಶುದ್ಧವಾದದ್ದು ಮತ್ತು ಅನೀತಿಯಳ್ಳದ್ದಾಗಿತ್ತು ಅಥವಾ ಅದಕ್ಕಿಂತಲೂ ಕೆಟ್ಟದ್ದಾಗಿತ್ತು ಮತ್ತು ಅದರಂತೆ ಜೀವಿಸುತ್ತಿದ್ದರು. **25-32**

**4:25-32** "ಬಿಟ್ಟುಬಿಟ್ಟು" ಮತ್ತು "ಧರಿಸಿಕೊಳ್ಳಿರಿ" ಎಂಬ ಪದಗಳ ಅರ್ಥವನ್ನು ಪೌಲನು ಸ್ಪಷ್ಟಪಡಿಸುತ್ತಾನೆ. ವಿಶ್ವಾಸಿಗಳು ಮಾಡಲೇಬೇಕಾದ ಕಾರ್ಯವೇನೆಂದರೆ ಸತ್ಯಕ್ಕೆ ಮತ್ತು ಪರಿಶುದ್ಧತ್ವಕ್ಕೆ ವಿರುದ್ಧವಾದದ್ದನ್ನು "ಬಿಟ್ಟುಬಿಟ್ಟು" (ತೊರೆದು, ತಿರಸ್ಕರಿಸಿ), ಅವರೊಂದಿಗೆ ಸಮಾಧಾನದಿಂದಿರುವುದನ್ನು "ಧರಿಸಿಕೊಳ್ಳಿರಿ" –ಅಥವಾ (ಅಭ್ಯಾಸ ಮಾಡಲು ಪ್ರಯತ್ನಿಸಿ). **25**

**4:25** ವಚನ 15. ಸತ್ಯವು ಕಟ್ಟುತ್ತದೆ. ಸುಳ್ಳುತನವು ನಾಶಮಾಡುತ್ತದೆ. ಕ್ರೈಸ್ತರು ಇಲ್ಲಿ ವಿಫಲರಾದರೆ ಒಬ್ಬರೊಂದಿಗೊಬ್ಬರಿಗೆ ಮತ್ತು ಸತ್ಯವಾದ ದೇವರೊಂದಿಗೆ ಕಷ್ಟಗಳು ಮುಂದುವರಿಯುತ್ತದೆ (ಕೀರ್ತನೆ 31:5). ವಿಶ್ವಾಸಿಗಳು ಸುಳ್ಳು ಹೇಳುವುದು ಮತ್ತು ಮೋಸಮಾಡುವುದು ದೇವರಿಗೂ ಮತ್ತು ಕ್ರಿಸ್ತನ ದೇಹವಾದ ಸಭೆಗೂ ಪಾಪಮಾಡಿದಂತಾಗುವುದು. **26**

**4:26** ಕೀರ್ತನೆ 4:4; ಮತ್ತಾಯ 5:22. ಕೋಪವು ಪಾಪಕ್ಕೆ ನಡಿಸುತ್ತದೆಂದು ವ.31 ರಲ್ಲಿ ಅವನು ಸೂಚಿಸುತ್ತಾನೆ. ಪ್ರತಿ ದಿನವು ತಮ್ಮ ಹೃದಯಗಳಲ್ಲಿ ಉದ್ಭವಿಸುವ ಕೋಪವನ್ನು ನಿಯಂತ್ರಿಸಿಕೊಂಡವರಾಗಿ ವಿಶ್ವಾಸಿಗಳು ವ್ಯವಹರಿಸಬೇಕು. **27**

**4:27** ಸುಳ್ಳುತನ ಮತ್ತು ಕೋಪ ಈ ಎರಡು ಮಾರ್ಗಗಳ ಮೂಲಕ ಕ್ರೈಸ್ತರು ತಮ್ಮ ಮೇಲೆ ಕಷ್ಟಗಳನ್ನು ಬರಮಾಡಿಕೊಳ್ಳಲು ಸೈತಾನನಿಗೆ ಅವಕಾಶ ಮಾಡಿಕೊಡುತ್ತಾರೆ. ಮತ್ತು ಸೈತಾನನು ಆ ರೀತಿಯ ಅವಕಾಶಗಳಿಗೆ ಯಾವಗಲೂ ಕಾಯುತ್ತಿರುತ್ತಾನೆ (2 ಕೊರಿಂಥ 2:11; 1 ಪೇತ್ರ 5:8). **28**

**4:28** "*ಇನ್ನು ಮೇಲೆ ಕಳವು ಮಾಡದೆ*"– ನಮಗೆ ಒಪ್ಪಿಸಿರುವ ಹಣವನ್ನು ತೆಗೆದುಕೊಳ್ಳುವುದು ಅಥವಾ ಅದರಿಂದ "ಸಾಲ" –ತೆಗೆದುಕೊಂಡು ಹಿಂತಿರುಗಿಸದಿರುವದು ಅಥವಾ ವಯಕ್ತಿಕ ಲಾಭಕ್ಕಾಗಿ ಸುಳ್ಳು ಲೆಕ್ಕವನ್ನು ತೋರಿಸುವುದು, ಮುಂತಾದ ಕಾರ್ಯಗಳು ಸಹ ಕಳ್ಳತನವಾಗುತ್ತದೆ. ಯೋಹಾನ 12:6 ಹೋಲಿಸಿರಿ. ಕೆಲವರಿಗೆ ಇದು ಒಂದು ಕಷ್ಟಕರವಾದ ಶೋಧನೆಯಾಗಿದೆ. ಅನೇಕರು ಕ್ರೈಸ್ತರು ಈ ಕಾರ್ಯದಲ್ಲಿ ವಿಫಲರಾಗುವುದು ಆತ್ಮೀಕ ಜನರು ಅಳುವಂತೆ ಮಾಡುತ್ತದೆ – ನಿಜವಾಗಿಯೂ ಕ್ರಿಸ್ತನು ಅಳುವಂತೆ ಮಾಡುತ್ತಾರೆ. ಈ ಕಾರ್ಯದಲ್ಲಿ ಯಾವನಾದರು ತಪ್ಪಿಗಸ್ಥನಾಗಿದ್ದರೆ ಅವನು ಅವಳು ತೆಗೆದುಕೊಂಡಿರುವುದನ್ನು ಹಿಂತಿರುಗಿಸುವ ಒಳ್ಳೆ ಮನಸ್ಸಿರಲಿ ಮತ್ತು ದೇವರೊಂದಿಗೆ

ಸರಿಪಡಿಸಿಕೊಳ್ಳಲಿ. ದೇವರು ನಗಬಾರದೇ?, ಅನ್ಯಾಯದ ಹಣಕ್ಕಿಂತಲೂ ದೇವರ ಅನ್ಯೋನ್ಯತೆಯು ನಮಗೆ ಮುಖ್ಯವಲ್ಲವೋ?

*"ದುಡಿಯಲಿ. . . ಕೊಡುವದಕ್ಕೆ"*– ಅಪೊ 20:34,35; 2 ಥೆಸ 3:6-10. ಪ್ರಾಮಾಣಿಕವಾಗಿ ಸಂಪಾದಿಸಿದ ಹಣ ಮತ್ತು ಬೇರೆಯವರೊಂದಿಗೆ ಹಂಚಿಕೊಳ್ಳುವಾಗ ದೇವರು ಮಹಿಮೆ ಹೊಂದುತ್ತಾನೆ. ಅಪ್ರಮಾಣಿಕತೆ ಮತ್ತು ಸ್ವಾರ್ಥತೆಯು ದೇವರಿಗೆ ಅಪಮಾನವನ್ನು ತರುತ್ತದೆ.
**29**

**4:29** *"ಕೆಟ್ಟ ಮಾತು"*– 5:4; ಕೊಲೊ 3:8; ಮತ್ತಾಯ 12:36. ಕ್ರಿಸ್ತನು ನಮ್ಮ ಹೃದಯದಲ್ಲಿರುವಾಗ ಹೇಗೆ ತಾನೆ ನಾವು ಕೆಟ್ಟಮಾತುಗಳನ್ನು ಉಪಯೋಗಿಸಲು ಸಾಧ್ಯ?

*"ಭಕ್ತಿಯನ್ನು ವೃದ್ಧಿಮಾಡುವಂಥ ಮಾತು"*– ನಾವು ಹೇಳುವುದರಲ್ಲಿ ಅಥವಾ ಮಾಡುವುದರಲ್ಲಿ ಇದು ನಮ್ಮ ಉದ್ದೇಶವಾಗಿರಬೇಕು ( ವ. 12,15,16). **30**

**4:30** *"ದುಃಖಪಡಿಸಬೇಡಿರಿ"*– ಪರಿಶುದ್ಧಾತ್ಮನು ಭಾವನೆ ಇಲ್ಲದವನಲ್ಲ, ಸುಪ್ತಾವಸ್ಥೆಯ ಪ್ರಭಾವಲ್ಲ, ಆದರೆ ಒಬ್ಬ ವ್ಯಕ್ತಿಯಾಗಿದ್ದಾನೆ (ಯೋಹಾನ 14:16,17). ವಿಶ್ವಾಸಿಗಳು ಆತನನ್ನು ಹೇಗೆ ದುಃಖಪಡಿಸುತ್ತಾರೆ? ಪೌಲನು ಇಲ್ಲಿ ಮಾತಾಡುತ್ತಿರುವ ಪಾಪಗಳ ಮೂಲಕ – ಸುಳ್ಳು, ಕೋಪ, ಕಳ್ಳತನ, ಸ್ವಾರ್ಥತೆ, ಕೆಟ್ಟಮಾತು ಮುಂತಾದವುಗಳು. ಯಾವುದೇ ಅಪರಿಶುದ್ಧವಾದ ಕಾರ್ಯಗಳು ಪರಿಶುದ್ಧನಾದ ಆತನನ್ನು ದುಃಖಪಡಿಸುವುದು. ನಾವು ಅವಶ್ಯವಿಲ್ಲದೆ ದೇವರ ಜನರನ್ನು ದುಃಖಪಡಿಸುವಾಗ ಆತನನ್ನು ದುಃಖಪಡಿಸುತ್ತೇವೆ.

*"ಮುದ್ರೆ ಹೊಂದಿದ್ದೀರಿ"*– ಎಫೆ 1:13,14. ವಿಶ್ವಾಸಿಗಳು ಪವಿತ್ರಾತ್ಮನನ್ನು ನಿಂದಿಸಿದರೂ ಸಹ ಆತನು ಅವರನ್ನು ಬಿಟ್ಟುಬಿಡುವದಿಲ್ಲ. ಆದರೆ ಅವರ ಹೃದಯದಲ್ಲಿ ದುಃಖವಿರುತ್ತದೆ.
**31**

**4:31** ದೇವರಾತ್ಮನನ್ನು ದುಃಖಪಡಿಸುವ ಇತರ ಪಾಪಗಳು. ನಾವು ಅವಗಳನ್ನು ಬಿಟ್ಟುಬಿಡಬೇಕು – ನಮ್ಮ ಜೀವಿತದಲ್ಲಿರಲು ಅವುಗಳಿಗೆ ಯಾವ ಹಕ್ಕು ಇಲ್ಲವೆಂದು ಅವುಗಳನ್ನು ತಿರಸ್ಕರಿಸಬೇಕು. **32**

**4:32** ವಚನ 2. ರೋಮಾ 12:10,17,19; ಕೊಲೊ 3:12,13. ದೇವರು ವಿಶ್ವಾಸಿಗಳನ್ನು ಉಚಿತವಾಗಿ ಕ್ಷಮಿಸಿದನು ಮತ್ತು ಸಂಪೂರ್ಣವಾಗಿ ಕ್ಷಮಿಸಿದನು. ಆದ್ದರಿಂದ ವಿಶ್ವಾಸಿಗಳು ತಮ್ಮ ವಿರುದ್ಧವಾಗಿ ತಪ್ಪು ಮಾಡುವವರನ್ನು ಕ್ಷಮಿಸಬೇಕು. ಅವರು ಹಾಗೆ ಮಾಡದಿದ್ದರೆ ಅವರು ದೇವರೊಂದಿಗೆ ತೊಂದರೆಯಲ್ಲಿರುತ್ತಾರೆ. ಅವರು ಇನ್ನೊಬ್ಬರೊಂದಿಗೆ ಹೇಗೆ ನಡೆದುಕೊಳ್ಳುತ್ತಾರೋ ಹಾಗೆಯೇ ಆತನು ಅವರೊಂದಿಗೆ ನಡಕೊಳ್ಳುತ್ತಾನೆ. ಮತ್ತಾಯ 6:12,14,15; 18:21-35 ನೋಡಿರಿ. ನಮಗೆ ತಪ್ಪು ಮಾಡಿದವರನ್ನು ಕ್ಷಮಿಸಲು ನಿರಾಕರಿಸಿದರೆ ನಮಗೆ ನಾವೇ ಗಾಯ ಮಾಡಿಕೊಳ್ಳುತ್ತೇವೆ, ಕ್ರಿಸ್ತನನ್ನು ದುಃಖಪಡಿಸುತ್ತೇವೆ ಮತ್ತು ಸಭೆಗೆ ಕಷ್ಟವನ್ನು ತರುತ್ತೇವೆ.

# 5[1]

**5:1** ಮತ್ತಾಯ 5:48.  ದೇವರ ಮಕ್ಕಳು ಆತನ ತಂದೆಯಂತೆ ನಡೆದುಕೊಳ್ಳಬೇಕು.

*"ಪ್ರಿಯರಾದ ಮಕ್ಕಳೇ"*– 1 ಯೋಹಾನ 3:1. **2**

**5:2** *"ಪ್ರೀತಿಯಲ್ಲಿ ನಡೆದುಕೊಳ್ಳಿರಿ"*– ಅಥವಾ "ಪ್ರೀತಿಯ ಜೀವತವನ್ನು ಜೀವಿಸಿರಿ" – 3:19; 4:15; ಯೋಹಾನ 13:34; ರೋಮಾ 12:10; ಗಲಾ 5:6,13; 1 ಯೋಹಾನ 3:11,16-18; 4:7,8. "ನಡೆದುಕೊಳ್ಳಿರಿ" –ಎಂಬ ಟಿಪ್ಪಣಿಗಾಗಿ 2:10.

*"ಕ್ರಿಸ್ತನು ನಮ್ಮನ್ನು ಪ್ರೀತಿಸಿದನು"*– ವ. 25; ಯೋಹಾನ 13:1; 15:9,12; ರೋಮಾ 8:37; ಗಲಾ 2:20.

*"ಸುಗಂಧವಾಸನೆಯಾದ ಕಾಣಿಕೆಯಾಗಿಯೂ . . ."*– ಮತ್ತಾಯ 20:28; 26:28; ಯೋಹಾನ 1:29; ರೋಮಾ 3:25; 5:8; 2 ಕೊರಿಂಥ 5:14; ಇಬ್ರಿ 9:14; 10:10,14; 1 ಪೇತ್ರ 2:24; 3:18. "ಸುಗಂಧ" ಎಂಬ ಪದವು ಕ್ರಿಸ್ತನ ಚಿನ್ಹೆಗಳಾದ ಹಳೆಯ ಒಡಂಬಡಿಕೆಯ ಕಾಣಿಕೆಗಳನ್ನು ಜ್ಞಾಪಕಕ್ಕೆ ತರುತ್ತದೆ (ಯಾಜಕ 1:9,13,17, ಮುಂತಾದವುಗಳು). **3**

**- 5:3** 4:1; 1 ಕೊರಿಂಥ 6:13-18; 1 ಪೇತ್ರ 1:14,15; 1 ಯೋಹಾನ 2:6.

*"ದ್ರವ್ಯಾಶೆ"*– ವ. 5; ಲೂಕ 12:15-21; 1 ತಿಮೊ 6:6-10; ಇಬ್ರಿ 13:5; 2 ಪೇತ್ರ 1:4. **4**

**- 5:4** 4:29; ಕೊಲೊ 3:8.

*"ಉಪಕಾರ ಸ್ತುತಿ ಮಾಡುವುದು"*– ವ. 20; ಕೊಲೊ 3:17; ಫಿಲಿಪ್ಪಿ 4:6; 1 ಥೆಸ 5:18; ಇಬ್ರಿ 13:15; ಕೀರ್ತನೆ 50:14; 113:1; ಯಾಜಕ 7:12,13. **5**

**- 5:5** 1 ಕೊರಿಂಥ 6:9-11; ಗಲಾ 5:21; ಇಬ್ರಿ 10:26,27; 1 ಯೋಹಾನ 3:9,10.

*"ವಿಗ್ರಹಾರಾಧಕರು"*– ದುರಾಶೆಯ ವ್ಯಕ್ತಿಯನ್ನು ವಿಗ್ರಹಾರಾಧಕ ಎಂದು ಕರೆಯಲಾಗುತ್ತದೆ ಯಾಕಂದರೆ ಆ ರೀತಿಯ ವ್ಯಕ್ತಿಯು ದುರಾಶೆಯಿಂದ ತಾನು ಆಶಿಸುವ ವಸ್ತುವನ್ನು ಅಥವಾ ವಸ್ತುಗಳನ್ನು ಆರಾಧಿಸುತ್ತಾನೆ. ಅವನ ವಿಗ್ರಹವು ಅವನ ಹೃದಯದಲ್ಲಿದೆ – ಯೆಹೆಜ್ಕೇಲ 14:3,4. "ರಾಜ್ಯ" – ಮತ್ತಾಯ 4:17; ರೋಮಾ 14:17; ಕೊಲೊ 1:13 ನೋಡಿರಿ. **6**

**5:6** *"ನಿಮ್ಮನ್ನು ಯಾರೂ ಮೋಸಪಡಿಸಬಾರದು"*– 1 ಕೊರಿಂಥ 6:9; ಗಲಾ 6:7; 1 ಯೋಹಾನ 3:7,8. ಕೆಲವು ಜನರು (ಕೆಲವು ಕ್ರೈಸ್ತರನ್ನೂ ಸೇರಿ) ತಮ್ಮ ಇಷ್ಟಬಂದಂತೆ ಪಾಪವನ್ನು ಮಾಡುತ್ತಾ ಅದರಲ್ಲೇ ಮುಂದುವರಿಯುತ್ತಾ ದೇವರ ರಾಜ್ಯದಲ್ಲಿ ಇನ್ನೂ ಅವರಿಗೆ ಸ್ಥಳವಿದೆ ಎಂದು ತಿಳಿದುಕೊಳ್ಳುತ್ತಾರೆ ಮತ್ತು ಬೇರೆಯವರನ್ನೂ ಹಾಗೆ ಮಾಡಲು ಪ್ರೇರಿಸುತ್ತಾರೆ. ಆದರೆ ಆ ರೀತಿಯ ಜನರು ಮೋಸಕ್ಕೆ ಮತ್ತು ಒಣ ಮಾತುಗಳಿಗೆ ಒಳಗಾಗುತ್ತಿದ್ದಾರೆ.

*"ದೇವರ ಕೋಪ"*– ಸಂಖ್ಯಾ 23:5; ಧರ್ಮೋ 4:25; ಕೀರ್ತನೆ 90:7 - 11; ಯೋಹಾನ

3:36; ರೋಮಾ 1:8; ಮುಂತಾದ. ಟಿಪ್ಪಣಿಯನ್ನು ನೋಡಿರಿ. **7**

**5:7** 2 ಕೊರಿಂಥ 6:14-18; ಮುಂತಾದವುಗಳು. **8**

**5:8** ಪಾಪಿಗಳು ಮತ್ತು ನಂಬದಿರುವವರು ಆತ್ಮೀಕ ಕುರುಡುತನದಲ್ಲಿದ್ದಾರೆ, ಅವರು ಕತ್ತಲಲ್ಲಿದ್ದಾರೆ. ಅದರಂತೆ ವಿಶ್ವಾಸಿಗಳು ಕ್ರಿಸ್ತನ ಬೆಳಕಿನಲ್ಲಿ ಮಾತ್ರವಲ್ಲ, ಕ್ರಿಸ್ತನಲ್ಲಿ ಅವರು ಬೆಳಕಾಗಿದ್ದಾರೆ (ಮತ್ತಾಯ 5:14-16). ಇದರ ಪ್ರಕಾರವಾಗಿ ಜೀವಿಸುವ ಭಾಗ್ಯವಾಗಿದೆ ಮತ್ತು ಅವರ ಕರ್ತವ್ಯವಾಗಿದೆ. ದೇವರು ಬೆಳಕಾಗಿದ್ದಾನೆ (1 ಯೋಹಾನ 1:5). ಆದ್ದರಿಂದ ಆತನ ಮಕ್ಕಳು ಸಹ ಬೆಳಕಿನವರಾಗಿದ್ದಾರೆ, ಸಂಪೂರ್ಣ ಪರಿಶುದ್ಧನೂ ಮತ್ತು ನಿಷ್ಕಳಂಕವುಳ್ಳ ಆತನ ಮಕ್ಕಳು. ಆದ್ದರಿಂದ ಅವರು ಸಂಪೂರ್ಣ ನಿಷ್ಕಳಂಕ ಮತ್ತು ಪರಿಶುದ್ಧ ಮಾರ್ಗದಲ್ಲಿ ಜೀವಿಸಲು ಪ್ರಯತ್ನಿಸಬೇಕು. **9**

**5:9** *"ಫಲ"*– ಮತ್ತಾಯ 7:17-20; ಯೋಹಾನ 15:1-8; ರೋಮಾ 7:4.

*"ಒಳ್ಳೆತನ"*– ಗಲಾ 5:22.

*"ನೀತಿ"*– ಎಫೆ 4:24; ಮತ್ತಾಯ 5:6; ರೋಮಾ 6:18; 8:4; 14:17,18; 2 ಕೊರಿಂಥ 5:21; ಫಿಲಿಪ್ಪಿ 1:11; 1 ತಿಮೊ 6:11; 1 ಪೇತ್ರ 2:24; ಕೀರ್ತನೆ 15:1,2.

*"ಸತ್ಯ"*– ಎಫೆ 4:15,21,25. **10**

**5:10** ರೋಮಾ 12:2; 2 ಕೊರಿಂಥ 5:9. ಕರ್ತನಾದ ಯೇಸುವನ್ನು ಯಾವುದು ಸಂತೋಷಪಡಿಸುತ್ತದೆ ಮತ್ತು ಆ ಕಾರ್ಯಗಳನ್ನು ಮಾಡುವುದೇ ವಿಶ್ವಾಸಿಗಳ ಸಂಪೂರ್ಣ ಗುರಿಯಾಗಿರಬೇಕು. **14**

**5:14** ಇದು ಹಳೆಯ ಒಡಂಬಡಿಕೆಯ ಉಲ್ಲೇಖವಲ್ಲ ಆದರೆ ಅಲ್ಲಿನ ಕೆಲವು ವಚನಗಳನ್ನು ಆಧರಿಸಿದೆ – ಯೆಶಾಯ 60:1; ಮಲಾಕಿ 4:2. ಈ ಪದಗಳು ಹಳೆಯ ಕ್ರೈಸ್ತ ಸಂಗೀತವಾಗಿರಬಹುದು.

*"ಸತ್ತವರನ್ನು ಬಿಟ್ಟು ಏಳು"*– ಕತ್ತಲೆಯಲ್ಲಿ ಜೀವಿಸುವವರು ಮತ್ತು ಪಾಪಮಾಡುವವರು ಆತ್ಮೀಕವಾಗಿ ನಿದ್ರಿಸುತ್ತಿದ್ದಾರೆ ಮತ್ತು "ಸತ್ತ"ವರಾಗಿದ್ದಾರೆ (2:1). ಆತನ ಮಕ್ಕಳ ಮೂಲಕ ಈ ಲೋಕದಲ್ಲಿ ಕ್ರಿಸ್ತನ ಬೆಳಕು ಪ್ರಕಾಶಿಸುತ್ತಿದೆ. ಮತ್ತು ನಿದ್ರಿಸುತ್ತಿರುವವರು ಮತ್ತು ಸತ್ತವರು ಎದ್ದು ಕ್ರಿಸ್ತನ ಬಳಿಗೆ ಬರಬೇಕು. **15**

**5:15** *"ನಡಕೊಳ್ಳುವ"*– "ನಡೆದುಕೊಳ್ಳುವ" – ಟಿಪ್ಪಣಿ 2:10. ವಿಶ್ವಾಸಿಗಳ ಜೀವನ ಹೇಗಿರಬೇಕೆಂದರೆ ಅವರ ಮೂಲಕ ದೇವರ ಬೆಳಕು ನಿದ್ರಿಸುತ್ತಿರುವ ಮತ್ತು ಸತ್ತ ಮನುಷ್ಯರ ಮೇಲೆ ಬೀಳುವಂತಿರಬೇಕು.

*"ಜ್ಞಾನ"*– ಕೊಲೊ 4:5; ಮತ್ತಾಯ 10:16. ಈ ಬಿದ್ದುಹೋಗಿರುವ ಲೋಕದಲ್ಲಿ ಹೇಗೆ ಜೀವಿಸಬೇಕೆಂಬ ಜ್ಞಾನವು ವಿಶ್ವಾಸಿಗಳಿಗಿರಬೇಕು. ನಾವು ಈ ಜ್ಞಾನವನ್ನು ಪಡೆಯಬಹುದು (ಯಾಕೋಬ 1:5,6). **16**

**5:16** ನಮ್ಮ ಬೆಳಕು ಪ್ರಕಾಶಿಸಬೇಕಾದರೆ ನಮಗೆ ಕೊಟ್ಟಿರುವ ಅವಕಾಶಗಳನ್ನು ನಾವು ಸರಿಯಾಗಿ ಉಪಯೋಗಿಸಿಕೊಳ್ಳಬೇಕು.

*"ದಿನಗಳು ಕೆಟ್ಟವುಗಳಾಗಿವೆ"*– ಗಲಾ 1:4; ಫಿಲಿಪ್ಪಿ 2:15; 2 ತಿಮೊ 3:1. **17**

**5:17** *"ವಿಚಾರಿಸಿ ತಿಳುಕೊಳ್ಳಿರಿ"*– 1:18; 4:18; ಕೊಲೊ 1:9; 2:2; ರೋಮಾ 12:1,2. **18**

**5:18** *"ಮದ್ಯಪಾನ ಮಾಡಿ ಮತ್ತರಾಗಬೇಡಿರಿ"*– ರೋಮಾ 13:13; 1 ಕೊರಿಂಥ 5:11; 6:10; ಗಲಾ 5:21; ಯೆಶಾಯ 5:11,22; ಆದಿ 9:21, "ಆತ್ಮ", ಹೌದು ಇದು ದೇವರಾತ್ಮನನ್ನು ಅರ್ಥೈಸುತ್ತದೆ (1:13,14; 2:18,22; 3:16).

*"ಪವಿತ್ರಾತ್ಮಭರಿತರಾಗಿ"*– ಎಲ್ಲ ವಿಶ್ವಾಸಿಗಳಿಗೆ ಇದು ದೇವರ ಚಿತ್ತವಾಗಿದೆ. ದೇವರು ತನ್ನ ಚಿತ್ತವಿಲ್ಲದೆ ಏನನ್ನೋ ಮಾಡಲು ಅಥವಾ ಯಾವುದಾದರೊಂದನ್ನು ಹೊಂದಿಕೊಳ್ಳುವಂತೆ ಹೇಳುವುದಿಲ್ಲ. 3:19 ರಲ್ಲಿ ಪೌಲನ ಪ್ರಾರ್ಥನೆಯಲ್ಲಿ ನಾವು ಕಾಣವ ದೇವರ ಸಂಪೂರ್ಣನಾದ ಅದೇ ಆತ್ಮನಾಗಿದ್ದಾನೆ. ಇದು ದೇವರ ಚಿತ್ತವಾಗಿರುವದರಿಂದ ನಾವು ಇದನ್ನು ಸಂಪೂರ್ಣವಾಗಿ ಹೊಂದಿಕೊಳ್ಳಬೇಕೆಂದು ನಮಗೆ ತಿಳಿದಿದೆ (1 ಯೋಹಾನ 5:14-15; ಲೂಕ 11:13). ಯಾವ ಮನುಷ್ಯನ ಮಧ್ಯವರ್ತಿಕೆ ಇಲ್ಲದೆ ನಾವು ನೇರವಾಗಿ ಪರಲೋಕದಲ್ಲಿರುವ ತಂದೆಯಾದ ದೇವರಿಂದ ನಂಬಿಕೆಯ ಮೂಲಕ ಹೊಂದಿಕೊಳ್ಳಬಹುದು. ಅಪೊ 1:5; 2:4,39 ಟಿಪ್ಪಣಿಯನ್ನು ಸಹ ನೋಡಿರಿ. "ತುಂಬಲ್ಪಡಿರಿ" ಅಂದರೆ ಸಂಪೂರ್ಣವಾಗಿ ಹೊಂದಿಕೊಳ್ಳಲು ಮತ್ತು ಅದೇ ಸ್ಥಿತಿಯಲ್ಲಿರಲು ನಿರಂತರವಾಗಿ ತುಂಬಲ್ಪಡುವುದು. ಎಲ್ಲಾ ವಿಶ್ವಾಸಿಗಳ ಸಾಮಾನ್ಯ ಸ್ಥಿತಿಯಾಗಿರಬೇಕೆಂದು ದೇವರು ಬಯಸುವವನಾಗಿದ್ದಾನೆ. ಇದು ನಾವು ಜೀವಿಸಬೇಕಾದ ಕ್ರೈಸ್ತ ಜೀವಿತವಾಗಿದೆ. ನಾವು ಯಾವ ರೀತಿ ನಮ್ಮನ್ನು ತೊರೆದು ನಾವು ಜೀವಿಸುವ ರೀತಿಯಲ್ಲಿ ಜೀವಿಸಲು ಮತ್ತು ಕ್ರಿಸ್ತನ ಸೇವೆ ಮಾಡುವವರಾಗಿರಲು ಸಾಧ್ಯ? ನಿರಂತರವಾಗಿ "ತುಂಬಿಸಲ್ಪಡಬೇಕು" ಅಂದರೆ, ನಾವು, ನಿರಂತರವಾಗಿ ವಿಧೇಯತೆಯುಳ್ಳವರಾಗಿರಬೇಕು, ಒಪ್ಪಿಸಿಕೊಡುವವರಾಗಿರಬೇಕು ಮತ್ತು ನಂಬಿಕೆಯಲ್ಲಿರಬೇಕು. "ತುಂಬಿಸಲ್ಪಡುವುದು" ಅಂದರೆ ಏನು? ಕುಡಿದು ಮತ್ತೇರಿದವನು ಮದ್ಯಪಾನದ ಅಮಲಿನಲ್ಲಿರುತ್ತಾನೆ. ಒಬ್ಬ ವ್ಯಕ್ತಿಯು ದೇವರಾತ್ಮನಿಂದ ತುಂಬಲ್ಪಟ್ಟಿದ್ದರೆ ದೇವರಾತ್ಮನ ನಿಯಂತ್ರಣದಲ್ಲಿರುತ್ತಾನೆ. ಆದರೆ ಇದು ತನ್ನ ನಿಯಂತ್ರಣವನ್ನು ಕಳೆದುಕೊಳ್ಳಬೇಕೆಂದಲ್ಲ (1 ಕೊರಿಂಥ 14:32,33. ಶಮೆದಮೆಯು ಪವಿತ್ರಾತ್ಮನ ಫಲವಾಗಿದೆ – ಗಲಾ 5:23). ಇದು ಪ್ರಜ್ಞಾಪೂರ್ವಕವಾಗಿ, ಆತ್ಮನಿಗೆ ಪ್ರೀತಿಯಿಂದ ವಿಧೇಯರಾಗುವದು ಮತ್ತು ಆತನೊಂದಿಗೆ ಸಂತೋಷವಾಗಿ ಅನ್ಯೋನ್ಯತೆಯಲ್ಲಿರುವುದು. **19-21**

**5:19-21** ದೇವರಾತ್ಮನ ಸಂಪೂರ್ಣತೆಗೆ ಸಾಕ್ಷಿ ಯಾವುದು? ಪೌಲನು ಇಲ್ಲಿ ಯಾವ ಸೂಚನೆ

ಮತ್ತು ಅದ್ಭುತದ ಅಥವಾ ವರಗಳ ಅಥವಾ ಆತ್ಮನು ಪ್ರಕಟವಾಗುವ ಬಗ್ಗೆ ಮಾತಾಡುವದಿಲ್ಲ. ಇವುಗಳಲ್ಲಿ ಎಲ್ಲವನ್ನು ಎಲ್ಲಾ ವಿಶ್ವಾಸಿಗಳು ಹೊಂದಿರುವದಿಲ್ಲ. ಕೆಲವರಿಗೆ ಒಂದು ಇದ್ದರೆ ಇನ್ನೊಬ್ಬರಿಗೆ ಇನ್ನೊಂದಿರುತ್ತದೆ (ರೋಮಾ 12:4-8; 1 ಕೊರಿಂಥ 12:7-11,28-30). ಕೆಲವು ವರಗಳನ್ನು ಹೊಂದಿಕೊಂಡು ಅಥವಾ ಆತ್ಮನ ಅನೇಕ ವರಗಳನ್ನು ಹೊಂದಿಕೊಂಡು, ಆತ್ಮನಿಂದ ತುಂಬಿಸಲ್ಪಡದ ಸ್ಥಿತಿಯಲ್ಲಿರಲು ಸಾಧ್ಯ (1 ಕೊರಿಂಥ 1:7; 3:1-3). ಮತ್ತು ಆತ್ಮನಿಂದ ತುಂಬಿಸಲ್ಪಟ್ಟು, ಕೆಲವು ಕ್ರೈಸ್ತರು ಹೆಚ್ಚಾಗಿ ಒತ್ತಾಯ ಪಡಿಸುವ ವರಗಳನ್ನು ಹೊಂದಿಕೊಳ್ಳದಿರುವುದೂ ಸಾಧ್ಯವಿದೆ (ಅಪೊ 2:4,11; 1 ಕೊರಿಂಥ 12:10,28-30 ಟಿಪ್ಪಣಿ ನೋಡಿರಿ). ಇಲ್ಲಿ ಬೇರೆ ವಿಷಯಗಳ ಬಗ್ಗೆ ಮಾತನಾಡುತ್ತಾನೆ, ದೇವರಾತ್ಮನ ಸಂಪೂರ್ಣತೆಯನ್ನು ತೋರಿಸುವ ವಿಷಯಗಳು – ವಿಶ್ವಾಸಿಗಳೊಂದಿಗೆ ಸಂತೋಷದ ಅನ್ಯೋನ್ಯತೆ, ದೇವರಿಗೆ ಸ್ತೋತ್ರ ಸಲ್ಲಿಸುವುದು ಮತ್ತು ಒಬ್ಬರಿಗೊಬ್ಬರು ಅಧೀನರಾಗುವುದು. ಪವಿತ್ರಾತ್ಮನ ಫಲಗಳು (ಗಲಾ 5:22) ಆತ್ಮನಿಂದ ತುಂಬಿರುವವರಲ್ಲಿ ಉತ್ತಮವಾಗಿ ಅಭಿವೃದ್ಧಿ ಹೊಂದುತ್ತವೆ. **19**

**5:19** ಆತ್ಮನಿಂದ ತುಂಬಿದ ಹೃದಯದಿಂದ ಆತ್ಮಭರಿತ ಸಂಗೀತ ಮತ್ತು ಹಾಡುಗಳು ಸ್ವಾಭಾವಿಕವಾಗಿ ಉಕ್ಕುತ್ತದೆ. **20**

**5:20** *"ಯಾವಾಗಲೂ"* ಮತ್ತು *"ಎಲ್ಲಾ ಕಾರ್ಯಗಳಿಗೋಸ್ಕರ"*–ಎಂಬ ಪದಗಳನ್ನು ಗಮನಿಸಿ. 2 ಕೊರಿಂಥ 4:15; ಕೊಲೊ 2:7; 4:2; 1 ಥೆಸ 5:18; 1 ತಿಮೊ 2:1; ಇಬ್ರಿ 13:15; ಯಾಜಕ 7:12,13; ಕೀರ್ತನೆ 7:17 ಮುಂತಾದ. ವಿಶ್ವಾಸಿಗಳು ಇದನ್ನು ರೋಮಾ 8:28 ಇರುವದರಿಂದ ಮಾಡಬಹುದು – ಅವರು ದೇವರಾತ್ಮನಿಂದ ತುಂಬಲ್ಪಟ್ಟಿದ್ದರೆ. **21**

**5:21** *"ಅಧೀನರಾಗಿರಿ"*– ವಚನಗಳು 22,24; 6:1,5; 1 ಕೊರಿಂಥ 16:16; ಇಬ್ರಿ 13:17; 1 ಪೇತ್ರ 5:5. ಅಧೀನತೆ ಎಂದರೆ ವಿಧೇಯತ್ವ. ಇದು ಸ್ವ-ಇಚ್ಚೆಗೆ, ಸ್ವ-ಸಮರ್ಥನೆ ಮತ್ತು ಅಹಂಕಾರದ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದೆ.

*"ಭಯ"*– ಟಿಪ್ಪಣಿಯನ್ನು ಆದಿ 20:11; ಕೀರ್ತನೆ 34:11-14; 111:10; ಜ್ಞಾನೋ 1:7 ನೋಡಿರಿ. **22-24**

**5:22-24** *"ಕರ್ತನಿಗೆ ಹೇಗೋ ಹಾಗೆಯೇ"*– ಹೆಂಡತಿಯರು ತಮ್ಮ ಗಂಡಂದಿರನ್ನು ಕ್ರಿಸ್ತನನ್ನು ಸನ್ಮಾನಿಸಿದಂತೆ ಸನ್ಮಾನಿಸಬೇಕೆಂದಲ್ಲ, ಆದರೆ ಅವರು ತಮ್ಮ ಗಂಡಂದಿರಿಗೆ ಮತ್ತು ಕ್ರಿಸ್ತನಿಗೆ ಅಧೀನರಾಗಿರಬೇಕು. ಗಂಡಂದಿರಿಗೆ ಅಧೀನರಾಗುವುದು ಕ್ರಿಸ್ತನಲ್ಲಿ ಅವರ ಕರ್ತವ್ಯವಾಗಿದೆ, ಈ ಆಧುನಿಕ ದಿನಗಳಂತೆ ಇದ್ದ ಆ ದಿನಗಳಲ್ಲಿ ಪೌಲನು ಈ ವಾಕ್ಯಗಳನ್ನು ಬರೆದನು. ಕೊಲೊ 3:18 ಹೋಲಿಸಿರಿ. ಮತ್ತು 1 ತಿಮೊ 2:11-13; 1 ಪೇತ್ರ 3:1,2,5,6 ಸಹ ನೋಡಿರಿ. ಇದನ್ನು ಮಾಡಲು ಒಪ್ಪದ ಹೆಂಡತಿಯರು ದೇವರ ಕ್ರಮದ ವಿರುದ್ಧವಾಗಿ ಹೋರಾಡುತ್ತಿದ್ದಾರೆ ಮತ್ತು ತಮ್ಮ ಮೇಲೆ ಕಷ್ಟವನ್ನು ತಂದುಕೊಳ್ಳುತ್ತಾರೆ.

*"ಹೆಂಡತಿಗೆ ತಲೆಯಾಗಿದ್ದಾನೆ"*– ಹೆಂಗಸರು ಗಂಡಸರಿಗಿಂತಲೂ ಕೆಳಮಟ್ಟದವರೆಂದು ಅರ್ಥವಲ್ಲ. ಅದರ ಅರ್ಥವೇನೆಂದರೆ ದೇವರು ತನ್ನ ಅತಿಶಯವಾದ ಜ್ಞಾನದಲ್ಲಿ ಕುಟುಂಬ ಮತ್ತು ಸಮಾಜದಲ್ಲಿ ಒಂದು ಕ್ರಮವನ್ನು ಸ್ಥಾಪಿಸಿದ್ದಾನೆ ಮತ್ತು ವಿಶ್ವಾಸಿಗಳು ಆ ಕ್ರಮವನ್ನು ಅನುಸರಿಸಬೇಕೆಂದು ಆತನು ಬಯಸುತ್ತಾನೆ. 1 ಕೊರಿಂಥ 11:3-16 ಮತ್ತು ಅದರ ಟಿಪ್ಪಣಿಯನ್ನು ನೋಡಿರಿ.

*"ರಕ್ಷಕ"*– ಕ್ರಿಸ್ತನು ಬಿಡುಗಡೆ ಮಾಡುವವನು, ಕಾಪಾಡುವವನು ಮತ್ತು ಸಭೆಯ ರಕ್ಷಕನಾಗಿದ್ದಾನೆ.

*"ಶರೀರ"*– ವ.30; 1:22,23. **24**

**5:24** *"ಎಲ್ಲಾ ವಿಷಯಗಳಲ್ಲಿ"*– ಗಂಡ ಹೆಂಡತಿ ಇಬ್ಬರೂ ವಿಶ್ವಾಸಿಗಳು ಮತ್ತು ಇಬ್ಬರೂ ಕರ್ತನಿಗೆ ತಮ್ಮನ್ನು ಒಪ್ಪಿಸಿಕೊಟ್ಟಿರುವ ಸನ್ನಿವೇಶದಲ್ಲಿ ಪೌಲನು ಮಾತನಾಡುತ್ತಿದ್ದನು. ಹೆಂಡತಿಯು ದೇವರ ವಾಕ್ಯಕ್ಕೆ ವಿರುದ್ಧವಾಗಿ ಏನಾದರು ಮಾಡಬೇಕೆಂದು ಗಂಡನು ಬಯಸಿದರೆ ಅಥವಾ ಆಕೆಯ ಇಚ್ಛೆಗೆ ವಿರುದ್ಧವಾಗಿ ಏನಾದರನ್ನು ಮಾಡಿದರೆ ಆಕೆಯು ಅವನಿಗೆ ವಿಧೇಯಳಾಗಬಾರದು. ಆಕೆಯನ್ನು ಪಾಪ ಮಾಡಲು ನಡೆಸುವುದಾದರೆ ಆಕೆ ವಿಧೇಯಳಾಗಬೇಕೆಂದು ದೇವರು ಬಯಸುವದಿಲ್ಲ. ದೇವರ ವಾಕ್ಯದಲ್ಲಿ ಕೊಟ್ಟಿರುವ ತತ್ವಗಳನ್ನು ನೋಡಿರಿ – ಅಪೊ 4:19; 5:29; ರೋಮಾ 14:23 ಮುಂತಾದ. **25**

**5:25** *"ಕ್ರಿಸ್ತನ ಪ್ರಕಾರವೇ"*– ಯೋಹಾನ 13:34.

*"ಪ್ರೀತಿ"*– ಹೆಂಡತಿಯರಿಗೆ ತಮ್ಮ ಜವಾಬ್ದಾರಿಕೆ ಇರುತ್ತದೆ – ಅಧೀನತೆ. ಗಂಡದಿರಿಗೂ ಅವರದೇಯಾದ ಜವಾಬ್ದಾರಿ ಇದೆ – ಪ್ರೀತಿಸುವುದು (ಹೆಂಡತಿಯರು ತಮ್ಮ ಗಂಡಂದಿರನ್ನು ಪ್ರೀತಿಸಬಾರದೆಂದು ಇದರ ಅರ್ಥವಲ್ಲ ಅಥವಾ ಗಂಡಂದಿರು ಹೆಂಡತಿಯ ಇಚ್ಛೆಗಳಿಗೆ ಸ್ಪಂದಿಸಬಾರದೆಂದಲ್ಲ). ಪ್ರೀತಿಯನ್ನು ಕಾರ್ಯದಲ್ಲಿ ತೋರಿವುದರ ಬಗ್ಗೆ ಪೌಲನು ಮಾತನಾಡುತ್ತಿದ್ದನು. ಗಂಡಂದಿರು ಹೆಂಡತಿಯರನ್ನು ನಡೆಸುಕೊಳ್ಳುವ ರೀತಿ, ಕೇವಲ ಪ್ರಯಣದ ಭಾವನೆಯಿಂದಾಗಬಾರದು. ಇದರಲ್ಲಿ ವಿಫಲವಾಗುವ ಗಂಡಂದಿರು ಮದುವೆಯಲ್ಲಿ ಮತ್ತು ಸಂಬಂಧಗಳಲ್ಲಿ ಅನೇಕ ಕಷ್ಟಗಳಿಗೆ ಮತ್ತು ದುಃಖಕ್ಕೆ ಜವಾಬ್ದಾರರಾಗುತ್ತಾರೆ.

*"ತನ್ನನ್ನು ಒಪ್ಪಿಸಿಕೊಟ್ಟನು"*– ವ. 2; ಗಲಾ 2:20; ರೋಮಾ 5:8; ಯೋಹಾನ 10:11,15. **26,27**

**5:26,27** ಕ್ರಿಸ್ತನು ಸಭೆಗಾಗಿ ಯಾಕೆ ಸತ್ತನು ಎಂದು ನೋಡಿರಿ. 1:4; ತೀತ 2:14; 1 ಕೊರಿಂಥ 6:11 ಹೋಲಿಸಿರಿ. ಆತನು ಪರಿಪೂರ್ಣ ಶುದ್ಧನು ಮತ್ತು ಆತನ ಸಭೆಯು ಪರಿಪೂರ್ಣವಾಗಿ ಪರಿಶುದ್ಧರಾಗುವವರೆಗೂ ಆತನಿಗೆ ತೃಪ್ತಿಯಾಗುವದಿಲ್ಲ. ಕ್ರಿಸ್ತನ ಎರಡನೇ

ಬರೋಣದ ಸಮಯದಲ್ಲಿ ಸಭೆಯು ಆಕಾಶದಲ್ಲಿ ಕ್ರಿಸ್ತನನ್ನು ಬೇಟಿಮಾಡಲು ಬರುವಾಗ ವಚನ 27 ನೆರವೇರುತ್ತದೆ (1 ಕೊರಿಂಥ 15:50-57).

*"ವಾಕ್ಯೋಪದೇಶ ಸಹಿತವಾದ ಜಲಸ್ನಾನ"*– 5:26. ಪೌಲನು ನೀರಿನ ದೀಕ್ಷಾಸ್ನಾದ ಬಗ್ಗ ಮಾತಾಡುತ್ತಿದ್ದಾನೆಂದು ಕೆಲವು ಪಂಡಿತರ ಅಭಿಪ್ರಾಯ. ಇದು ಅಸಂಭವವಾಗಿದೆ ಎಂದು ತೋರುತ್ತದೆ. ನಾವೆಲ್ಲರು ಒಂದನ್ನು ತಿಳಿದುಕೊಳ್ಳೋಣ ಮತ್ತು ಜ್ಞಾಪಕದಲ್ಲಿಟ್ಟುಕೊಳ್ಳೋಣ ದೇವರ ವಾಕ್ಯದ ಮತ್ತು ದೇವರಾತ್ಮನ ಮೂಲಕ ಒಳಗಿನ ಶುದ್ಧೀಕರಣವು (ದೀಕ್ಷಾಸ್ನಾನ) ಬಹಳ ಮುಖ್ಯವಾದದ್ದು. ಶುದ್ಧೀಕರಣ ಮತ್ತು ತೊಳೆಯುವಿಕೆಗಾಗಿ ಕೀರ್ತನೆ 51:2,7; ಯೆಹೆಜ್ಕೇಲ 36:25,26; ಯೋಹಾನ 13:5-10; 15:3; ತೀತ 3:5; ಯೋಹಾನ 3:3-8; ಇಬ್ರಿ 9:14; 1 ಯೋಹಾನ 1:7,9. **28,29**

**5:28,29** ಅವನ ಅರ್ಥವೇನೆಂದರೆ ಗಂಡ ಮತ್ತು ಹೆಂಡತಿಯು "ಒಂದೇ ಶರೀರ" (ವ.31). ಆಕೆಯು ಅವನ ಸ್ವಂತ ಶರೀರವಾದ್ದರಿಂದ ಅವನು ಆಕೆಯನ್ನು ಸ್ವಂತ ಶರೀರದಂತೆ ಪ್ರೀತಿಸಬೇಕು.

*"ಪೋಷಿಸುತ್ತಾನೆ"*– 5:29. ಇದರ ಅರ್ಥ ಅವನು ಪ್ರೀತಿಯಿಂದ ಆಕೆಯೊಂದಿಗೆ ನಡಕೊಳ್ಳುತ್ತಾನೆ (ವ.25). ಕಾರ್ಯ ರೂಪದಲ್ಲಿ ತೋರಿಸದ ಪ್ರೀತಿಯು ಕ್ರೈಸ್ತ ಪ್ರೀತಿಯಲ್ಲ, ಕ್ರಿಸ್ತನ ಪ್ರೀತಿಯಲ್ಲ – 1 ಯೋಹಾನ 3:18. ಪ್ರೀತಿಯ ಸಂದೇಶವನ್ನು ಕಳುಹಿಸಿ ಕ್ರಿಸ್ತನು ಪರಲೋಕದಲ್ಲಿಯೇ ಉಳಿದುಕೊಳ್ಳಲಿಲ್ಲ. ಆತನು ಕೆಳಗಿಳಿದು ಬಂದನು ಮತ್ತು ತನ್ನನ್ನೇ ನಮಗಾಗಿ ಸಮರ್ಪಿಸಿದನು (ವ.25). ಈಗ ಆತನು ತನ್ನ ಸಭೆಯನ್ನು "ಪೋಷಿಸಿ ಸಂರಕ್ಷಿಸುತ್ತಾನೆ". **30**

**- 5:30** 1:23; 2:16; 3:6; 4:4,12,16; ರೋಮಾ 12:4,5; 1 ಕೊರಿಂಥ 12:12,13,27. **31**

**- 5:31** ಆದಿ 2:24. **32**

**5:32** ಈ ಕಾರಣದಿಂದ ಒಬ್ಬ ವ್ಯಕ್ತಿಯು ತನ್ನ (ಅಥವಾ ಆಕೆಯ) ತಂದೆತಾಯಿಗಳನ್ನು, ಸಹೋದರಿ ಮತ್ತು ಸಹೋದರರನ್ನು ಮತ್ತು ತನಗಿರುವದನೆಲ್ಲವನ್ನು ಮತ್ತು ತನ್ನನ್ನು ಸಹ ಬಿಟ್ಟು ಕ್ರಿಸ್ತನೊಂದಿಗೆ ಐಕ್ಯವಾಗುವನು ಮತ್ತು ಅವರಿಬ್ಬರು "ಒಂದೇ ಆತ್ಮ" ಆಗುವರು (1 ಕೊರಿಂಥ 6:17; ಮತ್ತಾಯ 4:18-22; 10:37-39; ಲೂಕ 14:26,27,33). ಪೌಲನು ಇಲ್ಲಿ ಒಬ್ಬ ಗಂಡನು ಕ್ರಿಸ್ತನ ಒಂದು ಚಿನ್ಹೆ ಅಥವಾ ಛಾಯೆಯಾಗಿದ್ದಾನೆಂದು ಮತ್ತು ಹೆಂಡತಿಯು ಸಭೆಯ ಚಿನ್ಹೆಯಾಗಿದ್ದಾಳೆಂದು ಮಾತನಾಡುತ್ತಿದ್ದಾನೆ. 2 ಕೊರಿಂಥ 11:2; ಯೋಹಾನ 3:28,29; ಪ್ರಕ 19:7 ಹೋಲಿಸಿರಿ. **33**

**5:33** ಹೆಂಡತಿಯ ಗೌರವಕ್ಕೆ ತಕ್ಕ ಹಾಗೆ ಗಂಡನು ನಡೆದುಕೊಳ್ಳಬೇಕೆಂದು ಹೇಳಬೇಕೋ? ಅಥವಾ ಹೆಂಡತಿಯು ಗಂಡನ ಪ್ರೀತಿಗೆ ತಕ್ಕಂತೆ ನಡೆದುಕೊಳ್ಳಬೇಕೆಂದು ಹೇಳಬೇಕೋ? ಈ

ವಚನದಲ್ಲಿ ಗ್ರೀಕ್ ಪದದಿಂದ ಭಾಷಾಂತರಗೊಂಡ “ಭಯಭಕ್ತಿ” ಎಂಬ ಪದವು ಮತ್ತು ವ.21 ರಲ್ಲಿ ಭಾಷಾಂತರಿಸಿರುವ “ಭಯ” ಎಂಬ ಪದವು ಒಂದೆ ಮೂಲಪದದಿಂದ ಬಂದಿದೆ.

# 6 1

**6:1** ಪೌಲನು ಇನ್ನು ಕ್ರಿಸ್ತನಲ್ಲಿರುವ ವಿಶ್ವಾಸಿಗಳೊಂದಿಗೆ ಮಾತನಾಡುತ್ತಿದ್ದಾನೆ (“ಕರ್ತನಲ್ಲಿರುವ”) ಆ ತಂದೆತಾಯಿಗಳು ದೇವರ ವಾಕ್ಯಕ್ಕೆ ವಿರುದ್ಧವಾಗಿ ಮಕ್ಕಳಿಗೆ ಸೂಚನೆ ಕೊಡುವುದು ಮತ್ತು ಅಪ್ಪಣೆ ಕೊಡುವುದನ್ನು ಮಾಡಿದರೆ ಮಕ್ಕಳು ವಿಧೇಯರಾಗುವುದಿಲ್ಲ. ಆದರೆ ಬೇರೆ ಎಲ್ಲಾ ಕಾರ್ಯಗಳಲ್ಲಿ ಅವರು ವಿಧೇಯರಾಗಬೇಕು. ತಂದೆತಾಯಿಗೆ ಅವಿಧೇಯರಾಗುವುದು ಪಾಪ ಮತ್ತು ಮೊಂಡ ಸ್ವಭಾವವನ್ನು ಸೂಚಿಸುತ್ತದೆ ಮತ್ತು ತಂದೆತಾಯಿಗಳಿಗೆ ಅವಿಧೇಯರಾಗುವ ಮಕ್ಕಳಿಗೆ ದೇವರಿಗೆ ಅವಿಧೇಯರಾಗಲು ಕಷ್ಟವಾಗುವದಿಲ್ಲ (ರೋಮಾ 1:30). **2,3**

**6:2,3** ವಿಮೋ 20:12; ಧರ್ಮೋ 5:16. ವಿಶ್ವಾಸಿಗಳು ಧರ್ಮಶಾಸ್ತ್ರದ ಅಧೀನದಲ್ಲಿಲ್ಲ (ರೋಮಾ 6:14,15; 7:4; ಗಲಾ 3:25). ಆದರೆ ಧರ್ಮಶಾಸ್ತ್ರದ ನಿಯಮವು ಅವರಲ್ಲಿ ನೆರವೇರಬೇಕು (ರೋಮಾ 8:4). ಮತ್ತು ತಂದೆತಾಯಿಗಳಿಗೆ ವಿಧೇಯರಾಗುವುದು “ಧರ್ಮ” (ವ.1). ಕ್ರೈಸ್ತ ಮಕ್ಕಳು ತಮ್ಮ ತಂದೆತಾಯಿಗಳಿಗೆ ವಿಧೇಯರಾಗದಿದ್ದರೆ ಅವರ ಜೀವಿತದಲ್ಲಿ ಎಲ್ಲಾ ಕಾರ್ಯಗಳು ಚೆನ್ನಾಗಿ ನಡೆಯುತ್ತದೆಂದು ಅಥವಾ ಭೂಮಿಯಲ್ಲಿ ಬಹುದಿನ ಬದುಕುವರೆಂದು ಭಾವಿಸುವುದರಲ್ಲಿ ಅರ್ಥವಿಲ್ಲ. **4**

**6:4** ಮಕ್ಕಳನ್ನು ಅನ್ಯಾಯವಾಗಿ ಅಥವಾ ತುಂಬಾ ತೀವ್ರವಾಗಿ ನಡೆಸಿಕೊಳ್ಳುವುದು ಅಥವಾ ಅನುಕಂಪವಿಲ್ಲದಿರುವದು ಅಥವಾ ಸೂಕ್ಷ್ಮತೆಯಿಲ್ಲದಿರುವುದು ಅವರನ್ನು ಕೆರಳಿಸಿದಂತಾಗುವುದು. ಶಿಸ್ತು ಖಂಡಿತವಾಗಿಯೂ ಅವಶ್ಯವಾಗಿದೆ (ಜ್ಞಾನೋ 13:24; 19:18; 22:15; 23:13,14; ಇಬ್ರಿ 12:7,8). ಆದರೆ ಪ್ರೀತಿಯಿಂದ ಶಿಸ್ತುಮಾಡಬೇಕು ಮತ್ತು ಮಕ್ಕಳಿಗೆ ಇದು ಅರ್ಥವಾಗುವಂತೆ ಮಾಡಬೇಕು. ದೇವರು ಮಕ್ಕಳನ್ನು ಅವರ ತಂದೆತಾಯಿಗಳ ಕೈಗಳಲ್ಲಿ ಕೊಟ್ಟಿದ್ದಾರೆ. ಅವರು ದೇವರಿಗೆ ಸೇರಿದವರಾಗಿದ್ದಾರೆ (ಯೆಹೆಜ್ಕೇಲ 18:4). ತಂದೆತಾಯಿಗಳಿಗೆ ದೇವರು ಜವಾಬ್ದಾರಿಕೆಯನ್ನು ಮತ್ತು ಆತನಿಗಾಗಿ ಅವರನ್ನು ಬೆಳೆಸುವ ಭಾಗ್ಯವನ್ನು ಕೊಟ್ಟಿದ್ದಾನೆ. ತಂದೆತಾಯಿಗಳು ತಮ್ಮ ನಡತೆ ಮತ್ತು ಮಾತುಗಳಿಂದ ಮಕ್ಕಳನ್ನು ದೇವರ ಚಿತ್ತದ ಪ್ರಕಾರ ಬೆಳೆಯಲು ಸಹಾಯ ಮಾಡಬೇಕು. (ಧರ್ಮೋ 6:6,7; ಕೀರ್ತನೆ 34:11; 78:4-8 ಹೋಲಿಸಿರಿ. ಈ ಅತೀ ಅವಶ್ಯಕವಾದ ಜವಾಬ್ದಾರಿಕೆಯನ್ನು ಕಡೆಗಣಿಸಿದರೆ ತಮ್ಮ ಮಕ್ಕಳು ಕೆಟ್ಟತನಕ್ಕೆ ತಿರುಗುವದರಲ್ಲಿ ಆಶ್ಚರ್ಯವಿಲ್ಲ ಮತ್ತು ಅವರಿಗೆ ಹಿಚ್ಚಿನ ದುಃಖವನ್ನು ತರುತ್ತಾರೆ. **5**

**6:5** “*ದಾಸರು*”–ಅಥವ ಸೇವಕರು – ಗ್ರೀಕ್ ಭಾಷೆಯಲ್ಲಿ ಯಾವುದಾದರು, ಆದರೆ

ಪೌಲನು ಅಧಿಕಾರದ ಅಧೀನದಲ್ಲಿರುವವರಿಗೆ ಮತ್ತು ಬೇರೆಯವರ ನಿಯಂತ್ರಣದಲ್ಲಿರುವವರಿಗೆ ಮಾತನಾಡುತ್ತಿದ್ದಾನೆ ಮತ್ತು ಸಂಬಳ ತೆಗೆದುಕೊಳ್ಳುವ ಸೇವಕರಿಗಲ್ಲ. ಪ್ರಾಚೀನ ಲೋಕದಲ್ಲಿ ಗುಲಾಮತನವು ಸಾಧಾರಣ ಕಾರ್ಯವಾಗಿತ್ತು. ರೋಮಾ ಸಾಮ್ರಾಜ್ಯದಲ್ಲಿ (ಎಫೆಸ ಪಟ್ಟಣ ಇಲ್ಲಿತ್ತು) ಜನರನ್ನು ತಂದು ದನಗಳಂತೆ ಮಾರುತ್ತಿದ್ದರು. ಈ ಗುಲಾಮರಲ್ಲಿ ಅನೇಕರು ಯುದ್ಧದ ಸೆರೆಯಾಳುಗಳು ಅಥವಾ ಸೆರೆಯಾಳುಗಳ ಸಂತತಿಯವರಾಗಿದ್ದರು. ಕೆಲವು ಪಟ್ಟಣಗಳಲ್ಲಿ ಸ್ವಾತಂತ್ರ್ಯವಾಗಿರುವ ಜನರಿಗಿಂತಲೂ ಗುಲಾಮರು ಹೆಚ್ಚಾಗಿದ್ದರು. ಈ ಗುಲಾಮರಲ್ಲಿ ಅನೇಕರು ಕ್ರೈಸ್ತರಾದರು. ಈಗ ಅವರು ಏನು ಮಾಡಬೇಕು? ದಂಗೆ ಎದ್ದು ತಮ್ಮ ಯಜಮಾನರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಕೆ? ಹೊಸ ಒಡಂಬಡಿಕೆಯು ಹಾಗೆ ಹೇಳುವದಿಲ್ಲ (1 ಕೊರಿಂಥ 7:20-24. ಕೊಲೊ 3:22; 4:1; 1 ತಿಮೊ 6:1,2; ತೀತ 2:9,10; 1 ಪೇತ್ರ 2:18-25 ಸಹ ನೋಡಿರಿ). ಹೊಸ ಒಡಂಬಡಿಕೆಯು ಗುಲಾಮತನವು ಒಳ್ಳೆಯದೆಂದು ಬೋಧಿಸುವದಿಲ್ಲ. ಆ ಕಾಲದ ಸನ್ನಿವೇಶದಲ್ಲಿ, ಗುಲಾಮರಿಗೂ ಮತ್ತು ಯಜಮಾನರಿಗೂ ಅವರದೇ ಆದ ಜವಾಬ್ದಾರಿಕೆಗಳು ಇತ್ತು ಎಂಬುದನ್ನು ತೋರಿಸುತ್ತದೆ ಮತ್ತು ನಡವಳಿಕೆಯ ಕೆಲವು ನಿರ್ದಿಷ್ಟ ತತ್ವಗಳನ್ನು ಕೊಟ್ಟಿದೆ. ಆದರೆ ಗುಲಾಮತನವು ಕೆಟ್ಟದು, ಯಾಕಂದರೆ ಪ್ರೀತಿಯ ನಿಯಮವನ್ನೇ ಉಲಂಘಿಸುತ್ತಿದೆ ಎಂದು ಕ್ರೈಸ್ತರು ಕಂಡುಕೊಂಡರು (ರೋಮಾ 12:10; 13:8-10; ಮುಂತಾದ). ಮತ್ತು ಆ ದೇಶಗಳಲ್ಲಿ ಎಲ್ಲಿ ಗುಲಾಮತನವನ್ನು ನಿರ್ಮೂಲನೆ ಮಾಡಬಹುದಾಗಿತ್ತೋ ಅಲ್ಲಿ ಅದನ್ನು ನಿರ್ಮೂಲನೆ ಮಾಡಿದರು. ಸ್ವಾತಂತ್ರ್ಯವುಳ್ಳ ಕ್ರಿಸ್ತನ ಸುವಾರ್ತೆಯು ಇರುವ ಕಡೆಯಲ್ಲಿ ಗುಲಾಮತನವು ಇರಲು ಸಾಧ್ಯವಿಲ್ಲ. ಗುಲಾಮತನ ಟಿಪ್ಪಣಿಗಾಗಿ ವಿಮೋ 21:3 ನೋಡಿರಿ. **6-8**

**6:6-8** ವಯಕ್ತಿಕ ಸ್ವಾತಂತ್ರ್ಯಕ್ಕಿಂತ ಮುಖ್ಯವಾದ ವಿಷಯಗಳಿವೆ ಎಂದು ಪೌಲನು ಹೇಳುತ್ತಿದ್ದಾನೆ, ಅದು ದೇವರ ಚಿತ್ತವನ್ನು ಮಾಡುವುದು, ಪಾಪದ ಗುಲಾಮತನದಿಂದ ಬಿಡುಗಡೆಯಾಗುವುದು, ನಾವು ಇರುವ ಸನ್ನಿವೇಶಗಳಲ್ಲಿ ಸರಿಯಾದ ನಡವಳಿಕೆಯನ್ನು ಹೊಂದಿರುವುದು – ಒಬ್ಬ ಮನುಷ್ಯನು ಸ್ವಾತಂತ್ರವಾಗಿದ್ದಾನೋ ಅಥವಾ ಗುಲಾಮನಾಗಿದ್ದಾನೋ ಈ ಕಾರ್ಯಗಳು ಅತೀ ಮುಖ್ಯವಾದವುಗಳಾಗಿವೆ. **6**

**6:6** *"ಕ್ರಿಸ್ತನ ದಾಸನು"*–ರೋಮಾ 6:16-18,22; 1 ಕೊರಿಂಥ 9:19.

*"ಪ್ರತಿಫಲ"*– ಮತ್ತಾಯ 5:12; 10:41,42; 16:27; 1 ಕೊರಿಂಥ 3:8,14; ಇಬ್ರಿ 10:35; ಪ್ರಕ 11:18; 22:12. **9**

**6:9** ನಂಬಿಕೆಯಿಟ್ಟ ಯಜಮಾನರು ಕ್ರಿಸ್ತನ ದೇಹವಾದ ಸಭೆಯ ಸದಸ್ಯರಂತೆಯೇ ನಂಬಿಕೆಯಿಟ್ಟ ದಾಸರು ಸಹ ಸಭೆಯ ಸದಸ್ಯರಾಗಿದ್ದಾರೆ ಮತ್ತು ಒಟ್ಟಾಗಿ ಅವರಿಗೆ ಒಬ್ಬನೇ ಶಿರಸ್ಸು, ಒಬ್ಬನೇ ಕರ್ತನು, ಒಬ್ಬನೇ ಯಜಮಾನನು. ಆದ್ದರಿಂದ ಯಜಮಾನರು ಇದನ್ನು

ಗಮನಿಸಬೇಕು ಮತ್ತು ಅದರಂತೆ ನಡೆದುಕೊಳ್ಳಬೇಕು. ಈ ದಿನಗಳಲ್ಲಿಯೂ ಸಹ ಇದು ನೇಮಿಸಿಕೊಂಡಿರುವ ಸೇವಕರ ವಿಷಯವಾಗಿ ನಿಜವಾಗಿದೆ.

"*ಪಕ್ಷಪಾತವಿಲ್ಲದೆ*"– ರೋಮಾ 2:11; ಕೊಲೊ 3:25; 1 ಪೇತ್ರ 1:17. ನಾವು ಮಾಡಿರುವ ಕಾರ್ಯಗಳು ಮತ್ತು ನಮ್ಮ ಮಾತುಗಳು ಮತ್ತು ಉದ್ದೇಶಗಳ ಪ್ರಕಾರವಾಗಿ ಕ್ರಿಸ್ತನು ನಮಗೆ ನ್ಯಾಯತೀರಿಸುವವನಾಗಿದ್ದಾನೆ. ಸಮಾಜದಲ್ಲಿ ನಮ್ಮ ಸನ್ನಿವೇಶದ ಪ್ರಕಾರವಾಗಿ ಅಲ್ಲ. **10**

**6:10** "*ಕರ್ತನಲ್ಲಿ ಬಲವುಳ್ಳವರಾಗಿರಿ*"– 1:19-21; 3:16; 1 ಕೊರಿಂಥ 16:13; 2 ಕೊರಿಂಥ 12:10; ಫಿಲಿಪ್ಪಿ 4:13; ಕೊಲೊ 1:29; 1 ತಿಮೊ 1:12; 2 ತಿಮೊ 2:1; ಇಬ್ರಿ 11:34; ಯೆಹೋ 1:6,7,9,18; ಕೀರ್ತನೆ 18:32-36; ಯೆಶಾಯ 40:30,31; ರೋಮಾ 8:37. ವಿಶ್ವಾಸಿಗಳು ಆತ್ಮೀಕ ರಣರಂಗದಲ್ಲಿದ್ದಾರೆ. ಅವರು ದೇವರ ಸೈನಿಕರಾಗಿದ್ದಾರೆ (1 ತಿಮೊ 6:11; 2 ತಿಮೊ 2:3,4; 4:7). ಆದ್ದರಿಂದ ಅವರು ಹೋರಾಡಲು ಸಜ್ಜುಗೊಳ್ಳಬೇಕು ಮತ್ತು ಜಯಹೊಂದಬೇಕು. ಅವರ ಸ್ವಂತ ಬಲ ಮತ್ತು ಸ್ವೇಚ್ಛಾಶಕ್ತಿಯು ಸಾಲುವದಿಲ್ಲ. ಅವರಿಗೆ ದೇವರ ಶಕ್ತಿಯ ಅಗತ್ಯವಿದೆ ಮತ್ತು ಅದಕ್ಕಾಗಿ ಅವರು ಆತನನ್ನು ನೋಡುವವರಾಗಿರಬೇಕು ಮತ್ತು ಅದಕ್ಕಾಗಿ ಆತನನ್ನು ನಂಬಬೇಕು (1 ಯೋಹಾನ 5:14,15). ಮತ್ತು ನಾವು ಆತನ ವಾಕ್ಯವನ್ನು ನಿರ್ಲಕ್ಷಿಸಬಾರದು. ಹೋರಾಡಲು ಬೇಕಾದ ಶಕ್ತಿಗಾಗಿ ಇಡೀ ಸತ್ಯವೇದ ನಮಗೆ ಲಭ್ಯವಿದೆ. **11**

**6:11** "*ಧರಿಸಿಕೊಳ್ಳಿರಿ*"– ಇದು ತೋರಿಸುವುದೇನೆಂದರೆ ಸರ್ವಾಯುಧಗಳು ನಮಗೆ ಎಟಕುವಂತಿದೆ. ಅದು ಎಲ್ಲಿದೆ? ಕ್ರಿಸ್ತನಲ್ಲಿ. ಅಥವಾ ಇದು ಕ್ರಿಸ್ತನು ತಾನೇ ಎಂದು ನಾವು ಹೇಳಬಹುದು. ರೋಮಾ 13:14 – ದೇವರ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ ಎಂದು ಪೌಲನು ಹೇಳುವ ಅರ್ಥವನ್ನು ನಾವು ತಿಳಿದುಕೊಳ್ಳಲು ಈ ವಚನವು ನಮಗೆ ಸಹಾಯ ಮಾಡುತ್ತದೆ. ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ ಎಂದು ಹೇಳುವಾಗ ಅದರ ಅರ್ಥ ಕ್ರಿಸ್ತನು ಪ್ರಕಟಿಸಿದ ಸತ್ಯಗಳನ್ನು ಮತ್ತು ಆತನನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವುಗಳನ್ನು ಅನ್ವಯಿಸಿಕೊಳ್ಳುವುದು. ಇದರ ಅರ್ಥ ಅವುಗಳನ್ನು ಅಭ್ಯಾಸಿಸುವುದು, ಅರ್ಥಮಾಡಿಕೊಳ್ಳುವುದು, ನಂಬುವುದು, ದೇವರ ವಾಕ್ಯವನ್ನು ತಮ್ಮ ಜೀವಿತದಲ್ಲಿ ಅನ್ವಯಿಸಿಕೊಳ್ಳುವುದು. ಇದನ್ನು ಮೊದಲು ಮನಸ್ಸಿನಲ್ಲಿ, ಹೃದಯದಲ್ಲಿ, ಆತ್ಮದಲ್ಲಿ ಮತ್ತು ತನ್ನ ಹೊರ ನಡವಳಿಕೆಯಲ್ಲಿ ಧರಿಸಿಕೊಳ್ಳಬೇಕು.

"*ಧರಿಸಿಕೊಳ್ಳಿರಿ*"– ನಮಗೆ ಎಟಕುವಷ್ಟು ದೂರದಲ್ಲೇ ಆಯುಧಗಳಿವೆ ಎಂದು ಇದು ಸೂಚಿಸುತ್ತದೆ. ಎಲ್ಲಿದೆ? ಕ್ರಿಸ್ತನಲ್ಲಿದೆ. ಅಥವಾ ಅದು ಕ್ರಿಸ್ತನೇ ಎಂದು ನಾವು ಹೇಳಬಹುದೇ. ರೋಮಾ 13:14 ಹೋಲಿಸಿರಿ – ದೇವರ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ ಎಂದು ಹೇಳುವಾಗ ಪೌಲನು ಏನು ಹೇಳುತ್ತಿದ್ದಾನೆಂದು ಅರ್ಥ ಮಾಡಿಕೊಳ್ಳಲು ಈ ವಚನವು ನಮಗೆ ಸಹಾಯ ಮಾಡುತ್ತದೆ. ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ ಎಂದರೆ ಕ್ರಿಸ್ತನು ಪ್ರಕಟಿಸಿರುವ

ಸತ್ಯಗಳನ್ನು ಅರ್ಥಮಾಡಿಕೊಳ್ಳುವುದು, ಅವುಗಳನ್ನು ನಂಬುವದು, ನಮ್ಮ ಜೀವಿತಕ್ಕೆ ದೇವರ ವಾಕ್ಯವನ್ನು ಅಳವಡಿಸಿಕೊಳ್ಳುವದು. ಈ ಧರಿಸಿಕೊಳ್ಳುವುದು ಮೊದಲು ಮನಸ್ಸಿನಲ್ಲಿ, ಹೃದಯದಲ್ಲಿ, ಆತ್ಮದಲ್ಲಿ ನಂತರ ಹೊರ ನಡವಳಿಕೆಯಲ್ಲಿ ಆಗಬೇಕು.

“*ಸರ್ವಾಯುಧಗಳು*”– ಶ್ರೇಷ್ಠ ಆಶೀರ್ವಾದ (1:3), ಶ್ರೇಷ್ಠ ರಕ್ಷಣೆ (1:13,14), ಶ್ರೇಷ್ಠ ತಿಳುವಳಿಕೆ, ಶ್ರೇಷ್ಠ ಶಕ್ತಿ, ಶ್ರೇಷ್ಠ ಪ್ರೀತಿ (1:18,19; 3:17-19) ಬಗ್ಗೆ ಪೌಲನು ಮಾತನಾಡಿದ್ದಾನೆ. ಆದರೆ ಕ್ರೈಸ್ತ ಜೀವಿತವು ಸುಲಭವಾದ ಜೀವಿತವೆಂದು ನಾವು ತಿಳುಕೊಳ್ಳಬಾರದು. ಸೈತಾನನು ನಮ್ಮ ಮೇಲೆ ದಾಳಿ ಮಾಡಿದರೆ ನಾವು ಆಶ್ಚರ್ಯಪಡಬಾರದು; ಅವನು ದಾಳಿ ಮಾಡದಿದ್ದರೆ ಆಶ್ಚರ್ಯಪಡಬೇಕು (1 ಪೇತ್ರ 5:8). ಪೌಲನು ಇಲ್ಲಿ ರೋಮನ್ ಸೈನಿಕರು ಆ ದಿನಗಳ ಯುದ್ಧಗಳಲ್ಲಿ ಹೇಗೆ ಹೋರಾಡುತ್ತಿದರು ಎಂಬುದನ್ನು ಸಂಕೇತಾತ್ಮಕವಾಗಿ ಉಪಯೋಗಿಸುತ್ತಾನೆ; ನಾವು ಆ ದಿನದ ಯುದ್ಧಗಳಲ್ಲಿ ಹೋರಾಡಿದ ಸೈನಿಕರಂತಿರಬೇಕು. ಅಪೂರ್ಣವಾದ ಆಯುಧಗಳು ಅಪೂರ್ಣವಾದ ಯಶಸ್ಸನ್ನು ಕೊಡುತ್ತದೆಂಬ ಅರ್ಥವಲ್ಲ ಆದರೆ ಯಾವ ಯಶಸ್ಸು ಸಿಕ್ಕುವದಿಲ್ಲವೆಂದರ್ಥ. ಅದು ಅವರನ್ನು ದುರ್ಬಲರನ್ನಾಗಿ ಮಾಡುತ್ತದೆ ಮತ್ತು ಮರಣಾಂತಿಕ ಅಪಾಯಕ್ಕೆ ಗುರಿ ಮಾಡುತ್ತದೆ. ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ದೇವರು ಆತ್ಮೀಕ ಆಯುಧಗಳನ್ನು ಸಿದ್ಧಮಾಡಿದ್ದಾನೆ. ಈ ಆಯುಧಗಳು ಏನೆಂಬುದಾಗಿ ನಾವು ಅರ್ಥಮಾಡಿಕೊಳ್ಳಬೇಕು ಮತ್ತು ಅವೆಲ್ಲವುಗಳನ್ನು ಧರಿಸಿಕೊಳ್ಳಬೇಕು. ನಾವು ರಕ್ಷಣೆಯ ಶಿರಸ್ತ್ರಾಣವನ್ನು ಆರಿಸಿಕೊಂಡು ನೀತಿಯೆಂಬ ಗುರಾಣಿಯನ್ನು ನಿರಾಕರಿಸಬಾರದು, ಮುಂತಾದುವುಗಳು. ನಾವು ಸರ್ವಾಯುಧಗಳನ್ನು ಧರಿಸಿಕೊಳ್ಳದಿದ್ದರೆ, ಸೈತಾನನ ತಂತ್ರೋಪಾಯಗಳನ್ನು ಎದುರಿಸುವ ಬದಲು ನಾವು ಬಿದ್ದು ಹೋಗಬಹುದು. ಮತ್ತು ನಾವು ಬಿದ್ದು ಹೋದರೆ ಸೈತಾನನು ತನ್ನ ಕಾಲನ್ನು ನಮ್ಮ ಮೇಲಿಟ್ಟು ಅನೇಕ ಗಾಯಗಳನ್ನು ಮಾಡಬಹುದು. ಸೈತಾನನು ಇದರ ಟಿಪ್ಪಣಿಗಾಗಿ ಮತ್ತಾಯ 4:1-10; ಯೋಹಾನ 8:44 ನೋಡಿರಿ.

“*ತಂತ್ರೋಪಾಯ*”– 2 ಕೊರಿಂಥ 2:11. ವಿಶ್ವಾಸಿಗಳನ್ನು ಸೋಲಿಸಬೇಕೆಂದು ತೀರ್ಮಾನಿಸಿರುವ ಬಹಳ ಚತುರನಾದ ವೈರಿ ಇದ್ದಾನೆ ಮತ್ತು ಅವರನ್ನು ಬೀಳಿಸಲು ಯಾವಾಗಲೂ ತಂತ್ರೋಪಾಯಗಳನ್ನು ಮಾಡುತ್ತಿರುತ್ತಾನೆ. **12**

**6:12** ಸೈತಾನನು ಮಾತ್ರವೇ ವಿಶ್ವಾಸಿಗಳ ವಿರುದ್ಧವಾಗಿ ಯುದ್ಧಮಾಡುತ್ತಿಲ್ಲ. ಅಗೋಚರವಾದ ಅನೇಕ ದುರಾತ್ಮಗಳ ಸೇನೆಗಳು (“ಪರಲೋಕದಲ್ಲಿನ ಸ್ಥಳಗಳು” – ಟಿಪ್ಪಣಿಗಾಗಿ 1:3) ಅವನೊಂದಿಗಿದೆ. ಸೈತಾನನು ಅವರ “ಆಡಳಿತಗಾರ” ಮತ್ತು ಭೂಮಂಡಲದ “ದೇವರು” (ಯೋಹಾನ 12:31; 2 ಕೊರಿಂಥ 4:4), ಆದರೆ ಅಗೋಚರವಾದ ಅನೇಕ ಆಡಳಿತಗಾರರು ಅವನೊಂದಿಗೆ ಕೆಲಸ ಮಾಡುತ್ತಿದ್ದಾರೆ (ದಾನಿ 10:13,20; 1 ತಿಮೊ 4:1; ಪ್ರಕ 16:14). ಇವು ದುರಾತ್ಮಗಳು, ದೆವ್ವಗಳು, ದೇವರ ವಿರುದ್ಧವಾಗಿ ದಂಗೆ ಎದ್ದ

ದೂತರು. ಇವು ಅನೇಕ ಜನರಿಂದ ಆರಾಧಿಸಲ್ಪಡುತ್ತಿರುವ "ದೇವರುಗಳು" (1 ಕೊರಿಂಥ 8:5; 10:20; ಧರ್ಮೋ 32:17; ಕೀರ್ತನೆ 106:37. ಹೌದು ದೇವರುಗಳು ತಾವು ಒಳ್ಳೆಯವರೆಂದು, ತಾನೇ ದೇವರು ಎಂದು ಅಥವಾ ಸರ್ವೋಚ್ಚ ಒಡೆಯರು ಮತ್ತು ದೆವ್ವಗಳನ್ನು ನಾಶಪಡಿಸುವವರೆಂದು ಜನರನ್ನು ಮನವೊಲಿಸುತ್ತಾರೆ). **13**

**6:13** *"ಆದದರಿಂದ"*– ದೇವರ ಸರ್ವಾಯುಧಗಳಿಲ್ಲದೆ ನಾವು ಆ ರೀತಿಯ ದುಷ್ಟ ಶಕ್ತಿಗಳ ವಿರುದ್ಧ, ಅವುಗಳ ತಂತ್ರೋಪಾಯದ ವಿರುದ್ಧ ಮತ್ತು ನಮ್ಮನ್ನು ನಾಶಪಡಿಸಬೇಕೆಂಬ ಉದ್ದೇಶದ ವಿರುದ್ಧ ನಿಲ್ಲಲು ಹೇಗೆ ಸಾಧ್ಯ?

*"ಕೆಟ್ಟದಿನ"*– ಈ ಯುಗವೇ ಕೆಟ್ಟದಾಗಿದೆ (ಗಲಾ 1:4), ಮತ್ತು ಪೌಲನು ಇವುಗಳನ್ನು ಬರೆದ ದಿನಗಳು ಸಹ ಕೆಟ್ಟದಾಗಿದ್ದವು (ಎಫೆ 5:16). ಆದರೆ ಪ್ರತಿಯೊಬ್ಬ ವಿಶ್ವಾಸಿಗೆ ಶೋಧನೆ ಮತ್ತು ಕಷ್ಟಗಳ ವಿಶೇಷ ಸಮಯವು ಬರುತ್ತದೆ ಅಗೋಚರವಾಗಿರುವ ದುಷ್ಟ ಶಕ್ತಿಗಳು ವಿಶೇಷ ಪ್ರಯತ್ನಗಳನ್ನು ಮಾಡುವದರ ಮೂಲಕ ಅವನನ್ನು ಅಥವಾ ಅವಳನ್ನು ಸೋಲಿಸುತ್ತದೆ. ಆ ಕೆಟ್ಟ ದಿನಗಳು ಯಾವಾಗ ಬರುತ್ತದೆಂದು ಹೇಳಲಾಗದು ಆದದರಿಂದ ದೇವರ ಸರ್ವಾಯುಧವನ್ನು ಪ್ರತಿ ದಿನವೂ ಧರಿಸಿಕೊಂಡಿರಬೇಕು. ಯಾವುದೇ ಎಚ್ಚರಿಕೆಯನ್ನು ಕೊಡದೆ, ಇದ್ದಕ್ಕಿಂದಂತೆ ಸೈತಾನನು ನಮ್ಮ ಮೇಲೆ ಧಾಳಿಮಾಡಬಹುದು. ಯೋಬ 1:6-19; 2 ಸಮು 11:2; ಆದಿ 3:1 ಹೋಲಿಸಿರಿ. ನಾವು ಯಾವಾಗಲೂ ಎಚ್ಚರಿಕೆಯಿಂದಿರಬೇಕು (1 ಪೇತ್ರ 5:8). **14**

**6:14** *"ನಿಲ್ಲಿರಿ"*– ನಾಲ್ಕು ವಚನಗಳಲ್ಲಿ ನಾಲ್ಕು ಸಾರಿ ಈ ಪದವನ್ನು ಪೌಲನು ಉಪಯೋಗಿಸಿದ್ದಾನೆ. ನಾವು ಮಲಗಬಾರದು ಮತ್ತು ನಮ್ಮ ಮೇಲೆ ಸೈತಾನನು ನಡಕೊಂಡು ಹೋಗಲು ಬಿಡಬಾರದು. ನಾವು ನಮ್ಮ ಬೆನ್ನು ತೋರಿಸಿ ಹಿಂದಕ್ಕೆ ಓಡಬಾರದು. ಬೇರೆಯವರು ಹೋರಾಡುವಾಗ ನಾವು ಸೋಮಾರಿಗಳಾಗಿ ಕುಳಿತುಕೊಳ್ಳಬಾರದು. ನಾವು ಹೋರಾಟ ಮಾಡಲು ನಿರಾಕರಿಸಿ ಸಂಪೂರ್ಣ ಯುದ್ಧವನ್ನು ಕ್ರಿಸ್ತನಿಗೆ ಒಪ್ಪಿಸಬಾರದು. ಕ್ರಿಸ್ತನು ನಮ್ಮೊಳಗೆ ಮತ್ತು ನಮ್ಮ ಜೊತೆಯಲ್ಲಿರುವನು, ಆದರೆ ನಾವು ಸಹ ಹೋರಾಡಬೇಕು. ಈ ಆತ್ಮೀಕ ಯುದ್ಧದಲ್ಲಿ ನಾವು ನಿಷ್ಕ್ರೀಯ ಪ್ರೇಕ್ಷಕರಂತೆ ಇರಬಾರದು ಮತ್ತು ಜಯದಲ್ಲಿ ಪಾಲುಗಾರರಾಗಲು ನಿರೀಕ್ಷೆಯಿಂದಿರಬೇಕು. ನಾವು ನಿಂತುಕೊಂಡವರಾಗಿ ಎಲ್ಲಾ ದುಷ್ಟ ಶಕ್ತಿಗಳ ಮೇಲೆ, ಕದಲಿಸಲಾರದ ನಂಬಿಕೆ ಮತ್ತು ಕ್ರಿಸ್ತನಿಗೆ ಪ್ರಮಾಣಿಕರಾಗಿ, ವೈಫಲ್ಯವಾಗದ ಧೈರ್ಯ ಮತ್ತು ಹೋರಾಡಲು ಮತ್ತು ಜಯಗಳಿಸಲು ತೀರ್ಮಾನದಿಂದಿರಬೇಕು. ನಾವು ಹಾಗೆ ಮಾಡದಿದ್ದರೆ, ನಮ್ಮ ಯುದ್ಧವು ಪ್ರಾರಂಭವಾಗುವದಕ್ಕಿಂತ ಮುಂಚೆಯೇ ನಾವು ಸೋತಂತಾಗುತ್ತದೆ. ಯೆಹೋ 1:17 ನೋಡಿರಿ. ಪೌಲನು ಇಲ್ಲಿ ಆರು ಆಯುಧಗಳನ್ನು ಹೆಸರಿಸುತ್ತಾನೆ. ಹಿಂಭಾಗವನ್ನು ರಕ್ಷಿಸಲು ಯಾವ ಆಯುಧವಿಲ್ಲ ಎಂಬುದನ್ನು ಗಮನಿಸಿ – ವೈರಿಗಳಿಗೆ ತಮ್ಮ ಬೆನ್ನು ತೋರಿಸುವ ಹೇಡಿಗಳಿಗೆ

ಯಾವ ರಕ್ಷಣೆಯು ಇಲ್ಲ.

*"ಸತ್ಯವೆಂಬ ನಡುಕಟ್ಟು"*– ಸತ್ಯವೆಂಬುದು ವಿಶ್ವಾಸಿಗಳ ಜೀವನದ ಎಲ್ಲಾ ವಿಷಯಗಳಿಗೂ ಅಸ್ತಿವಾರ ಮತ್ತು ಯುದ್ಧವಾಗಿದೆ. ಪೌಲನು ಇಲ್ಲಿ ವಿಶ್ವಾಸಿಗಳಿಗೆ ಸತ್ಯ ಮತ್ತು ಪ್ರಮಾಣಿಕತೆಯ ಬಗ್ಗೆ ಕಷ್ಟದಿಂದ ಮಾತಾಡುತ್ತಿದ್ದಾನೆ. ಹೌದು, ಎಲ್ಲ ವಿಶ್ವಾಸಿಗಳು ಸತ್ಯ ಮತ್ತು ಪ್ರಾಮಾಣಿಕರಾಗಿರಬೇಕು (ಎಫೆ 4:15,25, ಮುಂತಾದ). ಆದರೆ ನಾವು ನಮ್ಮ ಸ್ವಂತ ಪ್ರಾಮಾಣಿಕತೆ ಮತ್ತು ಸತ್ಯದಿಂದ ಸೈತಾನನ ವಿರುದ್ಧ ಹೋರಾಡುವದಕ್ಕೆ ನಮಗೆ ಸಾಧ್ಯವಿದೆಯೋ? ಅವನೊಡನೆ ಹೋರಾಡಲು ನಮಗೆ ಸತ್ಯವೇದದಲ್ಲಿ ಪ್ರಕಟಿಸಿರುವ ಸತ್ಯಗಳು ಬೇಕಾಗಿದೆ. ಯೋಹಾನ 8:31,32; 17:17,18 ಹೋಲಿಸಿರಿ. ಮತ್ತು ನಾವು ಸತ್ಯವಾದ ಕ್ರಿಸ್ತನನ್ನು "ಧರಿಸಿ" ಕೊಳ್ಳಬೇಕು (ಯೋಹಾನ 14:6). ಸತ್ಯವು ನಮ್ಮನ್ನುಸೈತಾನನ ಶಕ್ತಿಯಿಂದ ಬಿಡುಗಡೆಮಾಡುತ್ತದೆ ಮತ್ತು ನಾವು ಜೀವಿಸಲು ಮತ್ತು ಹೋರಾಡಲು ಸಹಾಯಮಾಡುತ್ತದೆ. ಇಲ್ಲಿ ಸತ್ಯವನ್ನು ರಕ್ಷಣಾತ್ಮಕ ಉದ್ದೇಶದಿಂದ ಉಪಯೋಗಿಸಲಾಗಿದೆ. ವ.17 ರಲ್ಲಿ ಅವನ್ನು ನಾವು ಆಕ್ರಮಣಕಾರಿ ಉದ್ದೇಶವಾಗಿ ಉಪಯೋಗಿಸಲಾಗಿದೆ. ನಾವು ನಂಬಿ ಅದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಸತ್ಯಕ್ಕೆ ತಕ್ಕ ಹಾಗೆ ನಡೆದುಕೊಳ್ಳಬೇಕು. ಇಲ್ಲದಿದ್ದರೆ ಸೈತಾನನ ವಿರುದ್ಧ ಈ ಯುದ್ಧದಲ್ಲಿ ರಕ್ಷಣೆಮಾಡಿಕೊಳ್ಳುವದಕ್ಕಾಗಲೀ, ಆಕ್ರಮಣಮಾಡುವದಕ್ಕಾಗಲೀ ಆಗುವುದಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಕ್ರಿಸ್ತನ ಸವಾರ್ತೆಯನ್ನು ನಂಬಬೇಕು (4:21; 2 ಥೆಸ 2:13,14; ತೀತ 1:1; 1 ಪೇತ್ರ 5:8,9; ಯೋಹಾನ 14:6). ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಳ್ಳುವದೆಂದರೆ ನಮ್ಮ ಮನಸ್ಸನ್ನು ಸತ್ಯವೇದದ ಮತ್ತು ಕ್ರಿಸ್ತನ ಸತ್ಯಗಳಿಂದ ತುಂಬಿಸಿಕೊಳ್ಳುವುದು ಮತ್ತು ಸೈತಾನನು ನಮ್ಮನ್ನು ಆಕ್ರಮಣಮಾಡಿದಾಗ ಅವುಗಳನ್ನು ಉಪಯೋಗಿಸುವುದು.

*"ನೀತಿಯೆಂಬ ವಜ್ರಕವಚ"*– 1 ಥೆಸ 5:8 ಹೋಲಿಸಿರಿ. ಇಲ್ಲಿ ಪೌಲನು ಪ್ರಾಥಮಿಕವಾಗಿ ವಿಶ್ವಾಸಿಗಳು ನೀತಿಯ ಜೀವಿತವನ್ನು ಜೀವಿಸಲು ಪ್ರಯತ್ನಿಸಬೇಕೆಂದು ಮಾತನಾಡುತ್ತಿಲ್ಲ. ಹೌದು ನಾವೆಲ್ಲರೂ ನೀತಿಯುಳ್ಳ ಜೀವಿತವನ್ನು ಜೀವಿಸಬೇಕು (ಎಫೆ 4:1,22-24). ಆದರೆ ಇದೊಂದರಿಂದ ಸೈತಾನನ್ನು ಎದುರಿಸಲು ಸಾಧ್ಯವೇ? ಈ ಆಯುಧವು ಕ್ರಿಸ್ತನನ್ನು ಮತ್ತು ವಿಶ್ವಾಸಿಗಳಿಗೆ ಆತನು ಏನಾಗಿದ್ದಾನೆಂದು ಸೂಚಿಸುತ್ತದೆ. ಆತನು ನಮ್ಮ ನೀತಿ (1 ಕೊರಿಂಥ 1:30; 2 ಕೊರಿಂಥ 5:21). ನಾವು ಕ್ರಿಸ್ತನ ಮತ್ತು ಆತನ ನೀತಿಯಲ್ಲಿ ಸೈತಾನ ವಿರುದ್ಧವಾಗಿ ನಿಲ್ಲುತ್ತೇವೆ ಅಥವಾ ನಾವು ನಿಲ್ಲುವುದೇ ಇಲ್ಲ. ದೇವರು ವಿಶ್ವಾಸಿಗಳ ನೀತಿಯನ್ನು ಕ್ರಿಸ್ತನಲ್ಲಿ ಎಣಿಸುವವನಾಗಿದ್ದಾನೆ ಮತ್ತು ಇದರಿಂದಾಗಿ ವಿಶ್ವಾಸಿಗಳನ್ನು ಅವರ ನಡವಳಿಕೆಯಲ್ಲಿ ಆತನಿಗೆ ನೀತಿವಂತರನ್ನಾಗಿ ಮಾಡುತ್ತಾನೆ. ಸೈತಾನನ ವಿುರುದ್ಧವಾಗಿ ನಿಲ್ಲಲು ನಮಗೆ ಆ ಎರಡು ರೀತಿಯ ನೀತಿಯು ಬೇಕಾಗುತ್ತದೆ – ನಂಬಿಕೆಯ ಮೂಲಕ ದೇವರು

ಕೊಡುವ ನೀತಿ (ರೋಮಾ 3:22-26; 5:1; 8:1), ಮತ್ತು ದೇವರು ತನ್ನ ಆತ್ಮನ ಮೂಲಕವಾಗಿ ಮಾಡುವ ನೀತಿ (ರೋಮಾ 8:4). ವಜ್ರಕವಚವನ್ನು ಧರಿಸಿಕೊಂಡು ಮತ್ತು ಅದನ್ನು ಇಟ್ಟುಕೊಳ್ಳುವದು ಅಂದರೆ ನಾವು ನಂಬಿಕೆಯ ಮೂಲಕ ನೀತಿವಂತರೆಂದು ಮತ್ತು ದೇವರು ನಮ್ಮನ್ನು ನೀತಿವಂತರನ್ನಾಗಿ ಜೀವಿಸಲು ಕರೆದಿದ್ದಾನೆಂದು ಮತ್ತು ಹಾಗೆ ಜೀವಿಸಲು ನಮಗೆ ಶಕ್ತಿಯನ್ನು ಕೊಡವನೆಂದು ನಿರಂತರವಾಗಿ ಮನಸ್ಸಿನಲ್ಲಿ ಇಟ್ಟುಕೊಳ್ಳುವುದು. ಅದರ ಅರ್ಥ "ಹೊಸ ಮನುಷ್ಯನನ್ನು" ಧರಿಸಿಕೊಳ್ಳುವದು (ಎಫೆ 4:24). ಅಂದರೆ ದೇವರೊಂದಿಗೆ ಸರಿಯಾಗಿರುವದು ಮತ್ತು ದೇವರು ಪ್ರಕಟಿಸಿರುವ ಸತ್ಯದ ಮೇಲೆ ನಿಂತಿದ್ದೇವೆಂದು ತಿಳಿದುಕೊಳ್ಳುವದು. ಅದು ಒಪ್ಪಿಕೊಳ್ಳುವದು ಮತ್ತು ಎಲ್ಲ ಪಾಪವನ್ನು ದೂರ ಹಾಕುವದು ಮತ್ತು ಎಲ್ಲ ಅನೀತಿಯಿಂದ ನಮ್ಮನ್ನು ತೊಳೆದಿದ್ದಾನೆ ಎಂದು ತಿಳಿಯುವದು (1 ಯೋಹಾನ 1:9) ಈ ತಿಳುವಳಿಕೆ ಮತ್ತು ಭರವಸೆ ನಮಗಿರಬೇಕು ಇಲ್ಲದಿದ್ದರೆ ಸೈತಾನನು ನಮ್ಮನ್ನು ಗಾಯ ಪಡಿಸುವನು. ನಮ್ಮ ಸ್ವಂತ ನೀತಿಯಲ್ಲಿ ನಾವು ನಿಲ್ಲುವುದಾದರೆ ಹೇಳುವುದೇ ಬೇಡ ಅವನು ನಮ್ಮ ಕಾಲನ್ನೆಳೆದು ನಮ್ಮನ್ನು ಹೊಡೆದುರಿಳಿಸಲು ಕಷ್ಟವೇ? **15**

**6:15** *"ಸಮಾಧಾನದ ವಿಷಯವಾದ ಸುವಾರ್ತೆ"*– ನಾವು ಸುವಾರ್ತೆಯನ್ನು ಸಿದ್ಧಮನಸ್ಸಿನಿಂದ ಬೇರೆಯವರಿಗೆ ಹೇಳಬೇಕೆಂದು ಪೌಲನು ಹೇಳುತ್ತಿಲ್ಲ. ಹೌದು ನಾವು ಅದನ್ನು ಮಾಡಲು ಸಿದ್ಧರಾಗಿರಬೇಕು. ಮತ್ತು ಸೈತಾನನ ಮೇಲೆ ವಿಶ್ವಾಸಿಗಳು ಜಯಗಳಿಸಲು ಇರುವ ಒಂದು ಕಾರ್ಯ ಯಾವುದೆಂದರೆ "ಅವರ ಮಾತಿನ ಸಾಕ್ಷಿ" ( ಪ್ರಕ 12:11). ಆದರೆ ಇಲ್ಲಿ ಅವನು ಮಾತನಾಡುತ್ತಿರುವ ವಿಷಯ ಸೈತಾನನ ವಿರುದ್ಧವಾಗಿ ನಾವು ನಿಲ್ಲುವದು ಮತ್ತು ಅದಕ್ಕಾಗಿ ಕ್ರಿಸ್ತನ ಸುವಾರ್ತೆಯು ಮಾತ್ರ ನಮ್ಮನು ಸಿದ್ಧಪಡಿಸಲು ಸಾಧ್ಯವೆಂದು ಅವನಿಗೆ ತಿಳಿದಿತ್ತು. ನಮ್ಮ ಆತ್ಮೀಕ "ಕಾಲುಗಳು" ಸುವಾರ್ತೆಯನ್ನು ಧರಿಸಿರಬೇಕು. ಇನ್ನೊಂದು ಮಾತಿನಲ್ಲಿ ಹೇಳುವದಾದರೆ, ನಾವು ಸುವಾರ್ತೆಯನ್ನು ಅರ್ಥಮಾಡಿಕೊಳ್ಳಬೇಕು, ಅದನ್ನು ನಂಬಬೇಕು, ಅದನ್ನು ಪ್ರೀತಿಸಬೇಕು, ಅದರ ಮೂಲಕವೇ ದೇವರೊಂದಿಗೆ ನಮಗೆ ಸಮಾಧಾನವಾಗಿದೆ ಎಂದು ತಿಳಿಯುವದು, ಮತ್ತು ಅದರ ತತ್ವಗಳನ್ನು ನಮ್ಮ ಜೀವಿತದಲ್ಲಿ ಅಳವಡಿಸಿಕೊಂಡು ಅವರಂತೆ "ನಡೆಯುವದು". ಇದು ಸಹ ಕ್ರಿಸ್ತನೊಂದಿಗೆ "ಧರಿಸಿಕೊಳ್ಳುವದು". ಅತನೇ ತಾನೇ ಸುವಾರ್ತೆಯಾಗಿದ್ದಾನೆ ಮತ್ತು ಆತನು ನಮ್ಮ ಸಮಾಧಾನವಾಗಿದ್ದಾನೆ (ಎಫೆ 2:14; 3:8). **16**

**6:16** *"ನಂಬಿಕೆಯೆಂಬ ಗುರಾಣಿ"*– ಸೈತಾನನು ನಮ್ಮನ್ನು ಉದ್ವೇಗದ ಶೋಧನೆಗಳಿಗೆ ಒಳಪಡಸಿ ಪಾಪಮಾಡುವಂತೆ ಮಾಡುತ್ತಾನೆ, ಹೋರಾಟ ಮಾಡುವುದನ್ನು ಬಿಟ್ಟು ಆರಾಮವಾಗಿ ಮತ್ತು ಸಂತೋಷವಾಗಿ ಜೀವಿಸಲು, ದೇವರನ್ನು ನಿರಾಕರಿಸಿ ಸ್ವಂತಕ್ಕಾಗಿ ಜೀವಿಸುವಂತೆ ಮಾಡುತ್ತಾನೆ. ಈ ರೀತಿಯ ಬಾಣಗಳು ನಮ್ಮ ಮನಸ್ಸಿನಲ್ಲಿ ಮತ್ತು ಹೃದಯದಲ್ಲಿ ಅಂಟಿಕೊಳ್ಳದಂತೆ ಮತ್ತು ಹೋರಾಟಮಾಡಬೇಕೆಂದಿರುವ ಇಚ್ಚೆಯನ್ನು

ನಾಶಪಡಿಸದಂತೆ ಏನು ಮಾಡುವುದು? ದೇವರು ನಮಗೆ ದಯಪಾಲಿಸಿರುವ ನಂಬಿಕೆ ಎಂಬ ವರವನ್ನು ಉಪಯೋಗಿಸಿರಿ. ಇಬ್ರಿಯ ಅಧ್ಯಾಯ 11 ನಂಬಿಕೆ ಅಂದರೆ ಏನು ಮತ್ತು ಅದು ಏನು ಮಾಡುತ್ತದೆಂಬುದನ್ನು ನೋಡಿರಿ. 1 ಪೇತ್ರ 5:9 ಸಹ ನೋಡಿರಿ. ನಾವು ಸೈತಾನನ್ನು ಸೋಲಿಸಬೇಕಾದರೆ ನಾವು ಕ್ರಿಸ್ತನ ಮಾತುಗಳನ್ನು ನಂಬಬೇಕು. ನಮ್ಮ ಭರವಸೆಯನ್ನು ಆತನಲ್ಲಿಡಬೇಕು, ನಮ್ಮ ಮೇಲಲ್ಲ. ಆತನು ನಮ್ಮೊಂದಿಗಿದ್ದಾನೆಂದು, ಹೋರಾಡಲು ಬೇಕಾದ ಶಕ್ತಿಯನ್ನು ನಮಗೆ ಕೊಡುವನೆಂದು, ಸೈತಾನನು ನಮ್ಮ ಕಡೆಗೆ ಎಸೆಯುವ ಎಲ್ಲ ಕಾರ್ಯಗಳಿಂದ ನಮಗೆ ಜಯ ಕೊಡುವನೆಂದು ನಾವು ನಂಬಬೇಕು. ಇದು ಪೌಲನ ಆಶ್ವಾಸನೆ ಮತ್ತು ಅದು ನಮ್ಮ ಆಶ್ವಾಸನೆ ಕೂಡ (ರೋಮಾ 8:31,37; 2 ಕೊರಿಂಥ 2:14; 2 ತಿಮೊ 4:18). ನಂಬಿಕೆಯಿಂದ ನಾವು ಕ್ರಿಸ್ತನನ್ನು "ಧರಿಸಿಕೊಳ್ಳುತ್ತೇವೆ" –ಮತ್ತು ವೈರಿಯನ್ನು ಯಶಸ್ವಿಯಾಗಿ ವಿರೋಧಿಸುತ್ತೇವೆ. **17**

**6:17** *"ರಕ್ಷಣೆಯೆಂಬ ಶಿರಸ್ತ್ರಾಣ"*– 1 ಥೆಸ 5:8; ಯೆಶಾಯ 59:17. ತಲೆಗೆ ಶಿರಸ್ತ್ರಾಣ. ದೇವರ ಆತ್ಮೀಕ ಸೈನಿಕರಾಗಿ ನಾವು ನಮ್ಮ ಮನಸ್ಸನ್ನು ರಕ್ಷಣೆಯ ಯೋಚನೆಗಳಿಂದ ತುಂಬಿಸಬೇಕು. ರಕ್ಷಣೆ ಅಂದರೆ ಏನೆಂಬುದಾಗಿ ಅರ್ಥಮಾಡಿಕೊಳ್ಳಬೇಕು. ನಾವು ಪಾಪದಿಂದ ರಕ್ಷಣೆ ಹೊಂದಿದ್ದೇವೆಂದು ತಿಳಿದುಕೊಳ್ಳಬೇಕು (ಎಫೆ 1:7; 2:5) ಮತ್ತು ಭವಿಷ್ಯದಲ್ಲಿ ರಕ್ಷಣೆಯನ್ನು ಪೂರ್ಣಗೊಳಿಸುತ್ತೇವೆಂಬ ಜೀವಿಸುವ ನಿರೀಕ್ಷೆಯನ್ನು ಹೊಂದಿರಬೇಕು (ರೋಮಾ 8:23-25). ಕರ್ತನಾದ ಯೇಸುವೇ ತನ್ನ ಜನರ ರಕ್ಷಣೆಯಾಗಿದ್ದಾನೆ ಮತ್ತು ನಾವು ಆತನನ್ನು "ಧರಿಸಿಕೊಳ್ಳಬೇಕು" –(ಕೀರ್ತನೆ 18:2,3,17; 27:1; ಯೆರೆ 3:23; ಲೂಕ 2:30; 1 ಕೊರಿಂಥ 1:30; 2 ತಿಮೊ 2:10).

*"ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿ"*– ಒಂದು ಖಡ್ಗವನ್ನು ಎರಡೂ ಕಾರ್ಯಗಳಿಗಾಗಿ ಉಪಯೋಗಿಸಬಹುದು ರಕ್ಷಣೆಗಾಗಿ ಮತ್ತು ಆಕ್ರಮಣ ಮಾಡಲು. ಕರ್ತನಾದ ಯೇಸು, ಪವಿತ್ರಾತ್ಮನು ಕೊಡುವ ವಾಕ್ಯವೆಂಬ ಕತ್ತಿಯನ್ನು ಸೈತಾನನ ವಿರುದ್ಧವಾಗಿ ಹೇಗೆ ಉಪಯೋಗಿಸಿದನೆಂದು ಮತ್ತಾಯ 4:1-11 ನೋಡಿರಿ. ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಈ ದಿನಗಳಲ್ಲಿ ಹಾಗೆಯೇ ಮಾಡಬಹುದು. ಆದರೆ ಅವರಿಗೆ ದೇವರ ವಾಕ್ಯವು ಗೊತ್ತಿರಬೇಕು ಮತ್ತು ಅದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅದನ್ನು ಶೋಧನೆಗಳು ಮತ್ತು ಕಷ್ಟಗಳು ಅವರಿಗೆ ಬಂದಾಗ ಅದನ್ನು ಅನ್ವಯಿಸಿಕೊಳ್ಳಬೇಕು. ಆದ್ದರಿಂದ ನಾವು ಸತ್ಯವೇದವನ್ನು ನಂಬಬೇಕು ಮತ್ತು ಅದನ್ನು ಪ್ರೀತಿಸಬೇಕು ಮತ್ತು ಅದನ್ನು ಅಭ್ಯಾಸಿಸಬೇಕು ಮತ್ತು ಅದನ್ನು ನಮ್ಮ ಮನಸ್ಸಿನಲ್ಲಿ ಮತ್ತು ಹೃದಯದಲ್ಲಿ ತುಂಬಿಸಿಕೊಳ್ಳಬೇಕು ಮತ್ತು ಉಪಯೋಗಿಸಬೇಕು – ಎಫೆ 4:13,14; ಕೊಲೊ 3:16; 2 ತಿಮೊ 2:15; 3:16,17. ದೇವರ ವಾಕ್ಯವನ್ನು ಪವಿತ್ರಾತ್ಮನು ಕೊಡುವ ಕತ್ತಿ ಎಂದು ಯಾಕೆ ಕರೆಯುತ್ತಾರೆ? ಯಾಕಂದರೆ ಸತ್ಯವೇದವು ದೇವರಾತ್ಮನಿಂದ ಪ್ರೇರಿತವಾದದ್ದಾಗಿದೆ ಮತ್ತು ಆತನೊಬ್ಬನೇ ಅದನ್ನು ಅರ್ಥ

ಮಾಡಿಕೊಳ್ಳಲು ಮತ್ತು ಅದನ್ನು ಸರಿಯಾಗಿ ಉಪಯೋಗಿಸಲು ಸಹಾಯ ಮಾಡುವನು (ಎಫೆ 1:17,18; ಯೋಹಾನ 16:13; 1 ಕೊರಿಂಥ 2:10-14). ಸೈತಾನನನ್ನು ಸೋಲಿಸಲು ನಾವು ಏನು ಮಾಡಬೇಕು? ಅವನು ನಮ್ಮ ಮನಸ್ಸಿಗೆ ತರುವ ಸಲಹೆಗಳು, ಅನುಮಾನಗಳು ಮತ್ತು ಶೋಧನೆಗಳ ವಿರುದ್ಧವಾಗಿ ದೇವರ ವಾಕ್ಯವನ್ನು ಉಪಯೋಗಿಸಬೇಕು. **18**

**6:18** ಪೌಲನು ಇನ್ನೂ ದೇವರ ಸೈನಿಕರ ವಿಷಯವಾಗಿ ಮಾತನಾಡುತ್ತಿದ್ದಾನೆ. ಆತ್ಮೀಕ ವೈರಿಗಳ ವಿರುದ್ಧವಾಗಿ ಜಯಗಳಿಸಲು ಮಾರ್ಗವನ್ನು ತೋರಿಸುತ್ತಿದ್ದಾನೆ. ಪ್ರಾರ್ಥನೆ ಮಾಡದಿದ್ದರೆ ಆಗಲೇ ಸೋತು ಹೋದಂತೆ ಎಂದು ಅವನಿಗೆ ತಿಳಿದಿತ್ತು, ಆದರೆ ವಿಶ್ವಾಸಿಗಳು ಪ್ರಾರ್ಥಿಸುವಾಗ ಸೈತಾನನು ನಡಗುತ್ತಾನೆ. ಯಾಕಂದರೆ ಪ್ರಾರ್ಥನೆ ಮಾಡುವಾಗ ಅವರು ತಮ್ಮ ಕಷ್ಟದೊಳಗೆ ದೇವರನ್ನು ಕರೆಯುತ್ತಿದ್ದಾರೆ. ಪ್ರಾರ್ಥನೆ ಇಲ್ಲದಿದ್ದರೆ ಆಯುಧಗಳು ನಮ್ಮನ್ನು ರಕ್ಷಿಸಲು ವೈಫಲ್ಯವಾತ್ತದೆಂದು ಅವನು ಹೇಳುತ್ತಿದ್ದಾನೆ, ನಾವು ಪ್ರಾರ್ಥನೆಯನ್ನು ಧರಿಸಿಕೊಳ್ಳಬೇಕು ಮತ್ತು ಪ್ರಾರ್ಥನೆಯಲ್ಲಿ ನಿಂತುಕೊಳ್ಳಬೇಕು. ಪ್ರಾರ್ಥನೆಯ ವಿಷಯವಾದ ವಾಕ್ಯಗಳು ಮತ್ತು ಟಿಪ್ಪಣಿಗಳಿಗಾಗಿ ಆದಿ 18:32; ಕೀರ್ತನೆ 66:18; ಯೆರೆ 33:3; ದಾನಿ 10:13; ಮತ್ತಾಯ 6:5-13; 7:7-11; 26:41; ಮಾರ್ಕ 11:24,25; ಲೂಕ 11:5-13; 18:1-14; ಯೋಹಾನ 14:13; 15:7; 17:1-26; ಅಪೊ 1:14; ರೋಮಾ 8:26; 12:12; ಫಿಲಿಪ್ಪಿ 4:6; ಕೊಲೊ 4:2; 1 ಥೆಸ 5:17; ಇಬ್ರಿ 4:16; 10:19-22; ಯಾಕೋಬ 5:13,16; 1 ಪೇತ್ರ 4:7. ಸುವಾರ್ತೆಯ ಮತ್ತು ಕ್ರೈಸ್ತ ತತ್ವಗಳ ವಿಷಯವಾಗಿ ಸರಿಯಾದ ದೃಷ್ಟಿಯಿಂದಿರುವುದು, ಇದರಷ್ಟೇ ಮುಖ್ಯವಾದದ್ದು, ಸೈತಾನನ ಮೇಲೆ ಜಯಗಳಿಸಿದರೆ ಸಾಲದು. ಪ್ರಾರ್ಥನೆ ಇಲ್ಲದಿದ್ದರೆ ಸೈತಾನನ ವಿರುದ್ಧ ಆತ್ಮೀಕ ಯುದ್ಧದಲ್ಲಿ ನಮಗೆ ಆತ್ಮೀಕ ಶಕ್ತಿ ಇರುವದಿಲ್ಲ. ನಮ್ಮ ಪ್ರಾರ್ಥನೆಯು ಹೀಗಿರಬೇಕು.

*"ಆತ್ಮದಲ್ಲಿ"*– ಎಫೆ 2:18; ರೋಮಾ 8:26; ಯೂದ 1:20. ಇದರ ಅರ್ಥ ದೇವರ ಆತ್ಮನು. ನಮ್ಮನ್ನು ನಾವು ಆತನಿಗೆ ಒಪ್ಪಿಸಿಕೊಡಬೇಕು ಮತ್ತು ಪ್ರಾರ್ಥನೆಯನ್ನು ಆತನ ಮಾರ್ಗದರ್ಶನದಂತೆ ಮಾಡಬೇಕು. ನಾವು "ಎಲ್ಲಾ" ಸಂದರ್ಭಗಳಲ್ಲಿಯೂ ಎಲ್ಲಾ ರೀತಿಯ ಪ್ರಾರ್ಥನೆಗಳನ್ನು ಮಾಡಬೇಕು - ದೇವರ ಚಿತ್ತದಂತೆ ಎಲ್ಲಾ ಬೇಡಿಕೆಗಳಿಗಾಗಿ ಪ್ರಾರ್ಥಿಸಬೇಕು, ಬೇರೆಯವರಿಗೋಸ್ಕರ ಪ್ರಾರ್ಥಿಸಬೇಕು, ಕೃತಜ್ಞತೆಯ ಮತ್ತು ಸ್ತೋತ್ರದ ಪ್ರಾರ್ಥನೆ (1 ತಿಮೊ 2:1). ರಹಸ್ಯ ಪ್ರಾರ್ಥನೆ ಮತ್ತು ಬಹಿರಂಗ ಪ್ರಾರ್ಥನೆ, ಬಾಯಿಮಾತಿನ ಪ್ರಾರ್ಥನೆ ಮತ್ತು ಹೃದಯದಲ್ಲಿ ಮಾಡುವ ಪ್ರಾರ್ಥನೆ.

*"ಎಲ್ಲ ವಿಶ್ವಾಸಿಗಳಿಗೆ"*– ಎಲ್ಲ ವಿಶ್ವಾಸಿಗಳು ಈ ಆತ್ಮೀಕ ಯುದ್ಧದಲ್ಲಿ ಆತ್ಮೀಕ ವೈರಿಗಳ ವಿರುದ್ಧವಾಗಿ ಹೋರಾಡುತ್ತಿದ್ದಾರೆ ಮತ್ತು ಒಬ್ಬರಿಗೊಬ್ಬರು ಪ್ರಾರ್ಥನೆ ಮಾಡುವುದರ ಮೂಲಕ ಸಹಾಯ ಮಾಡಬೇಕು. ನಮ್ಮ ಪ್ರಾರ್ಥನೆಯಿಂದ ಬೇರೆಯರಿಗೆ ನಿಜವಾಗಿಯೂ ಸಹಾಯವಾಗುತ್ತದೋ? ಖಂಡಿತವಾಗಿ. ದೇವರು ಈ ರೀತಿಯಾಗಿ

ಯೋಜಿಸಿದ್ದಾನೆ ಮತ್ತು ಉಪಯೋಗವಿಲ್ಲದ ಕಾರ್ಯಗಳನ್ನು ಮಾಡಬೇಕೆಂದು ದೇವರು ಹೇಳುವದಿಲ್ಲ. **19,20**

**6:19,20** ನನಗೋಸ್ಕರ ಸಹ ಪ್ರಾರ್ಥನೆ ಮಾಡಿರಿ" – ರೋಮಾ 15:30; 2 ಕೊರಿಂಥ 1:11; ಫಿಲಿಪ್ಪಿ 1:19; 1 ಥೆಸ 5:25; 2 ಥೆಸ 3:1. ಪೌಲನು ಶ್ರೇಷ್ಠ ಅಪೋಸ್ತಲನು, ದೇವರಾತ್ಮನಿಂದ ತುಂಬಿಸಲ್ಪಟ್ಟವನು ಮತ್ತು ಕ್ರಿಸ್ತನ ಯಶಸ್ವಿಯುಳ್ಳ ಸೈನಿಕನು. ಸಾಧಾರಣ ವಿಶ್ವಾಸಿಗಳ ಪ್ರಾರ್ಥನೆಯು ಅವನು ಏನು ಮಾತಾಡಬೇಕೋ ಅದನ್ನು ಸರಿಯಾಗಿ ಮಾತನಾಡಲು ಅವನಿಗೆ ಸಹಾಯ ಮಾಡುತ್ತದೋ? ಹೌದು.

*"ಸುವಾರ್ತೆಯ ಸೇವೆ"*– ಅಂದರೆ ಸುವಾರ್ತೆಯು ದೇವರಿಂದ ಪ್ರಕಟವಾದದ್ದು. ಈ ಪ್ರಕಟನೆ ಇಲ್ಲದಿದ್ದರೆ ಮನುಷ್ಯರಿಗೆ ಇದು ತಿಳಿಯುತ್ತಿರಲಿಲ್ಲ.

*"ಶರೀರದ"*– ಅಪೊ 4:13,29,31; 28:31.

*"ಬೇಡಿಯಲ್ಲಿ ಬಿದ್ದಿರುವ ರಾಯಭಾರಿ"*– ಎಫೆ 3:1; 2 ಕೊರಿಂಥ 5:20. **21,22**

**6:21,22** *"ತುಖಿಕನು"*– ಅಪೊ 20:4; ಕೊಲೊ 4:7; 2 ತಿಮೊ 4:12; ತೀತ 3:12. **23**

**6:23** *"ನಂಬಿಕೆಯಿಂದ ಕೂಡಿದ ಪ್ರೀತಿ"*– ಪ್ರೀತಿಯು ನಿಜವಾದ ನಂಬಿಕೆಯೊಂದಿಗೆ ಕೂಡಿರುತ್ತದೆ (ಗಲಾ 5:6). ಪ್ರೀತಿ ಮತ್ತು ನಂಬಿಕೆ ಇವೆರಡರ ಮೂಲವು ತಂದೆಯಾದ ದೇವರೊಂದಿಗೆ ಕರ್ತನಾದ ಯೇಸುವಾಗಿದ್ದಾನೆ. **24**

**6:24** ನಿಜವಾದ ಎಲ್ಲ ವಿಶ್ವಾಸಿಗಳು ಕ್ರಿಸ್ತನನ್ನು ಪ್ರಾಮಾಣಿಕವಾಗಿ ಪ್ರೀತಿಸುತ್ತಾರೆ (1 ಕೊರಿಂಥ 16:22; 1 ಯೋಹಾನ 4:8). ಗ್ರೀಕ್ ಭಾಷೆಯಿಂದ ಭಾಷಾಂತರಗೊಂಡ "ಪ್ರಮಾಣಿಕತೆ" ಇಲ್ಲಿ ಅದರ ಅರ್ಥ "ನಿಷ್ಕಪಟವಾದ" ಮತ್ತು 1 ಕೊರಿಂಥ 15:42,50,53,54 ರಲ್ಲಿ ವಿಶ್ವಾಸಿಗಳು ಹೊಂದಿಕೊಳ್ಳುವ ಪುನುರುತ್ಥಾನದ ದೇಹಕ್ಕೆ ಇದೇ ಪದವನ್ನು ಉಪಯೋಗಿಸಲಾಗಿದೆ. ದೇವರು ತನ್ನ ಜನರ ಹೃದಯದಲ್ಲಿ ನೆಡುವ ಪ್ರೀತಿಯು ದೈವಿಕವಾದದ್ದು ಮತ್ತು ಶಾಶ್ವತವಾದ ಪ್ರೀತಿಯಾಗಿದೆ (1 ಕೊರಿಂಥ 13:1), ಆದ್ದರಿಂದ ಅದು ನಿಷ್ಕಪಟವಾದ, ಕೆಡಿಸಲಾಗದ, ಸಾವಿಲ್ಲದ ಪ್ರೀತಿಯಾಗಿದೆ.
**********************************************************
**************** 9